

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 46 ನವಂಬರ್ 10-16, 1997 ಬೆಲೆ ರೂ. 2.00

ಅಧಿಕಾರ ದಾಹ: ಬಿಜೆಪಿಯ ಒಂದಂಶದ ಕಾರ್ಯಕ್ರಮ -ಸುರ್ಜಿತ್

ಉತ್ತರಪ್ರದೇಶದಲ್ಲಿನ ಪ್ರಯೋಗದ ಯಶಸ್ಸಿನಿಂದ ಬೀಗುತ್ತಿರುವ ಬಿಜೆಪಿಯ ಮುಖಂಡರೀಗ ಅದನ್ನು ಗುಜರಾತಿನಲ್ಲಿ ಹಾಗೂ ಕೇಂದ್ರದಲ್ಲಿ ಪುನರಾವರ್ತನೆಗೊಳಿಸುವ ಹವಣಿಕೆಯಲ್ಲಿದ್ದಂತಿದೆ. ಕೋಮುವಾದಿ ಶಕ್ತಿಗಳೊಂದಿಗೆ ರಾಜೀ ಮಾಡಿಕೊಳ್ಳುತ್ತಾ ಬಂದ ನೀತಿಗಳ ಪರಿಣಾಮವಾಗಿ ಕಾಂಗ್ರೆಸ್ಸಿನೊಳಗೆ ಉಂಟಾಗಿರುವ ಅವನತಿಯ ಪ್ರಯೋಜನ ಪಡೆದು ಕೇಂದ್ರದಲ್ಲಿ ಜನಾದೇಶವಿಲ್ಲದೆಯೇ ಅಧಿಕಾರ ಗಿಟ್ಟಿಸುವ ಹಂಚಿಕೆಯನ್ನು ಬಿಜೆಪಿ ನಡೆಸಿದೆ. ಇದು ದೇಶದ ಧರ್ಮ ನಿರಪೇಕ್ಷ ಶಕ್ತಿಗಳಿಗೊಂದು ದೊಡ್ಡ ಸವಾಲು ಎಂದು ಸಿಪಿಐ(ಎಂ) ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಈ ಪ್ರಕ್ರಿಯೆಯಲ್ಲಿ ಬಿಜೆಪಿಯ ವಿಶ್ವಾಸಾರ್ಹತೆ ಅವರು ಸದಾ ಡಂಗುರ ಹೊಡೆಯುತ್ತಿದ್ದ ನೈತಿಕ ಮೌಲ್ಯಗಳು, ತಾನೊಂದು ಭಿನ್ನ ರೀತಿಯ ಪಕ್ಷ ಎಂಬ ಹೆಮ್ಮೆ ಎಲ್ಲವು ಮಣ್ಣು ಪಾಲಾದರೇನಂತೆ! ಏನಕೇನ ಪ್ರಕಾರೇಣ ಅಧಿಕಾರ ದಾಹ ತೀರಿಸಿಕೊಂಡರಾಯಿತು. ಅದೇ ಈಗ ಈ ಪಕ್ಷದ ಏಕಾಂಶ ಅಜೆಂಡಾ ಎಂದು ಸುರ್ಜಿತ್ ಅವರು ವರ್ಣಿಸಿದ್ದಾರೆ.

ಕಾಂಗ್ರೆಸ್ ಪಕ್ಷದೊಳಗೆ ಧರ್ಮ ನಿರಪೇಕ್ಷತೆ ಹಾಗೂ ದೇಶಪ್ರೇಮದ ಮೌಲ್ಯಗಳು ಹ್ರಾಸಗೊಂಡಿರುವುದು ಬಿಜೆಪಿಯ ಈ ಅಧಿಕಾರ ದಾಹಕ್ಕೆ ಪುಟಕ್ಕೊಟ್ಟಿದೆ. ಉತ್ತರ ಪ್ರದೇಶದ ಘಟನೆಗಳು ಇದನ್ನು ಎತ್ತಿ ತೋರಿವೆ. ಕಾಂಗ್ರೆಸಿನ ಹಲವು ಚುನಾಯಿತ ಪ್ರತಿನಿಧಿಗಳಿಗೆ ಧರ್ಮ ನಿರಪೇಕ್ಷತೆ ಮತ್ತು ಕೋಮುವಾದದ ನಡುವೆ ವ್ಯತ್ಯಾಸವೇ ಉಳಿದಂತಿಲ್ಲ. ಕಾಂಗ್ರೆಸ್ ಕೋಮುವಾದದೊಂದಿಗೆ ರಾಜಿ ಮಾಡಿಕೊಳ್ಳುತ್ತಾ ಬಂದ ನೀತಿಗಳ ಪರಿಣಾಮವೇನಾಗಿದೆ ಎಂದರೆ ಧರ್ಮ ನಿರಪೇಕ್ಷತೆ ಮತ್ತು ಕೋಮುವಾದದ ನಡುವಿನ ಗೆರೆಯನ್ನು ಫಾಸಿಸ್ಟ ಮಾದರಿಯ ಸಿದ್ಧಾಂತ ಹೊಂದಿರುವ ಕೋಮುವಾದಿ ಪಕ್ಷವನ್ನು ಬೆಂಬಲಿಸಲು ಕಾಂಗ್ರೆಸ್ ಶಾಸಕರಿಗೆ ಯಾವ ಮುಜುಗರವೂ ಅನಿಸುತ್ತಿಲ್ಲ ಎಂದು ಸುರ್ಜಿತ್ ಖೇದ ವ್ಯಕ್ತಪಡಿಸಿದ್ದಾರೆ. ಕೆಲವು ಕಾಂಗ್ರೆಸ್ಸಿಗರಿಗಂತೂ ಅಧಿಕಾರವಿಲ್ಲದೆ ಬಹಳ ಇರಿಸುಮುರಿಸು ಅನಿಸುತ್ತಿದೆ. ಹೇಗಾದರೂ ಕೇಂದ್ರದ ಸಂಯುಕ್ತ ರಂಗವನ್ನು ಸೇರಬೇಕೆಂದು ಅವರು ಒತ್ತಡ ಹಾಕುತ್ತಿದ್ದಾರೆ. ಕೆಲವರಂತೂ ಇಷ್ಟೊಂದು ದೀರ್ಘಕಾಲ ಅಧಿಕಾರವಿಲ್ಲದೆ ಕಾಂಗ್ರೆಸ್ಸಿಗರು ಇರಲು ಹೇಗೆ ಸಾಧ್ಯ ಎಂದು ಬಹಿರಂಗವಾಗಿಯೇ ಕೇಳುತ್ತಿದ್ದಾರೆ. ಈ ಪರಿಸ್ಥಿತಿಯ ಪ್ರಯೋಜನ ಪಡೆದು ಕೇಂದ್ರದಲ್ಲಿ ಜನಾದೇಶ ವಿಲ್ಲದೆಯೇ ಅಧಿಕಾರ ಗಿಟ್ಟಿಸುವ ಹಂಚಿಕೆ, ತಂತ್ರಗಳಲ್ಲಿ ಬಿಜೆಪಿ ತೊಡಗಿದೆ.

ಅಡ್ವಾನಿ, ವಾಜಪೇಯಿ, ಜೋಶಿಗಳು ಕೇಂದ್ರದಲ್ಲಿ ಪುನರಾವರ್ತನೆಗೊಳಿಸಬಯಸುವ "ಉತ್ತರಪ್ರದೇಶ ಪ್ರಯೋಗದ" ಸ್ವರೂಪವಾದರೂ ಏನು? ಕಾಂಗ್ರೆಸ್, ಬಿ.ಎಸ್.ಪಿ ಹಾಗೂ ಜನತಾದಳದಿಂದ ಸಾಮೂಹಿಕ ಪಕ್ಷಾಂತರಗಳನ್ನು ಏರ್ಪಡಿಸಿ ಅವರಲ್ಲಿ ಪ್ರತಿಯೊಬ್ಬರಿಗೂ ಮಂತ್ರಿ ಸ್ಥಾನಗಳನ್ನು (ಬಹುಶಃ ಇತರ ಆಮಿಷಗಳ ಜೊತೆಗೆ) ನೀಡಿ ದೇಶದ ಈ ಬೃಹತ್ ರಾಜ್ಯದ ಇತಿಹಾಸದಲ್ಲೇ ಅತಿ ದೊಡ್ಡದಾದ 93 ಸದಸ್ಯರುಳ್ಳ ಮಂತ್ರಿ ಮಂಡಲವನ್ನು ರಚಿಸಿತು. ಆದರೂ ಮಂತ್ರಿ ಮಂಡಲ ರಚನೆಯ ಸಮಸ್ಯೆ ಬಗೆಹರಿದಿಲ್ಲ. ನಿಮಗೆ ನೆನಪಿದೆಯೇ? **ಕಳೆದ ವರ್ಷ ಕೇಂದ್ರದಲ್ಲಿ 13 ದಿನಗಳ ಸೋಜಿಗವೆನಿಸಿದ ಸರ್ಕಾರದ ನೇತೃತ್ವ ವಹಿಸಿದ್ದ ವಾಜಪೇಯಿ ವಿಶ್ವಾಸಮತ ಯಾತನೆ ಚರ್ಚೆಗೆ ಉತ್ತರಿಸುತ್ತಾ ತಾನು ಪಕ್ಷಾಂತರಗಳ ಆಧಾರದಲ್ಲಿ ಆಳಲು ಸಿದ್ಧನಿಲ್ಲ ಎಂದು ಗುಡುಗಿದ್ದರು!** ಅಷ್ಟೇ ಅಲ್ಲ ಉತ್ತರಪ್ರದೇಶದಲ್ಲಿ ವಿಶ್ವಾಸ ಮತ ಯಾಚನೆ ಹಿಂದಿನ ದಿನ ಕೂಡಾ ಬಿಜೆಪಿ ವಕ್ತಾರ ಯಶವಂತ ಸಿನ್ಹಾ ಇದನ್ನು ಪುನರುಚ್ಚರಿಸಿದ್ದರು. ಆದರೆ ನಿಜವಾಗಿ ನಡೆದದ್ದೇನು? ಆ ಮಾತುಗಳೆಲ್ಲಾ ಕೇವಲ ಕೈಲಾಗದವರ ಸೋಗಿನ ಮಾತುಗಳೇ? "**ವಾಜಪೇಯಿ ಸೋತಿದಲ್ಲಿ ಕಲ್ಯಾಣ್‌ಸಿಂಗ್ ಗೆದ್ದಿದ್ದಾರೆ" ಎಂದು ವರ್ಣಿಸಿರುವ ಸುರ್ಜಿತ್ ರವರು ಕಲ್ಯಾಣ್ ಸಿಂಗ್** ರ ಈ 'ಉತ್ತರಪ್ರದೇಶದ ಪ್ರಯೋಗ'ದ ಎದುರು ಈಗ ವಿಚಾರಣೆಗೊಳಗಾಗಿರುವ ಜೆಎಂಎಂ ಲಂಚ ಹಗರಣ ಪುಟಗೋಸಿಯಾಗಿ ಬಿಟ್ಟಿದೆ ಎಂದಿದ್ದಾರೆ.

ಕೇವಲ ಪಕ್ಷಾಂತರವೇ ಅಲ್ಲ, ಎಲ್ಲಾ ಪಕ್ಷಾಂತರಿಗಳಿಗೆ ಮಂತ್ರಿ ಸ್ಥಾನ ನೀಡಿದ್ದೇ ಅಲ್ಲ, ಬಿಜೆಪಿ "ಪ್ರಜಾಪ್ರಭುತ್ವವನ್ನು ಉಳಿಸಲು" ಡಕಾಯಿತರ, ಕೊಲೆ ಆಪಾದಿತರ, ಅಪಹರಣದ ಆಪಾದಿತರ ನೆರವು ಪಡೆಯಲೂ ಹಿಂದೆ ಮುಂದೆ ನೋಡಿಲ್ಲ. ಈ ಗಜಗಾತ್ರದ ಬಿಜೆಪಿ ಸಂಪುಟದಲ್ಲಿ ಹೊಸದಾಗಿ ಸೇರಿಸಲ್ಪಟ್ಟ ಮಂತ್ರಿಗಳಲ್ಲಿ 33 ಮಂದಿ ವಿವಿಧ ಕ್ರಿಮಿನಲ್ ಆಪಾದನೆಗಳನ್ನು ಎದುರಿಸುತ್ತಿರುವವರು. ಪಕ್ಷಾಂತರಿ ಮಂತ್ರಿಗಳು ಮಾತ್ರವಲ್ಲ ಬಿಜೆಪಿ ಮಂತ್ರಿಗಳಲ್ಲಿಯೂ ಇಂತಹವರ ಸಂಖ್ಯೆ ಸಾಕಷ್ಟಿದೆ. ಇವನ್ನೆಲ್ಲಾ ಸಮರ್ಥಿಸಿಕೊಳ್ಳಲು ಅಡ್ವಾಣಿ, ವಾಜಪೇಯಿ, ಕಲ್ಯಾಣ್ ಸಿಂಗ್, ರಾಜ್‌ನಾಥ್ ಮಿಶ್ರಾಗಳು ಏನೆಲ್ಲಾ ಕಸರತ್ತುಗಳನ್ನು, ವಾಕ್ಚಾತುರ್ಯಗಳನ್ನು ಬಳಸುತ್ತಿದ್ದರೂ ಬಿಜೆಪಿಯ ನಿಜ ಹೂರಣವಂತೂ ಬಯಲಾಗಿದೆ. ಬಿಜೆಪಿಯ ನೈತಿಕ ಔನ್ನತ್ಯದ ಮಾತುಗಳನ್ನು ನಂಬಿದ್ದವರು ಈಗ ಹತಾಶರಾಗಿದ್ದಾರೆ. ಇಂತಹ ಒಂದು 'ಪ್ರಯೋಗ'ವನ್ನು ಬಿಜೆಪಿ ಕೇಂದ್ರದಲ್ಲೂ ಪುನರಾವರ್ತನೆಗೊಳಿಸಲು ಬಯಸುತ್ತಿರುವುದಾದರೆ ದೇಶದ ಧರ್ಮನಿರಪೇಕ್ಷ ಬುನಾದಿಗೆ,

ಪುಟ 6 ನೋಡಿ

ಕೃಷ್ಣಾ ಮೇಲ್ದಂಡೆ ಯೋಜನೆಯ ಗುತ್ತಿಗೆ ಕಾಮಗಾರಿ ಅವ್ಯವಹಾರ ವಿಚಾರಣೆಯಾಗಲಿ

ಎನ್.ಕೆ.ಉಪಾಧ್ಯಾಯ

ಕೃಷ್ಣನದಿ ನೀರಿನಲ್ಲಿ ರಾಜ್ಯದ ಪಾಲನ್ನು ಸರಿಯಾಗಿ ಬಳಸಿಕೊಳ್ಳುವ ಸಲುವಾಗಿ ಕೃಷ್ಣ ಮೇಲ್ದಂಡೆ ಯೋಜನೆ ಅಂದರೆ ಆಲಮಟ್ಟಿ ಆಣೆಕಟ್ಟು ಮತ್ತು ಕಾಲುವೆ-ಉಪಕಾಲುವೆಗಳ ಕಾಮಗಾರಿಯನ್ನು 2000 ಇಸವಿಯೊಳಗೆ ಪೂರ್ಣಗೊಳಿಸುವ ತುರ್ತು ಅವಶ್ಯಕತೆಯಿದೆ. 1964 ರಿಂದಲೂ ಸರಕಾರಗಳ ನಿರ್ಲಕ್ಷ್ಯದಿಂದಾಗಿ ವಿಳಂಬವಾಗುತ್ತಾ ಬಂದಿತ್ತು. ಸ್ವಲ್ಪಮಟ್ಟಿಗೆ ಹಣದ ಕೊರತೆಯೂ ಕಾರಣವಾಗಿರಬಹುದು. ಪ್ರಾರಂಭದಿಂದ ಈ ಯೋಜನೆಗೆ ಪ್ರಾಧಾನ್ಯತೆ ಕೊಟ್ಟಿದ್ದರೆ ಯೋಜನೆಗೆ ಬೇಕಾದ ಸಂಪನ್ಮೂಲದ ಅಭಾವ ಉಂಟಾಗುತ್ತಿರಲಿಲ್ಲ. ಹೋದ ಚುನಾವಣೆಯ ನಂತರ ದೇವೇಗೌಡರು ಮುಖ್ಯಮಂತ್ರಿಯಾದ ನಂತರ ಈ ಯೋಜನೆಗೆ ಜೀವಕಳೆ ಬಂತು. ತಮ್ಮ ಹೊಸ ನೀರಾವರಿ ಯೋಜನೆಗಳಿಗೆ ಆಂಧ್ರ ಸರಕಾರ ತಮ್ಮ ಪಾಲಿಗಿಂತ ಹೆಚ್ಚಿನ ನೀರಿಗಾಗಿ ಒತ್ತಾಯಿಸುತ್ತಿದ್ದಾಗ 2000 ಇಸವಿಯೊಳಗೆ ಕರ್ನಾಟಕದ ಪಾಲಿನ ನೀರನ್ನುಪಯೋಗಿಸದಿದ್ದರೆ ನಮ್ಮ ಪಾಲಿನ ನೀರಿಗೆ ಆಂಧ್ರ ಪ್ರತಿಪಾದಿಸಬಹುದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯನ್ನೊಳಗೊಂಡು ಇತರ ರಾಜಕೀಯ ಪಕ್ಷಗಳು, ಸಂಘ ಸಂಸ್ಥೆಗಳ ತರ್ಕವನ್ನೊಪ್ಪಿಕೊಂಡ ದೇವೇಗೌಡರು ಈ ಶತಮಾನದೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸುವ ನಿರ್ಧಾರ ಕೈಗೊಂಡರು. ವಿಶ್ವ ಬ್ಯಾಂಕಿನ ಸಾಲ, ರಾಜ್ಯ ಸರ್ಕಾರದ ಬಜೆಟ್‌ನಿಂದ ಹಣಸಂದಾಯ, ಹಾಗೆಯೇ ಕೃಷ್ಣಾ ಜಲ ನಿಗಮದ ಮೂಲಕ ಹಣ ಸಂಗ್ರಹಿಸಿ ಯೋಜನೆಯನ್ನು ಪೂರ್ಣಗೊಳಿಸುವತ್ತ ದೃಢ ಪ್ರಯತ್ನ ನಡೆಯಿತು. ಅಡ್ಡಿ ಆತಂಕಗಳನ್ನೆಲ್ಲಾ ಬದಿಗೊತ್ತಿ ಕೆಲಸ ಮುಂದುವರಿದಿದೆ. ಆಂಧ್ರ ಸರಕಾರದ ಒತ್ತಡ, ಕೋರ್ಟುಗಳ ತಡೆಯಾಜ್ಞೆ ಎದುರಿಸಬೇಕಾಗಬಹುದೆಂಬ ಭೀತಿಯಿಂದಲೋ ಏನೋ ಕೃಷ್ಣಾ ಮೇಲಂಡೆ ಯೋಜನೆಯ ಕಾಮಗಾರಿ ಕಾಲುವೆ ಕೆಲಸಗಳನ್ನು ತುಂಡು ಗುತ್ತಿಗೆ ಕೆಲಸವನ್ನಾಗಿ ಪರಿವರ್ತಿಸಿ, ಹಲವಾರು ಕಂಟ್ರಾಕ್ಟರುಗಳಿಗೆ ಕೆಲಸ ಹಂಚಿಕೊಡುವ ಕ್ರಮ ನಡೆಸಲಾಯಿತು. ದೇವೇಗೌಡರು ಮುಖ್ಯಮಂತ್ರಿಯಾಗಿದ್ದ ಅವಧಿಯ ಕೊನೆ ದಿನಗಳಲ್ಲಿ ಈ ಕೆಲಸಗಳನ್ನು ತುಂಡು ಗುತ್ತಿಗೆಗೆ ನೀಡಲಾಗಿದೆ. 350 ಕ್ಕೂ ಹೆಚ್ಚು ಇಂಥ ಪ್ರಕರಣಗಳಿವೆ. ಇವುಗಳ ಪೈಕಿ 70 ಪ್ರಕರಣಗಳಲ್ಲಿ ರೂ. ಎರಡೂವರೆ ಕೋಟಿ ಬದಲಾಗಿ ರೂ. ಐದುಕೋಟಿಗೂ, ಇನ್ನೂ ಕೆಲವು ಪ್ರಕರಣಗಳಲ್ಲಿ ರೂ. ಎರಡೂವರೆ ಕೋಟಿಯಿಂದ ರೂ. 16.5 ಕೋಟಿ ಗೆ ಹೆಚ್ಚಿಸಲಾಗಿದೆಯೆಂಬ ದೂರುಗಳಿವೆ. ಈ ಕೆಲಸಗಳೆಲ್ಲಾ ಕಳಪೆಯಾಗಿವೆ. ಗುಣಮಟ್ಟ ಉಳಿಸಿಕೊಂಡಿಲ್ಲ. ಬಿಜಾಪುರ ಜಿಲ್ಲಾ ರೈತ ಸಂಘದವರು ಎತ್ತಿತೋರಿಸಿದಂತೆ ಹಲವಾರು ಕಡೆ ಈ ಕಳಪೆ ಕಾಮಗಾರಿಗಳಿಂದ ಅಪಾಯ ಉಂಟಾಗಬಹುದಾಗಿದೆ.

ನಾಲೆ ಕೆಲಸಗಳನ್ನು ಹಾಗೆಯೇ ಇತರ ಕೆಲವು ತರದ ಕೆಲಸಗಳನ್ನೆಲ್ಲ ಟೆಂಡರ್ ಮೂಲಕವೇ ಕೊಡುವುದರಿಂದ ವಿಳಂಬವಾಗುತ್ತದೆ. ಕೆಲಸ ಬೇಗ ಮುಗಿಸಬೇಕಾಗಿರುವುದರಿಂದ ಕಾಮಗಾರಿಗಳನ್ನು ತುಂಡು ಗುತ್ತಿಗೆದಾರರಿಗೆ ಒಪ್ಪಿಸಿದರೆ ತಪ್ಪೇನಿಲ್ಲ, ಆದರೆ ಅಂಥ ತುಂಡು ಗುತ್ತಿಗೆದಾರರು ಕೈಗೊಳ್ಳುವ ಕೆಲಸದ ಗುಣಮಟ್ಟ ಮತ್ತು ಅದರ ಒಟ್ಟು ಖರ್ಚಿನ ಪೂರ್ಣ ಅಂದಾಜು ಅಗತ್ಯ. ಇದರ ಕುರಿತು ವಿವರಣೆ ಬೇಕು. ತಮ್ಮ ಮುಖ್ಯಮಂತ್ರಿ ಪದದ ಕೊನೆದಿನಗಳಲ್ಲಿ ಈತುಂಡು ಗುತ್ತಿಗೆ ಕೆಲಸ ಪ್ರಾರಂಭವಾಗಿರುವುದರಿಂದ ದೇವೇಗೌಡರ ಕುರಿತು ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ. ತುರ್ತಾಗಿ ಮುಗಿಸಬೇಕಾದ ಕೃಷ್ಣಾ ಮೇಲ್ದಂಡೆಯೋಜನೆಯ ಕೆಲಸಗಳನ್ನು ಮುಖ್ಯವಾಗಿ ಕಾಲುವೆ ಕೆಲಸಗಳನ್ನು ಜಲಾಶಯದ ಕೆಲಸ ಮುಗಿಯುತ್ತಿದ್ದಂತೆಯೇ ಯಾವ ರೀತಿ ಮುಗಿಸಬೇಕೆಂಬುದರ ಕುರಿತು ಸಂಬಂಧಪಟ್ಟ ಇಂಜಿನಿಯರುಗಳು ಹಾಗೆಯೇ ನೀರಾವರಿ ಮಂತ್ರಿ, ಮುಖ್ಯಮಂತ್ರಿಗಳು ಸೇರಿ ನಿರ್ಧರಿಸಿದರೆ ತಪ್ಪೇನಿಲ್ಲ. ಕೆಲವು ಸಲ ಅದು ರಾಜಕೀಯ ನಿರ್ಣಯವಾಗುತ್ತದೆ. ಆ ದೃಷ್ಟಿಯಲ್ಲಿ ಮುಖ್ಯಮಂತ್ರಿ ದೇವೇಗೌಡರ ಮಧ್ಯ ಪ್ರವೇಶವಲ್ಲಿ ತಪ್ಪೇನಿಲ್ಲ. ಮುಂದೆ ದೇವೇಗೌಡರು ಪ್ರಧಾನ ಮಂತ್ರಿಯಾದರು. ಈ ತುಂಡು ಗುತ್ತಿಗೆಗಳ ಕುರಿತು ದೇವೇಗೌಡರ ಮೇಲಿನ ಅಪವಾದ ಪತ್ರಿಕೆಗಳಲ್ಲಿ ಸಾಕಷ್ಟು ಪ್ರಚಾರ ಪಡೆದಾಗ ದೇವೇಗೌಡರು ಸ್ವತಃ ಈ ಅವ್ಯವಹಾರಗಳ ಕುರಿತು ವಿಚಾರಣೆ ನಡೆಸುವಂತೆ ಜೆ.ಎಚ್.ಪಟೇಲರನ್ನು ಕೇಳಿಕೊಂಡಿದ್ದರು., ರಾಷ್ಟ್ರಮಟ್ಟದಲ್ಲಿ ಜನತಾದಳ ಅಧ್ಯಕ್ಷರ ಚುನಾವಣೆ ನಡೆಯುವ ಸಂದರ್ಭದಲ್ಲಿ (ಆಗ ದೇವೇಗೌಡರು ಪ್ರಧಾನ ಮಂತ್ರಿಯಾಗಿರಲಿಲ್ಲ) ಕೇಂದ್ರ ಜವಳಿ ಖಾತೆ ಸಚಿವರಾದ ಆರ್.ಎಲ್.ಜಾಲಪ್ಪನವರು ಜನತಾದಳದ ಅಧಿಕೃತ ಅಭ್ಯರ್ಥಿಯ ವಿರುದ್ಧ ಮತ ಹಾಕಲು ಮುಂದಾಗಿದ್ದರು. ಜನತಾದಳದಿಂದ ಸಿಡಿದಿದ್ದ ಲಲ್ಲೂಪ್ರಸಾದ್ ಯಾದವ್ ಅವರ ಪರ ವಾದಿಸಲಾರಂಭಿಸಿ, ದೇವೇಗೌಡರ ಈ ತುಂಡು ಕಾಮಗಾರಿ ಮಂಜೂರಾತಿ ಕುರಿತು ಆಕ್ಷೇಪವೆತ್ತಿದ್ದರು. ಜನತಾದಳದ ಒಬ್ಬ ಕೇಂದ್ರ ಸರ್ಕಾರದ ಕ್ಯಾಬಿನೆಟ್‌ಮಂತ್ರಿ ಈ ರೀತಿ ಆರೋಪ ಹೋರಿಸಿದ್ದು ಮೊನ್ನೆ ನಡೆದ ಜನತಾದಳದ ಕಾರ್ಯಕಾರಿ ಸಮಿತಿಯಲ್ಲಿ ಗೊಂದಲ ಎಬ್ಬಿಸಿತ್ತು. ಬೆಂಗಳೂರಲ್ಲಿದ್ದೂ ಆರ್.ಎಲ್.ಜಾಲಪ್ಪ ಮತ್ತು ದೇವೇಗೌಡರು ಅದರಲ್ಲಿ ಭಾಗವಹಿಸಲಿಲ್ಲ. ಸಭೆಯ ನಂತರ ಅಧ್ಯಕ್ಷರಾದ ಬಿ.ಎಲ್.ಶಂಕರ್ ಅವರು ದೇವೇಗೌಡರ ಮೇಲಿನ ಆರೋಪಗಳೆಲ್ಲ ಸುಳ್ಳು ಎಂದು ಹೇಳುತ್ತಿದ್ದಂತೆಯೇ ಆರ್.ಎಲ್.ಜಾಲಪ್ಪನವರು ಮಾಡಿರುವ ಆರೋಪಗಳ ಕುರಿತು ಒಪ್ಪಂದ ಸಾಧಿಸಲು ಭಾರೀ ನೀರಾವರಿ ಮಂತ್ರಿ ನಾಗೇಗೌಡರನ್ನೊಳಗೊಂಡ ಮೂವರ ಸಮಿತಿ ರಚಿಸಲಾಗಿದೆಯೆಂದು ಹೇಳಿದರು. ನಾಲಾ ಕಾಮಗಾರಿ ಗುತ್ತಿಗೆ ನೀಡುವಲ್ಲಿ ಅವ್ಯವಹಾರದ ಆಪಾದನೆಯನ್ನು ಸಾರಾಸಗಟಾಗಿ ತಳ್ಳಿ ಹಾಕಿದ ಬಿ.ಎಲ್.ಶಂಕರ್ ಮತ್ತು ನಾಗೇಗೌಡರು ಯಾವ ರೀತಿಯ ತನಿಖೆಯೂ ಅಗತ್ಯವಿಲ್ಲೆಂದು ಹೇಳುತ್ತಾ ಸಂಧಾನದ ಸೂಚನೆಯನ್ನು ಯಾಕೆ ಮುಂದಿಟ್ಟಿದ್ದಾರೆಂಬುದು ನಿಗೂಢ ಪ್ರಶ್ನೆಯಾಗಿದೆಯಲ್ಲವೇ? ಆರ್.ಎಲ್.ಜಾಲಪ್ಪನವರು ಈ ಸಂಧಾನದ ಸೂಚನೆಯನ್ನು ತಿರಸ್ಕರಿಸಿದ್ದಾರೆ. ಸಿಬಿಐ ತನಿಖೆ ನಡೆಸಬೇಕೆಂದು ಮತ್ತೆ ಒತ್ತಾಯಿಸಿದ್ದಾರೆ. ಯಾವ ತರದ ತನಿಖೆಯನ್ನಾದರೂ ಎದುರಿಸಲು ತಾನು ಸಿದ್ಧನಿದ್ದೇನೆಂದು ದೇವೇಗೌಡರೇ ಬಹಿರಂಗ ಹೇಳಿಕೆ ನೀಡಿರುವಾಗ ಜನತಾದಳ ಸರಕಾರ ಮತ್ತು ಜನತಾದಳದ ಹಿರಿಯ ನಾಯಕರು ಇದರ ಕುರಿತು ವಿಚಾರಣೆ ನಡೆಸಲು ಹಿಂದೇಟು ಹಾಕುತ್ತಿರುವುದು ಸರಿಯಲ್ಲ. ಇಂಥ ಭ್ರಷ್ಟಾಚಾರದ ಕುರಿತು ವಿಚಾರಣೆಯಾಗದಿದ್ದರೆ ವಿಚಾರಣೆಯ ನಿರ್ಣಯ ಸಾರ್ವಜನಿಕರಿಗೆ ಗೊತ್ತಾಗದಿದ್ದರೆ, ದೇವೇಗೌಡರ ಮೇಲಿನ ಭ್ರಷ್ಟಾಚಾರದ ಆರೋಪ ಗುಮಾನಿಯಾಗಿಯೇ ಶಾಶ್ವತ ಉಳಿದು ಅವರ ಜೀವನ ಚರಿತ್ರೆಯ ಮೇಲೆ ಕೆಟ್ಟ ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ. ಜನರಲ್ಲಿ ಮೂಡಿರುವ ಸಂಶಯ ನಿವಾರಣೆಯಾಗಬೇಕಾದರೆ ಸರಕಾರ ಕೂಡಲೇ ವಿಚಾರಣೆ ನಡೆಸುವುದು ಅತ್ಯಗತ್ಯ. ಅದು ಯಾವ ತರದ ವಿಚಾರಣೆ ಎಂಬುದನ್ನು ಸರಕಾರ ನಿರ್ಧರಿಸಲಿ. ವಿಚಾರಣಾ ಆಯೋಗವನ್ನು ನೇಮಿಸಿ, ಅದರ ವರದಿ ಪ್ರಕಟವಾಗುವ ತನಕ ದೇವೇಗೌಡರ ಮೇಲಿನ ಆಪಾದನೆ ಹಾಗೆಯೇ ಸರಕಾರದ ಧೋರಣೆಯ ಕುರಿತು ಸಂಶಯ ಜೀವಂತ ಉಳಿಯುವುದರಲ್ಲಿ ಸಂಶಯವಿಲ್ಲ. ಸರಿಯಾದ ವಿಚಾರಣೆ ಆಗಬೇಕೆಂದು ನಾವೂ ಕೇಳಿಕೊಳ್ಳುತ್ತೇವೆ.

ಅಲಿಡಾ 'ಚೆ' ಗುವಾರ ರಿಗೆ ಭಾವನಾತ್ಮಕ ಸ್ವಾಗತ ಧೀರ ಕ್ಯೂಬಾದ ಬಗೆಗಿನ ಮೆಚ್ಚುಗೆಯ ಅಭಿವ್ಯಕ್ತಿ



"ನಿಮಗೆ ಧನ್ಯವಾದ ಹೇಳಲು ನನ್ನಲ್ಲಿ ಪದಗಳಿಲ್ಲ. ಸ್ಪಾನೀಶ್‌ನಲ್ಲಿ ಗ್ರಾಸಿಯಾಸ್ (ಧನ್ಯವಾದಗಳು ನಿಮಗೆ) ಎನ್ನುತ್ತೇನೆ. ನಿಮ್ಮ ಪ್ರೀತಿ ಆದರದ ಅಭಿಮಾನಗಳು ನನ್ನಲ್ಲಿ ಪದಗಳಿಗೂ ಸಿಗದ ಭಾವನೆಗಳ ಬುಗ್ಗೆ ಉಕ್ಕಿಸಿದೆ" ಎಂದು ಡಾ.ಅಲಿಡಾ ಗುವಾರ ಮಾತನಾರಂಭಿಸುತ್ತಿದ್ದಂತೆ ಕಿಕ್ಕಿರಿದು ನೆರೆದಿದ್ದ ಎಲ್ಲರ ಹೃದಯ ತುಂಬಿ ಬಂದ ಅನುಭವ. ಕೊರಳಲ್ಲೆಲ್ಲಾ ತುಂಬಿಕೊಂಡಿದ್ದ ಹೂಹಾರಗಳು ಬಾಂಧವ್ಯದ ಬೆಸುಗೆಯ ಕಂಪು ಸೂಸುತ್ತಿದ್ದವು. ಅಪ್ರತಿಮ ಕ್ರಾಂತಿಕಾರಿ ಚೆ ಹುತಾತ್ಮರಾಗಿ ಈಗ ಮೂವತ್ತು ವರ್ಷಗಳು. ಚೆ ಯವರ ಹೋರಾಟ, ಬದುಕು, ಚಿಂತನೆಗಳನ್ನು ಸ್ಮರಿಸುವ ಹಾಗೂ ಅಮೇರಿಕಾ ಸಾಮ್ರಾಜ್ಯಶಾಹಿಯ ಕ್ರೂರ ದಿಗ್ಬಂಧನವನ್ನು 38 ವರ್ಷಗಳಿಂದಲೂ ಎದುರಿಸಿ ಕ್ರಾಂತಿ ರಕ್ಷಿಸಿಕೊಂಡು ಬಂದಿರುವ ಸಮರಧೀರ ಕ್ಯೂಬಾಕ್ಕೆ ಸೌಹಾರ್ದತೆ ಬಯಸಿ ಚೆ ಅವರ ಮಕ್ಕಳು ಡಾ.ಅಲಿಡಾ ಕಳೆದ ಅಕ್ಟೋಬರ್ 26 ರಿಂದ ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ. ಕೊಚ್ಚಿನ್‌ನಿಂದ ಹೈದರಾಬಾದ್‌ಗೆ ತೆರಳು ಮಾರ್ಗದಲ್ಲಿ ನವೆಂಬರ್ 1 ರಂದು ಬೆಂಗಳೂರಿಗೆ ಆಗಮಿಸಿದ್ದಾಗ ಸೆನೆಟ್ ಹಾಲ್‌ನಲ್ಲಿ ಸಮಾರಂಭ ಏರ್ಪಡಿಸಲಾಗಿತ್ತು. ಅವರು ವಿಮಾನ ನಿಲ್ದಾಣದಲ್ಲಿ ಹಾಗೂ ಸೆನೆಟ್ ಹಾಲ್‌ಗೆ ಆಗಮಿಸುವಾಗ ಹೆಜ್ಜೆ ಹೆಜ್ಜೆಗೂ ಹೂಮಳೆಗರೆದು ಸ್ವಾಗತಿಸಲಾಯಿತು. ಮೂವತ್ತು ವರ್ಷಗಳ ನಂತರವೂ ಚೆ ಬಗೆಗಿನ ಬೆಳೆಯುತ್ತಲೇ ಹೋದ ಅಭಿಮಾನ ಪ್ರೀತಿ ಕ್ಯೂಬಾದ ಹೋರಾಟದೊಂದಿಗೆ ಗುರುತಿಸಿಕೊಳ್ಳುವ ಮನೋಭಾವದ ಅತ್ಯಂತ ಭಾವನಾತ್ಮಕ ಅಭಿವ್ಯಕ್ತಿ ಈ ಸಮಾರಂಭ.


ಪುಟ 3 ನೋಡಿ

ಅಕ್ಟೋಬರ್ ಕ್ರಾಂತಿಯ ಎಂಬತ್ತನೆಯ ವಾರ್ಷಿತೋತ್ಸವ

ಸಿ. ನಂಜುಂಡಪ್ಪ

ಅಕ್ಟೋಬರ್ ಕ್ರಾಂತಿಯ ಎಂಬತ್ತನೆಯ ವಾರ್ಷಿಕೋತ್ಸವವನ್ನು 7-11-1997 ರಂದು ಪ್ರಪಂಚದೆಲ್ಲೆಡೆ ಆಚರಿಸಲಾಗುತ್ತಿದೆ. ಆ ಕ್ರಾಂತಿಯ ಮೂಲಕ ಬೆಳೆದು ಬಂದ ಸೋವಿಯತ್ ಒಕ್ಕೂಟವೇ ವಿಘಟನೆಯಾಗಿರುವಾಗ ಸಮಾಜವಾದಕ್ಕೆ ಸೋಲಾಗಿರುವಾಗ ಎಂತಹ ಅಕ್ಟೋಬರ್ ಕ್ರಾಂತಿಯ ಎಂಬತ್ತನೆಯ ವಾರ್ಷಿಕೋತ್ಸವ ಎಂದು ಕುಹಕಿಗಳು ಚೇಷ್ಟೆ ಮಾಡಬಹುದು.

ಕಳೆದ ಎರಡು ಮೂರು ವರ್ಷಗಳ ಬೆಳವಣಿಗೆಗಳಲ್ಲಿ ಮಾನವ ವಿಕಾಸದ ಕೊನೆಯ ಹಂತ ಬಂಡವಾಳಶಾಹಿ ಪದ್ಧತಿಯೇ ಎಂಬ ಜಾಗತಿಕ ಸಾಮ್ರಾಜ್ಯಶಾಹಿಗಳ ಡಂಗುರ ಪೊಳ್ಳೆಂದು ಸಾಬೀತಾಗುತ್ತಿರುವಾಗ ಕ್ರಾಂತಿಕಾರಿ ಮುನ್ನಡೆಗೆ ಅಕ್ಟೋಬರ್ ಕ್ರಾಂತಿಯ ಮಹತ್ವದ ಅರಿವು ಸಹಾಯಕವಾಗುವುದು.



ಅಕ್ಟೋಬರ್ ಕ್ರಾಂತಿಯ 5ನೇ ವಾರ್ಷಿಕೋತ್ಸವದ ಒಂದು ಪೋಸ್ಟರ್

1917 ರ ನವೆಂಬರ್ 7 ರಂದು (ಹಳೆಯ ಕ್ಯಾಲೆಂಡರ್ ಅಕ್ಟೋಬರ್ 25) ರಷ್ಯದಲ್ಲಿ ನಡೆದ ಅಕ್ಟೋಬರ್ ಕ್ರಾಂತಿಯು ಮಾನವನ ಇತಿಹಾಸದಲ್ಲಿ ಒಂದು ಹೊಸ ಯುಗವನ್ನು ಪ್ರಾರಂಭಿಸಿತು. ಚರಿತ್ರೆಯಲ್ಲಿ ಮೊದಲ ಬಾರಿಗೆ ಕಾರ್ಮಿಕ ವರ್ಗವು ತನ್ನ ಮಿತ್ರರಾದ ರೈತರನ್ನು ಜತೆಗೂಡಿಸಿಕೊಂಡು ರಷ್ಯದಲ್ಲಿ ಕಾರ್ಮಿಕ ವರ್ಗದ ಪ್ರಭುತ್ವವನ್ನು ಸ್ಥಾಪಿಸಿತು. ದುಡಿಯುವ ಜನರ ಶೋಷಣೆಯನ್ನು ಕೊನೆಗಾಣಿಸಲಾಯಿತು. ಸಾಮಾಜಿಕ ಮತ್ತು ಜನಾಂಗೀಯ ದಬ್ಬಾಳಿಕೆಯನ್ನು ತೊಡೆದು ಹಾಕಲಾಯಿತು.

ಇತಿಹಾಸದಲ್ಲಿ ಅಲ್ಲಿಯವರೆಗೆ ಶೋಷಣೆ ಮಾಡುತ್ತಿದ್ದ ಬಂಡವಾಳಗಾರರ, ಪಾಳೆಯಗಾರರ, ಗುಲಾಮೀ ಒಡೆಯರದೇ ಪ್ರಭುತ್ವ. ಉತ್ಪಾದನಾ ಸಾಧನಗಳ ಒಡೆಯರ ಕೈಯಲ್ಲಿ ಸರ್ಕಾರ, ಆಗಿನ ಸಮಾಜಗಳಲ್ಲಿ ಅವರದ್ದೇ ಪ್ರಾಬಲ್ಯ.

ಹೊಸ ಮಾದರಿ

ವರ್ಣೀಯ ಜನರ ಮೇಲೆ ಬಿಳಿಯರ ಮೇಲ್ಮೆಯನ್ನು ಅದು ಹುಸಿಗೊಳಿಸಿತು. ಒಂದು ಹೊಸ ಮಾದರಿಯ ಪ್ರಭುತ್ವ ಸಮಾಜವಾದಿ ಸೋವಿಯತ್ ಗಣತಂತ್ರ, ಒಂದು ಹೊಸ ಮಾದರಿಯ ಪ್ರಜಾಸತ್ತೆ-ದುಡಿಯುವ ಜನತೆಗಾಗಿ ಪ್ರಜಾಪ್ರಭುತ್ವವವನ್ನು ಸೃಷ್ಟಿಸಲಾಯಿತು. ಚರಿತ್ರೆಯಲ್ಲಿ ಮೊದಲ ಬಾರಿಗೆ ಕಾರ್ಮಿಕ ವರ್ಗ ಮತ್ತು ಅದರ ಮಿತ್ರರು ಹಳೆಯ ಸಾಮಾಜಿಕ ಪದ್ಧತಿಯನ್ನು ನಾಶ ಮಾಡಬಲ್ಲರು ಮಾತ್ರವೇ ಅಲ್ಲ, ಒಂದು ಹೊಸ ಸಾಮಾಜಿಕ ಪದ್ಧತಿಯನ್ನು, ಉತ್ಪಾದನೆಯ ಸಮಾಜವಾದಿ ಸಂಬಂಧಗಳನ್ನು ಸೃಷ್ಟಿಸಬಲ್ಲರು ಎಂಬುದನ್ನು ಸಾಬೀತು ಮಾಡಲಾಯಿತು.

ಅಕ್ಟೋಬರ್ ಕ್ರಾಂತಿಯ ಇಪ್ಪತ್ತನೆಯ ಶತಮಾನದ ಪ್ರಮುಖ ಘಟನೆಯಾಗಿ ಪ್ರಪಂಚದ ಇತಿಹಾಸದ ಮಾರ್ಗವನ್ನೇ ತೀವ್ರವಾಗಿ ಬದಲಿಸಿತು. ವಸಾಹತುಶಾಹಿ ದೇಶಗಳಲ್ಲಿ ಮತ್ತು ವಸಾಹತುಗಳಲ್ಲಿ ದುಡಿಯುವ ಜನರ ಮೇಲೆ ಬಂಡವಾಳಗಾರರ ಪ್ರಾಬಲ್ಯವು ಅಂತ್ಯವಿಲ್ಲದುದು ಎಂಬುದು ಪೊಳ್ಳಾಯಿತು.

ಎಲ್ಲಾ ದೇಶಗಳಲ್ಲಿ ಶೋಷಣೆಯ ವಿರುದ್ಧವಾಗಿ ಹೋರಾಡುತ್ತಿದ್ದ ದುಡಿಯುವ ಜನರಿಗೆ ಅಕ್ಟೋಬರ್ ಕ್ರಾಂತಿಯು ಸ್ಫೂರ್ತಿಯನ್ನು ಕೊಟ್ಟಿತು. ಅಕ್ಟೋಬರ್ ಕ್ರಾಂತಿಯು ಪ್ರಪಂಚದ ಎಲ್ಲಾ ದೇಶಗಳ ಮೇಲೆ ಪ್ರಭಾವ ಬೀರಿತು. 1919 ರಲ್ಲಿ ಹಂಗೆರಿಯಲ್ಲಿ, ಬವೇರಿಯಾದಲ್ಲಿ, ಸ್ಲೋವಾಕಿಯಾದಲ್ಲಿ ಸೋವಿಯತ್ ಅಧಿಕಾರದ ಸ್ಥಾಪನೆಯಾಯಿತು. ಆದರೆ ಆಂತರಿಕ ಮತ್ತು ಬಾಹ್ಯ ಪ್ರತಿಕ್ರಾಂತಿಕಾರಿ ಮೇಲುಗೈ ಆದುದರಿಂದ ಆ ದೇಶಗಳಲ್ಲಿ ಸೋವಿಯತ್ ಅಧಿಕಾರವು ದೀರ್ಘಕಾಲ ಉಳಿಯಲಿಲ್ಲ. ಹಂಗೇರಿಯಲ್ಲಿ 133 ದಿವಸ, ಬವೇರಿಯದಲ್ಲಿ 19 ದಿವಸ ಮತ್ತು ಸ್ಲೋವಾಕಿಯದಲ್ಲಿ 20 ದಿವಸ ಮಾತ್ರ ಸೋವಿಯತ್ ಸರಕಾರವಿದ್ದಿತು.

ವಸಾಹತುಗಳಲ್ಲಿ ಪ್ರಭಾವ

ಅಂದಿನ ವಸಾಹತುಗಳಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿ ಮತ್ತು ರಾಷ್ಟ್ರೀಯ ವಿಮೋಚನಾ ಹೋರಾಟಗಳ ಮೇಲೆ ಅಕ್ಟೋಬರ್ ಕ್ರಾಂತಿಯು ಪ್ರಭಾವವನ್ನು ಬೀರಿತು. ಬೆಳೆಯುತ್ತಿದ್ದ ಸಾಮ್ರಾಜ್ಯಶಾಹಿ ವಿರೋಧಿ, ಪಾಳೆಯಗಾರಿ ವಿರೋಧಿ, ರಾಷ್ಟ್ರೀಯ ವಿಮೋಚನಾ ಚಳುವಳಿಯು ಅನೇಕ ದೇಶಗಳನ್ನು ವ್ಯಾಪಿಸಿತು. ಲ್ಯಾಟಿನ್ ಅಮೆರಿಕದ ಅರ್ಜಂಟೈನ, ಬ್ರೆಜಿಲ್, ಮೆಕ್ಸಿಕೋ, ಪೆರು, ಉರುಗ್ವೆ, ಚಿಲಿ, ದೇಶಗಳಿಗೆ, ಏಷ್ಯ ಖಂಡದ ಭಾರತ, ಅಫ್ಘಾನಿಸ್ಥಾನ, ಇಂಡೋಚೈನ (ಎಂದರೆ ಇಂದಿನ ವಿಯಟ್ನಾಮ್, ಲಾವೋಸ್, ಮತ್ತು ಕಾಂಬೋಡಿಯಾ), ಇಂಡೋನೇಶಿಯಾ, ಇರಾಕ್, ಇರಾನ್, ಲೆಬನಾನ್, ಮಂಗೋಲಿಯಾ, ಸಿರಿಯಾ, ಟರ್ಕಿ, ಆಫ್ರಿಕ ಖಂಡದ ಈಜಿಪ್ಟ್, ಕಾಂಗೋ, ಲಿಬಿಯಾ, ನೈಜಿರಿಯಾ, ಸೆನೆಗಲ್, ಸೋಮಾಲಿಯಾ, ಸೂಡಾನ್, ಸಿಯರ್ರಾ ಲಿಯೋನ್ ದೇಶಗಳಿಗೆ ಹರಡಿತು.

20 ನೇ ಶತಮಾನದ ಮೂರನೆಯ ದಶಕದಲ್ಲಿ ಭಾರತದ ರಾಷ್ಟ್ರೀಯ ಚಳುವಳಿಯ ನಾಯಕ ಸ್ಥಾನದಲ್ಲಿದ್ದ ಜವಾಹರಲಾಲ್ ನೆಹರು, ಅವರ ತಂದೆ ಮೋತಿಲಾಲ ನೆಹರು ಸೋವಿಯತ್ ಒಕ್ಕೂಟಕ್ಕೆ ಭೇಟಿ ಕೊಟ್ಟಿದ್ದರು. ಅಕ್ಟೋಬರ್ ಕ್ರಾಂತಿಯ ನಂತರದ ವರ್ಷಗಳಲ್ಲಿ ಭಾರತದಲ್ಲಿ ಅನೇಕ ಕೈಗಾರಿಕಾ ಮುಷ್ಕರಗಳು ನಡೆದವು.

ಬಂಡವಾಳಶಾಹಿ ದೇಶಗಳಲ್ಲಿ

ಅಕ್ಟೋಬರ್ ಕ್ರಾಂತಿಯ ಪ್ರಭಾವವು ಬಂಡವಾಳಶಾಹಿ ದೇಶಗಳ ಮೇಲಾಯಿತು. ಫ್ರಾನ್ಸ್, ಬ್ರೀಟನ್, ಇಟಲಿ, ಅಮೇರಿಕ ಸಂಯುಕ್ತ ಸಂಸ್ಥಾನಗಳು ಮತ್ತು ಜಪಾನಿನಲ್ಲಿ ವ್ಯಾಪಕವಾದ ಮುಷ್ಕರಗಳ ಚಳುವಳಿಯೇ ನಡೆಯಿತು. ಕಾರ್ಮಿಕರ ಆರ್ಥಿಕ ಬೇಡಿಕೆಗಳು ರಾಜಕೀಯ ಬೇಡಿಕೆಗಳಾಗಿ ಬೆಳೆದುವು. ಕಾರ್ಮಿಕರ ಚಳುವಳಿ ರೈತರ ಚಳುವಳಿಯ ಜತೆಜತೆಗೇನೆ ನಡೆಯಿತು. ಹಲವಾರು ಬಂಡವಾಳಶಾಹಿ ದೇಶಗಳಲ್ಲಿ ಕಾರ್ಮಿಕರು ಜಯ ಪಡೆದರು. ಮತದಾನದ ಹಕ್ಕು, ಕಡಿಮೆ ಕೆಲಸದ ಗಂಟೆಗಳು, ಉತ್ತಮ ಕೆಲಸದ ಪರಿಸ್ಥಿತಿ ಮತ್ತು ಹೆಚ್ಚಿನ ವೇತನಗಳನ್ನು ಅವರು ಪಡೆದರು.

ಅಕ್ಟೋಬರ್ ಕ್ರಾಂತಿಯು ಸಾಮ್ರಾಜ್ಯಶಾಹಿ ದೇಶಗಳ ವಸಾಹತು ಪದ್ಧತಿಯಲ್ಲಿ ಬಿಕ್ಕಟ್ಟನ್ನುಂಟುಮಾಡಿತು. ದಮನಕ್ಕೆ ಗುರಿಯಾದ ಜನರಿಂದ ಸ್ವತಂತ್ರವಾದ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಬೆಳವಣಿಗೆಯು ಸಾಧ್ಯವಿಲ್ಲ ಎಂಬುದನ್ನು ರಷ್ಯದ ಕಾರ್ಮಿಕರು ಮತ್ತು ರೈತರು ಸುಳ್ಳು ಮಾಡಿದರು.

ಅಕ್ಟೋಬರ್ ಕ್ರಾಂತಿಯಿಂದ ಉದ್ಘಾಟಿಸಲ್ಪಟ್ಟ ಜನತೆಯ ವಿಮೋಚನೆಯ ಪ್ರಕ್ರಿಯೆಯು ಸಾಮ್ರಾಜ್ಯಶಾಹಿಗಳು ಮತ್ತು ಅವರ ದಳ್ಳಾಳಿಗಳು ಒಡ್ಡಿದ ಕಠೋರ ವಿರೋಧವನ್ನು ಬೇಧಿಸಿ ಮುನ್ನಡೆಯಿತು.

ಪ್ರಾಯೋಗಿಕ ಸಾಕ್ಷಿ

ಅಕ್ಟೋಬರ್ ಕ್ರಾಂತಿಯು ಸುಧಾರಣಾವಾದದ ಮೇಲೆ ಕ್ರಾಂತಿಕಾರಿ ಸಿದ್ಧಾಂತವು ವಿಜಯವನ್ನು ಸಾಧಿಸಿದುದನ್ನು ತೋರಿಸಿತು. ಜಾಗತಿಕ ಕ್ರಾಂತಿಕಾರಿ ಪ್ರಕ್ರಿಯೆಯಲ್ಲಿ ಕಮ್ಯುನಿಸ್ಟರ ನಾಯಕ ಪಾತ್ರವು ಎದ್ದು ಕಂಡಿತು. ಲೆನಿನ್ ವಾದದ ಸೈದ್ಧಾಂತಿಕ ಅಧಿನಾಯಕತ್ವವು ಕಾರ್ಮಿಕರ ಮತ್ತು ರಾಷ್ಟ್ರೀಯ ವಿಮೋಚನಾ ಚಳುವಳಿಗಳಲ್ಲಿ ಬೇರು ಬಿಡಲಾರಂಭಿಸಿತು.

ಕಮ್ಯುನಿಸ್ಟ್ ಚಳುವಳಿಯು ವೇಗವಾಗಿ ಬೆಳೆಯಿತು. ಕಮ್ಯುನಿಸ್ಟ್ ಪಕ್ಷಗಳು, ಗುಂಪುಗಳು, ಬೆಳೆಯಲಾರಂಭಿಸಿದವು.

ಕಮ್ಯುನಿಸ್ಟ್ ಅಂತರರಾಷ್ಟ್ರೀಯದ ಸ್ಥಾಪನೆಯ ಮೂಲಕ ಮಾರ್ಕ್ಸ್‌ವಾದದ ಆಧಾರದ ಮೇಲೆ ಕಾರ್ಮಿಕ ಚಳುವಳಿಗಳನ್ನು ಏಕೀಕರಣಗೊಳಿಸಲಾಯಿತು.

ಮಾರ್ಚ್ 1919 ರಲ್ಲಿ ಕಮ್ಯುನಿಸ್ಟ್ ಅಂತರ ರಾಷ್ಟ್ರೀಯದ ಸ್ಥಾಪನೆಯಾಗುವ ವೇಳೆಗೆ ಆಸ್ಟ್ರಿಯ, ಅರ್ಜೆಂಟೈನ, ಫಿನ್‌ಲೆಂಡ್, ಫ್ರಾನ್ಸ್, ಜೆಕೋಸ್ಲೋವಾಕಿಯ, ಜರ್ಮನಿ, ಹಂಗೆರಿ, ನೆದರ್‌ಲ್ಯಾಂಡ್, ನಾರ್ವೆ, ಪೋಲೆಂಡ್, ರುಮಾನಿಯ, ಸ್ವಿಟ್ಸರ್‌ಲೆಂಡ್‌ಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ಇಲ್ಲವೇ ಕಮ್ಯುನಿಸ್ಟ್ ಗುಂಪುಗಳು ಪ್ರಾರಂಭವಾಗಿದ್ದುವು.

ಚರಿತ್ರೆಯಲ್ಲಿ ಮೊದಲ ಬಾರಿಗೆ ಮಾರ್ಕ್ಸ್‌ವಾದಿ-ಲೆನಿನ್ ವಾದಿ ಸಿದ್ಧಾಂತದ ಸತ್ವವನ್ನು ಪ್ರಾಯೋಗಿಕವಾಗಿ ಸಾಬೀತು ಮಾಡಲಾಯಿತು. ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಕಾರ್ಮಿಕ ವರ್ಗದ ಮಹತ್ತರವಾದ ವಿಮೋಚನಾ ಪಾತ್ರವನ್ನು ತೋರಿಸಿಕೊಡಲಾಯಿತು.

ಕಲಿತ ಪಾಠಗಳು

ಕಾರ್ಮಿಕ ವರ್ಗದ ಪ್ರಭುತ್ವವು ರಷ್ಯದಲ್ಲಿ ಅಧಿಕಾರ ವಹಿಸಿಕೊಂಡ ನಂತರ ವಿಶೇಷವಾದ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಬ್ಯಾಂಕ್ ನೌಕರರು ಮುಷ್ಕರ ಹೂಡಿದರು. ಸೋವಿಯತ್ ಸರಕಾರದ ಖರ್ಚಿಗೆ ಸೈನ್ಯದ ಸಂಬಳ ಸಾರಿಗೆಗೆ ಬ್ಯಾಂಕುಗಳು ಹಣ ಕೊಡಲಿಲ್ಲ.

ಆಹಾರ ಧಾನ್ಯಗಳನ್ನು ದೇಶದ ಎಲ್ಲೆಡೆ ಸಾಗಿಸಬೇಕಾದುದು ರೈಲುಗಳ ಮೂಲಕ. ರೈಲ್ವೆ ನೌಕರರು ಮುಷ್ಕರ ಮಾಡಿದರು. ರೈಲು ಸಂಚಾರ ನಿಂತು ಹೋಯಿತು.

ಸರ್ಕಾರವು ಶೀಘ್ರವಾಗಿ ಸುದ್ದಿ ಸಂದೇಶಗಳನ್ನು 20 ನೆಯ ಶತಮಾನದ ಪ್ರಾರಂಭದಲ್ಲಿ ಟೆಲಿಫೋನ್ ಮೂಲಕ ಕಳುಹಿಸಬೇಕಾಗಿದ್ದಿತು. ಆಗ ಫ್ಯಾಕ್ಸ್, ಸೆಟಲೈಟ್‌ಗಳು ಇರಲಿಲ್ಲ. ಟೆಲಿಫೋನ್ ಅಪರೇಟರುಗಳು ಮುಷ್ಕರ ಮಾಡಿದರು.

ಆದುದರಿಂದಲೇ ಅಕ್ಟೋಬರ್ ಕ್ರಾಂತಿಯ ನಂತರದ ಕ್ರಾಂತಿಗಳು ಪಾಠಗಳನ್ನು ಕಲಿತುವು. ಚೀನದ ಕಮ್ಯುನಿಸ್ಟ್ ಪಕ್ಷವು ಆ ದೇಶದಲ್ಲಿ ಬ್ಯಾಂಕ್ ನೌಕರರನ್ನು, ರೈಲ್ವೆ ನೌಕರರನ್ನು, ಟೆಲಿಫೋನ್ ನೌಕರರನ್ನು ಸಂಘಟಿಸಿತು. ಇಲ್ಲವೇ ಸಂಪರ್ಕಗಳನ್ನು ಬೆಳೆಸಿತು. ಆದುದರಿಂದಲೇ 1949 ರ ಅಕ್ಟೋಬರ್ 1 ರಂದು ಚೀನದ ಕಮ್ಯುನಿಸ್ಟ್ ಪಕ್ಷವು ಅಧಿಕಾರ ಸ್ವೀಕಾರ ಮಾಡಿದಾಗ 1917 ರಲ್ಲಿ ಸೋವಿಯತ್ ರಷ್ಯದ ಸರ್ಕಾರವು ಎದುರಿಸಿದ ಈ ಮೂರು ಸಮಸ್ಯೆಗಳು ಎದುರಾಗಲಿಲ್ಲ.

ಭಾರತದಲ್ಲಿಯೂ ರೈಲ್ವೆ ನೌಕರರ ಸಂಘಟನೆಯಾಯಿತು. ಆದರೆ ಆಳುವ ವರ್ಗಗಳು ಮತ್ತು ಅವರ ಸರ್ಕಾರ ರೈಲ್ವೆ ಕಾರ್ಮಿಕರ ಐಕ್ಯತೆಯನ್ನು ಒಡೆದರು. ಇಂದು ನೂರಕ್ಕಿಂತಲೂ ಹೆಚ್ಚು ಕಾರ್ಮಿಕ ಸಂಘಗಳಿವೆ. ಕೇಂದ್ರ ಸರ್ಕಾರದ ನೌಕರರ ಸಂಘಗಳನ್ನು, ಬ್ಯಾಂಕ್ ನೌಕರರ ಸಂಘಗಳನ್ನು ಅವರು ಒಡೆದರು. ಜನತಾ ಪ್ರಜಾಪ್ರಭುತ್ವ ರಂಗವು ಈ ಸಂಘಟನೆಗಳೊಂದಿಗೆ ಯಾವ ರೀತಿ ವ್ಯವಹರಿಸಬೇಕು ಎಂಬುದಕ್ಕೆ ಅಕ್ಟೋಬರ್ ಕ್ರಾಂತಿಯಿಂದ ಪಾಠ ಕಲಿಯಬೇಕು.

ಈಗ ಬಂಡವಾಳಶಾಹಿ ದೇಶಗಳಲ್ಲಿ ನಿರುದ್ಯೋಗವು ವಿಪರೀತವಾಗಿ ಬೆಳೆದಿದೆ. ಆ ದೇಶಗಳಲ್ಲಿ ಬೆಳವಣಿಗೆಯ ದರವು ಕುಗ್ಗಿ ಆರ್ಥಿಕ ಬಿಕ್ಕಟ್ಟು ಬೆಳೆದಿದೆ. ಅದೇ ವೇಳೆ ಸಮಾಜವಾದಿ ಚೀನದ ಬೆಳವಣಿಗೆಯ ದರವು ಪ್ರಪಂಚದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಕೆಲವು ಮಾಜಿ ಸಮಾಜವಾದಿ ದೇಶಗಳಲ್ಲಿ ಚುನಾವಣೆ ನಡೆದಾಗ ಹಿಂದೆ ಅಧಿಕಾರದಲ್ಲಿದ್ದವರೇ ಆರಿಸಿ ಬಂದಿದ್ದಾರೆ. ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ಕಾರ್ಮಿಕರು ಹೋರಾಟಗಳನ್ನು ನಡೆಸುತ್ತಿದ್ದಾರೆ. ಇದಕ್ಕೆ ಫ್ರಾನ್ಸ್ ಮತ್ತು ದಕ್ಷಿಣ ಕೋರಿಯಾ ಉತ್ತಮ ಉದಾಹರಣೆಗಳು.

ಮಾನವ ವಿಕಾಸದಲ್ಲಿ ಬಂಡವಾಳಶಾಹಿಯೇ ಕೊನೆಯ ಹಂತ ಎಂಬ ಅಬ್ಬರವು ನಿಂತಿದೆ.

ಇಂದು ಕೂಡಾ ನವ ಸಮಾಜದ ಕನಸು ಕಾಣುತ್ತಾ ಶೋಷಣೆಯ ವಿರುದ್ಧವಾಗಿ ಹೋರಾಡುವ ಸಮಸ್ತ ದುಡಿಮೆಗಾರರಿಗೆ ಅಕ್ಟೋಬರ್ ಕ್ರಾಂತಿಯು ಮಾರ್ಗದರ್ಶಿಯೂ, ಆಶಾ ಜ್ಯೋತಿಯೂ ಆಗಿದೆ. ○

ವಿಶ್ವ ಸಮಾಜವಾದದ ಬಗ್ಗೆ ಇ.ಎಂ.ಎಸ್. ಲೇಖನ ಎರಡು ಸ್ಪಷ್ಟೀಕರಣಗಳು

ಕಳೆದ ಸಂಚಿಕೆಯಲ್ಲಿ ಈ ಪುಟದಲ್ಲಿ ಪ್ರಕಟವಾದ ಲೇಖನ "ಅಕ್ಟೋಬರ್ ಕ್ರಾಂತಿಯ 80ನೇ ವಾರ್ಷಿಕೋತ್ಸವದಂದು ವಿಶ್ವ ಸಮಾಜ ವಾದ"ದಲ್ಲಿ ಕಾಮ್ರೇಡ್ ಇ.ಎಂ.ಎಸ್. ರವರ ನಿರೂಪಣೆಗಳ ಬಗ್ಗೆ ಕೆಲವು ಪ್ರತಿಕ್ರಿಯೆಗಳು ಬಂದಿದ್ದು ಈ ಕುರಿತು ಈ ಕೆಳಗಿನ ಎರಡು ಸ್ಪಷ್ಟೀಕರಣಗಳನ್ನು ಗಮನಿಸಿ

i. ಅಂತರ್‌ರಾಷ್ಟ್ರೀಯ ಸನ್ನಿವೇಶವನ್ನು ವಿಶ್ಲೇಷಿಸುತ್ತಾ ಕಾಂ॥ ಇ.ಎಂ.ಎಸ್. ಹೀಗೆ ಹೇಳುತ್ತಾರೆ- "...ಈಗ ವಿಶ್ವ ಸಮಾಜವಾದ ಸೋವಿಯತ್ ಒಕ್ಕೂಟ ಹಾಗೂ ಪೂರ್ವ ಯುರೋಪಿನ ಸಮಾಜವಾದಿ ದೇಶಗಳು ಇದ್ದಾಗಿನ ಸಮಯಕ್ಕಿಂತಲೂ ಹೆಚ್ಚು ಬಲಶಾಲಿಯಾಗಿದೆ ಎಂಬುದು ಅಷ್ಟೇ ವಾಸ್ತವ ಸಂಗತಿ" ಇದು ಸಿಪಿಐ(ಎಂ) ಪಕ್ಷದ 14ನೇ ಮತ್ತು 15ನೇ ಮಹಾಧಿವೇಶನದಲ್ಲಿ ವಿಕಾಸಗೊಳಿಸಿದ ತಿಳುವಳಿಕೆಗೆ ವ್ಯತಿರಿಕ್ತವಾಗಿದೆ. ಸೋವಿಯತ್ ಒಕ್ಕೂಟ ಹಾಗೂ ಪೂರ್ವಯುರೋಪಿನ ಸಮಾಜವಾದಿ ದೇಶಗಳಲ್ಲಿ ಸಮಾಜವಾದದ ಸಾವು ಸಮಾಜವಾದದ ವಿಶ್ವಶಕ್ತಿಗೆ ಒಂದು ಹಿನ್ನಡೆಯಾಗಿದೆ, ಅದರ ಪರಿಣಾಮವಾಗಿ ಬಲಾಬಲ, ತಾತ್ಕಾಲಿಕವಾಗಿಯಾದರೂ ಸಾಮ್ರಾಜ್ಯಶಾಹಿಯ ಪರವಾಗಿ ಬದಲಾಗಿದೆ ಎಂಬ ತೀರ್ಮಾನ ಕೈಬರಲಾಗಿತ್ತು. ವಿಶ್ವದ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳು ಇದೇ ತಿಳುವಳಿಕೆಯನ್ನು ಹೊಂದಿವೆ.

ii ಸ್ಟಾಲಿನ್‌ರವರ ವಿಶ್ಲೇಷಣೆಯ ಬಗ್ಗೆ ಆ ಲೇಖನದಲ್ಲಿ ಇರುವ ನಿರೂಪಣೆಗಳು ಪಕ್ಷದ14ನೇ ಮಹಾಧಿವೇಶನದ ಸೈದ್ಧಾಂತಿಕ ನಿರ್ಣಯದಲ್ಲಿ ಹೇಳಿರುವ ತಿಳುವಳಿಕೆಯನ್ನು ದಾಟಿ ಹೋಗಿದೆ.

- ಸಂಪಾದಕರು

ಅಲಿಡಾ 'ಚೆ' ಗುವಾರರಿಗೆ ಭಾವನಾತ್ಮಕ ಸ್ವಾಗತ ವೀರ ಕ್ಯೂಬಾದ ಬಗೆಗಿನ ಮೆಚ್ಚುಗೆಯ ಅಭಿವ್ಯಕ್ತಿ

ವರದಿ: ಎಸ್.ವೈ.ಗುರುಶಾಂತ್



"ನನ್ನ ತಂದೆಯನ್ನು ಬೊಲಿವಿಯದಲ್ಲಿ ಹೇಡಿಗಳು ಮೋಸದಿಂದ ಕೊಂದರು. ಅವರ ಹತ್ಯೆ ಕ್ರಾಂತಿಯ ಹತ್ಯೆ ಅಲ್ಲ. ಜಗತ್ತಿನಾದ್ಯಂತ ಅವರಿಂದ ಸ್ಫೂರ್ತಿ ಪಡೆದವರಿದ್ದಾರೆ. ಇಂದು ಸಾವಿರಾರು ಚೆಗಳು, ಕ್ರಾಂತಿಕಾರಿಗಳು ಎಲ್ಲೆಡೆ ಹುಟ್ಟಿದ್ದಾರೆ. ಕ್ರಾಂತಿಕಾರಿಗೆ ಸಾವೆಲ್ಲಿಯದು?" ಎಂದು ಪ್ರಶ್ನಿಸಿದರು. ವಿಶ್ವದಲ್ಲಿ ಎಲ್ಲೇ ನಡೆಯುವ ಅನ್ಯಾಯ, ದಬ್ಬಾಳಿಕೆಗಳೆದುರು ಸಿಡಿದು ನಿಂತರೆ ಆಗ ನಾವು ಸಂಗಾತಿಗಳು" ಎಂದ ಚೆ ಪ್ರತಿ ಪ್ರತಿಭಟನೆ ಹೋರಾಟಗಳಲ್ಲಿ ಜೀವಂತ ಒಡನಾಡಿ.

"ನನ್ನ ತಂದೆ ಸಾಮಾನ್ಯರಂತೆ ಯೋಚಿಸುವ ಸಾಮಾನ್ಯರು. ಎಳೆಯ ವಯಸ್ಸಿನಲ್ಲೇ ತೀವ್ರ ಅಸ್ತಮಾ ಆವರಿಸಿ ಕಾಡಿದರೂ ಅದನ್ನು ಮೀರಿನಿಂತರು. ಜನತೆಗಾಗಿ ಹೋರಾಡುವ ಅವರ ದೃಢ ಸಂಕಲ್ಪವೇ ಇದರ ಶಕ್ತಿಯಾಗಿರಬೇಕು. ನನ್ನ ತಂದೆ ಹೆಂಡತಿ, ನಾಲ್ಕು ಮಕ್ಕಳನ್ನು ಬಿಟ್ಟು ಕಾಡಿಗೆ ಹೋಗಿದ್ದು ಸಾಹಸಕ್ಕಾಗಿ ಅಲ್ಲ, ಜನತೆಯನ್ನು ವಿಮೋಚನೆಗೊಳಿಸಬೇಕೆಂಬುದು ಅವರ ಅದಮ್ಯ ಬಯಕೆ. ಕ್ಯೂಬಾದಲ್ಲಿ ಕ್ರಾಂತಿಯ ನಂತರ ಬೊಲಿವಿಯಾಕ್ಕೆ ಹೋದರು. ಸಹಗಾತಿ ಫಿಡೆಲ್ ಕ್ಯೂಬಾದ ಕ್ರಾಂತಿಯನ್ನು ರಕ್ಷಣೆ ಮಾಡುವ ಬಗ್ಗೆ ಪೂರ್ಣ ವಿಶ್ವಾಸ ಹೊಂದಿದ್ದರು. ಮಿತ್ರ ಫಿಡೆಲ್‌ರವರು ಇಲ್ಲಿ ಇರಲೇಬೇಕಿತ್ತು. ಅವರು ಹೋರಟಿದ್ದು ಹಿಂತಿರುಗಲು ಅಲ್ಲ.

ತಾನೂ ತಂದೆಯ ಜೊತೆಗಿದ್ದು ಗೆರಿಲ್ಲಾ ಹೋರಾಟದಲ್ಲಿ ಪಾಲ್ಗೊಳ್ಳಲು ಆಗಲಿಲ್ಲವಲ್ಲ ಎಂದು ನೊಂದುಕೊಂಡರು. ಅಲಿಡಾರವರ ಭಾವನೆಗಗಳಿಗೆ ಸಭಿಕರು ಕಿವಿಗಡಚಿಕ್ಕುವ ಚಪ್ಪಾಳೆಗಳಿಂದ ಪ್ರತಿ ಸ್ಪಂದಿಸಿದರು. ಚೆ ಹುತಾತ್ಮರಾದಾಗ ಅಲಿಡಾಗೆ ಕೇವಲ 7 ವರ್ಷಗಳು.

ತನ್ನ ತಂದೆಯನ್ನು ಆಕೆ ಕೊನೆಯ ಬಾರಿಗೆ ನೋಡಿದ್ದು ಆತ ಕಾಂಗೋಗೆ ಹೊರಟು ನಿಂತಾಗ. ಆಗ ಆಕೆಗೆ ನಾಲ್ಕೂವರೆ ವರ್ಷ. ಚೆಯ ನಾಲ್ಕೂ ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಅಲಿಡಾ ಮತ್ತು ಸೆಲಿಯಾ ಹಾಗೂ ಅವರ ಇಬ್ಬರು ತಮ್ಮಂದಿರು ಎಲ್ಲರೂ ತಮ್ಮ ತಂದೆಯ ಆದರ್ಶಗಳಿಗನುಗುಣವಾಗಿಯೇ ಬಾಳುತ್ತಿದ್ದಾರೆ. ಕ್ಯೂಬನ್ನರಲ್ಲದಿದ್ದರೂ ಎಲ್ಲರೂ ಕ್ಯೂಬಾ ದಲ್ಲೇ ಉಳಿದು ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದಾರೆ.

"ತಂದೆಯವರು ಎಂತಹ ಕ್ಲಿಷ್ಟಕರ ಸಂದರ್ಭಗಳಲ್ಲಿಯೂ ಕುಟುಂಬದವರೊಂದಿಗೆ ಸಂಪರ್ಕ ಹೊಂದಿದ್ದರು. ನನ್ನ ತಮ್ಮ ಕ್ಯಾಮಿಯೋ ಅವಾಚ್ಯ ಶಬ್ದಗಳಿಂದ ಬೈಯುತ್ತಾನೆ ಎಂದು ತಿಳಿದ ಬಳಿದ ಅವರು ಪತ್ರ ಬರೆದರು. ಅವರಿಗೆ ಕಾಡಿನಲ್ಲಿ ಮೊಸಳೆಯೊಂದು ಸ್ನೇಹಿತನಾಗಿದೆ. ಆತ ಏನಾದರೂ ಅವಾಚ್ಯವಾಗಿ ಮಾತನಾಡಿದರೆ ಅದು ತಂದೆಯನ್ನು (ಚೆ ಯನ್ನು) ತಿಂದುಬಿಡುತ್ತದೆ ಎಂದು ತಿಳಿಸಿದರು. ಇದರ ನಂತರ ಕ್ಯಾಮಿಲೋ ಬೈಯ್ಯುವುದನ್ನು ನಿಲ್ಲಿಸಿದ" ಎಂದು ಚೆಯವರು ಸಣ್ಣ ವಿಷಯಗಳಿಗೂ ಗಮನ ನೀಡುತ್ತಿದ್ದನ್ನು ಸ್ಮರಿಸಿಹರು.

"ಅಮೇರಿಕಾ ಕ್ಯೂಬಾದ ಮೇಲೆ ಅಮಾನವೀಯ ದಿಗ್ಬಂಧನ ವಿಧಿಸಿದೆ. ಅನ್ಯಾಯದ ಕಾನೂನುಗಳ ಮೂಲಕ ಕ್ರಮ ಕೈಗೊಳ್ಳುತ್ತಿದೆ. ಕ್ಯೂಬಾದ ಕ್ರಾಂತಿಯನ್ನು ನಾಶಗೊಳಿಸುವ ಸಂಚುಗಳಿವು. ಇಂತಹ ಸಂದಿಗ್ಧ ಸಮಯದಲ್ಲಿ ನಮಗೆ ಸೌಹಾರ್ದತೆ ಬೇಕು. ಭಾರತ ಕ್ಯೂಬಾಕ್ಕೆ ಸದಾ ನೆರವು ನೀಡಿದ ದೇಶ ಎಂದು ಸ್ಮರಿಸಿದರು. ಕರ್ನಾಟಕದ ಜನತೆಗೆ ಕೃತಜ್ಞತೆ ಸಲ್ಲಿಸಿದರು. ಅಲಿಡಾ ಮಾತು ಮುಗಿಸುತ್ತಿದ್ದಂತೆ ಲಾಲ್ ಸಲಾಮ್ ಗಳ ಸುರಿಮಳೆ.

'ಸಾಮ್ರಾಜ್ಯಶಾಹಿ ನಾಶವಾಗಲಿ' 'ಸಮಾಜವಾದ ಚಿರಾಯುವಾಗಲಿ', 'ಸಮಾಜವಾದ ಇಲ್ಲವೇ ಸಾವು' ಎಂಬ ಘೋಷಣೆಗಳು ಮೊಳಗಿದವು. ಆರಂಭದಲ್ಲಿ ವಿವಿಧ ವಿಭಾಗಗಳ ಗ ತು, ಸಂಘಟನೆಗಳು, ರಾಜಕೀಯ ಪಕ್ಷಗಳು ಮುಖಂಡರಿಂದ ನೆನಪಿನ ಕಾಣಿಕೆಗಳನ್ನು ನೀಡಲಾಯಿತು. ಹೂಮಾಲೆಗಳನ್ನು ಹಾಕಿ ಸನ್ಮಾನಿಸಲಾಯಿತು. ಅಲಿಡಾ ಅವರ ಸ್ಪಾನಿಷ್ ಭಾಷಣವನ್ನು ಶ್ರೀಮತಿ ಮಧುರಾ ಸ್ವಾಮಿನಾಥನ್ ಇಂಗ್ಲೀಷ್‌ಗೆ ಅನುವಾದಿಸಿದರು.

ಮೊದಲು ಮಾತನಾಡಿದ ಕ್ಯೂಬಾ ಸೌಹಾರ್ದತಾ ಸಮಿತಿಯ ರಾಷ್ಟ್ರೀಯ ಸಂಚಾಲಕರೂ, ಸಂಸತ್ ಸದಸ್ಯರೂ ಆದ ಕಾಂ.ಎಂ.ಎ.ಬೇಬಿಯವರು ಕ್ಯೂಬಾದ ಹೋರಾಟವನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. ಅಲಿಡಾರ ಪ್ರವಾಸದುದ್ದಕ್ಕೂ ಎಲ್ಲಿಲ್ಲದ ಪ್ರತಿಕ್ರಿಯೆ ಜನತೆಯಿಂದ ಕಂಡುಬಂದಿರುವುದನ್ನು ತಿಳಿಸಿದರು. ಚೆ ಯ ಧೀಮಂತ ವ್ಯಕ್ತಿತ್ವ, ಒಬ್ಬ ವೈದ್ಯನಾಗಿ, ಕ್ರಾಂತಿಕಾರಿಯಾಗಿ, ಗದ್ದೆಗಳಲ್ಲಿ, ಟ್ರ್ಯಾಕ್ಟರ್ ಚಾಲಕನಾಗಿ, ಫಿಡೆಲ್ ಜೊತೆ ಮಂತ್ರಿಯಾಗಿ.....ಬೌದ್ಧಿಕ-ದೈಹಿಕ ದುಡಿಮೆಗಾರ ಚೆ ಎಂಬುದನ್ನು ವಿವರಿಸಿದರು. ಚೆ ಯನ್ನು ಮೋಸದಿಂದ ಕೊಂದವರು ಜಗತ್ತಿನಾದ್ಯಂತ ಸುಳ್ಳು ಹಬ್ಬಿಸಿದರು. ಸತ್ಯ ತಿಳಿಯಲು ಬಹಳ ಕಾಲ ಬೇಕಾಗಲಿಲ್ಲ. ಇಂದು ಚೆ ಜೀವಂತವಾಗಿ ನಮ್ಮೆಲ್ಲರಲ್ಲೂ ಇದ್ದಾರೆ ಎಂದರು. ಒಂದೆರಡು ವರ್ಷಗಳ ಹಿಂದೆ ಸೌಹಾರ್ದತೆಯ ಸಮ್ಮೇಳನ ಕ್ಯೂಬಾದಲ್ಲಿ ಜರುಗಿದಾಗ ಶ್ರೀಲಂಕಾದ ಪ್ರತಿನಿಧಿಗಳ ಮಾತುಗಳನ್ನು ಸಭೆಯ ಮುಂದಿಟ್ಟರು.

ಶ್ರೀಲಂಕಾವನ್ನು ಪ್ರತಿನಿಧಿಸಿದ ಹಲವಾರು ರಾಜಕೀಯ ಪಕ್ಷಗಳು, ಸಂಘಟನೆಗಳ ನಾಯಕರು- ನಮ್ಮೊಳಗೆ ಹಲವಾರು ಭಿನ್ನಾಭಿಪ್ರಾಯಗಳಿವೆ. ಕೆಲವೊಮ್ಮೆ ಅಸ್ತ್ರಗಳನ್ನು ಹಿಡಿದು ಹೋರಾಡುತ್ತೇವೆ. ಆದರೆ ಕ್ಯೂಬಾ ನಮ್ಮನ್ನು ಒಂದುಗೂಡಿಸಿದೆ ಎಂದು ಹೇಳಿದಾಗ ಮತ್ತೆ ಕರತಾಡನ. ಭಾರತದಲ್ಲಿಯೂ ಎಲ್ಲರೂ ಭಿನ್ನಾಭಿಪ್ರಾಯ ಇರುವಾಗಲೂ ಒಂದಾಗಿ ಕ್ಯೂಬಾಕ್ಕೆ ಸೌಹಾರ್ದತೆ ನೀಡುತ್ತಿದ್ದೇವೆ ಎಂದರು.

ಭಾರತದಲ್ಲಿ ಕ್ಯೂಬಾದ ರಾಯಭಾರಿ ಶ್ರೀಮತಿ ಮೋಲ್ಗಾ ಕೆಮೊರೋಟ್ರಿಯಾಸ್‌ರವರು ಚೆ ಯ ವರ್ಣಮಯ ವ್ಯಕ್ತಿತ್ವ ಕುರಿತು ವಿವರಿಸಿ, ಅವರು ಇಡೀ ಮಾನವ ಸಮುದಾಯಕ್ಕೆ ಸೇರಿದವರೆಂದರು. ಭಾರತದ ಜನತೆಯ ಸೌಹಾರ್ದತೆ ಸ್ಮರಿಸಿದರು.

ಅಲಿಡಾ ಅವರಲ್ಲಿ ಚೆ ಯವರ ಚೈತನ್ಯವನ್ನು ಕಾಣುತ್ತಿರುವುದಾಗಿ ಮಾಜಿ ಉಪ ಮುಖ್ಯಮಂತ್ರಿ, ಎಂ.ಪಿ ಗಳಾದ ಶ್ರೀ ಎಸ್.ಎಂ.ಕೃಷ್ಣರವರು ಹೇಳಿದರು. ಸೋವಿಯತ್ ರಷ್ಯಾದ ಕುಸಿತ ಈ ಶತಮಾನದ ದುರಂತವೆಂದರು. ಅಮೇರಿಕಾ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟದಲ್ಲಿ ಕ್ಯೂಬಾ ಸಣ್ಣ ದೇಶವಾದರೂ ಹಿಂಜರಿದಿಲ್ಲ. ಈ ಹೋರಾಟಕ್ಕೆ ಭಾರತದ ಬೆಂಬಲ ಸದಾ ಅಗತ್ಯವೆಂದರು. ಹಿಂದೆ ಅಲಿಪ್ತ ಆಂದೋಲನದ ನಾಯಕತ್ವವನ್ನು ಭಾರತದಿಂದ (ಅಂದಿನ ಪ್ರಧಾನಿ ಇಂದಿರಾಗಾಂಧಿ) ಕ್ಯೂಬಾ (ಫಿಡೇಲ್ ಕ್ಯಾಸ್ಟ್ರೋಗೆ) ಪಡೆದ ಸಂದರ್ಭವನ್ನು ನೆನಪಿಸಿಕೊಂಡ ಕೃಷ್ಣರವರು ಕ್ಯೂಬಾ ಅಲಿಪ್ತ ಆಂದೋಲನದ ಪರಂಪರೆಯನ್ನು ಸದಾ ಎತ್ತಿ ಹಿಡಿದು ಮುಂದುವರಿಯಿತೆಂದರು. ಹಿಂದೆ ಅವರು ಅಮೇರಿಕಾದಲ್ಲಿ ವಿದ್ಯಾರ್ಥಿಯಾಗಿದ್ದಾಗ ಕ್ಯೂಬಾದ ಕ್ರಾಂತಿ ಆದ ಹೊಸ್ತಿಲಿನಲ್ಲಿ ಸೋವಿಯೆತ್ ರಷ್ಯಾ ಹಾಗೂ ಚೀನಾದಿಂದ ಬರುತ್ತಿದ್ದ ಆಹಾರವಸ್ತುಗಳ ಹಡಗನ್ನು ಅಮೇರಿಕಾದ ಧಾಳಿಯ ವಿರುದ್ಧ ಸೆಣಸುತ್ತಿದ್ದ ವಿಯೆಟ್ನಾಂಗೆ ಕಳಿಸಿದ ಚೆ ಹಾಗೂ ಫಿಡೆಲ್ ರವರ ಕ್ರಮವನ್ನು ನೆನಪಿಸಿದರು. ಕ್ಯೂಬಾ ಎಂದರೆ ಅಂತರರಾಷ್ಟ್ರೀಯ ಕರ್ತವ್ಯದಲ್ಲಿ ಎಂದೂ ಹಿಂದೆ ಉಳಿದಿಲ್ಲ, ಇದು ಕ್ಯೂಬಾ ಎಂದರು.

ಸೌಹಾರ್ದತೆಯೆಂದರೆ ಬರೀ ನೈತಿಕ ಬೆಂಬಲ ಮಾತ್ರವಲ್ಲ, ಒಂದು ವೇಳೆ ಅಮೇರಿಕಾ ಕ್ಯೂಬಾದ ಮೇಲೆ ಆಕ್ರಮಣ ಮಾಡಿದರೆ ಭಾರತದಂತಹ ದೇಶ ಸ್ವಯಂ ಸೇವಕರನ್ನು ಕಳಿಸುವುದನ್ನೂ ಒಳಗೊಂಡ ಸರ್ವ ಸಹಾಯ ನೀಡಬೇಕು ಎಂದವರು ಇ.ಪಿ.ಮೆನನ್. ಮೊದಲನೆಯದಾಗಿ ಚೆ, ಎರಡನೆಯದಾಗಿ ಫಿಡೆಲ್ ಮೂರನೆಯದಾಗಿ ನೆಲ್ಸನ್ ಮಂಡೇಲಾರವರು ಇಂದಿನ ಯುವಜನಾಂಗಕ್ಕೆ ಸ್ಫೂರ್ತಿ, ಆದರ್ಶದ ನಾಯಕರು ಎಂದರು. ಚೆ ಅವರ ಹತ್ಯೆಯ ಕೆಲವೇ ದಿನಗಳಲ್ಲಿ ತಾವು ಕ್ಯೂಬಾದ ಪರ್ವತಗಳಲ್ಲಿ ಕಮಾಂಡರ್ ಫಿಡೆಲ್ ಜೊತೆಗೆ ಆರು ದಿನಗಳು ಕಳೆದ್ದನ್ನು ನೆನಪಿಸಿಕೊಂಡು ಚೆ ಸಾವಿಗೆ ಫಿಡೆಲ್ ಕಾರಣ ಎಂದು ಅಮೇರಿಕಾ, ಇಂಗ್ಲೆಂಡ್‌ಗಳು ಎಗ್ಗಿಲ್ಲದ ಅಪಪ್ರಚಾರ ನಡೆಸಿದ್ದವು. ಅದರ ಸುದ್ದಿಯ ಪತ್ರಿಕಾ ವರದಿಯ ತುಂಡನ್ನು ಫಿಡೆಲ್ ತೋರಿಸಿದರು. ಬೊಲಿವಿಯಾದ ಕ್ರಾಂತಿಕಾರಿ ಹೋರಾಟದಲ್ಲಿ ಫಿಡೆಲ್ ಭಾಗವಹಿಸದೇ ಇದ್ದುದಕ್ಕೆ ಕಾರಣ ಕ್ಯೂಬಾದ ಕ್ರಾಂತಿಯ ರಕ್ಷಣೆ ಹೊಣೆ ಅವರ ಮೇಲಿತ್ತು. ಚೆ ಗೂ ಈ ಬಗ್ಗೆ ದೃಢ ವಿಶ್ವಾಸವಿತ್ತು. ಚೆ ಮತ್ತು ಫಿಡೆಲ್ ಗೆಳೆತನ ಅತ್ಯುತ್ತಮವಾದದ್ದು ಎಂದರು.

ಹಿಂದೆ ಕ್ಯೂಬಾಕ್ಕೆ ಸೌಹಾರ್ದತೆಯ ಪ್ರತೀಕವಾಗಿ ಭಾರತದಿಂದ ಆಹಾರ ಧಾನ್ಯಗಳ ಹಡಗನ್ನು ಸ್ವಾಗತಿಸಲು ಹೋಗಿದ್ದ ಪತ್ರಕರ್ತ ಎನ್.ರಾಂ.ರವರು 18 ಸಾವಿರ ಟನ್ ಗೋಧಿಯನ್ನು 18 ಸಾವಿರ ಸೌಹಾರ್ದತೆಗಳು ಎಂದು ಫಿಡೆಲ್ ಕರೆದಿದ್ದನ್ನು ಪ್ರಸ್ತಾಪಿಸಿದರು. ಸಮರಧೀರ ಕ್ಯೂಬಾದ ಜನತೆಯಲ್ಲಿ ದೃಢ ಸಂಕಲ್ಪ ಹಾಗೂ ತಾತ್ವಿಕ ಬದ್ಧತೆಗಳನ್ನೂ ಗುರುತಿಸಿದರು. ಒಬ್ಬ ತಂದೆಯಾಗಿ ನಮ್ಮನ್ನು ಬಿಟ್ಟು ಹೋಗಿರದೇ ಇದ್ದರೆ ಅವರ (ಚೆ) ಬದ್ಧತೆಗೆ ಹೊಡೆತ ಬೀಳುತ್ತಿತ್ತು. ಒಬ್ಬ ಮನುಷ್ಯನಾಗಿ ಸಮಾಜಕ್ಕೆ ಬದ್ಧತೆ ಮತ್ತು ಕರ್ತವ್ಯವು ಇರುತ್ತದೆ. ಅದನ್ನು ನನ್ನ ತಂದೆ ಪೂರೈಸಿದ್ದಾರೆ ಎಂಬ ಅಲಿಡಾರವರ ಮಾತನ್ನೂ ಉದ್ಧರಿಸಿದರು.

ಎಲ್ಲಾ ಸಾಮಾನ್ಯರಲ್ಲೂ ಶಕ್ತಿ ಇದೆಯೆಂದು ತೋರಿದವರೆಂದರೆ ಚೆ, ಫಿಡೆಲ್, ಮಹಾತ್ಮಾಗಾಂಧಿ ಎಂದು ಸಾಹಿತಿ ಪ್ರೊ.ಜಿ.ಕೆ.ಗೋವಿಂದರಾವ್ ನುಡಿದರು.

23 ವರ್ಷಗಳ ಹಿಂದೆ ಚೆ ಗುವಾರ ನಾಟಕದಲ್ಲಿ ಚೆ ಪಾತ್ರ ವಹಿಸಿದ ಖ್ಯಾತ ನಟ ಸಿ.ಆರ್.ಸಿಂಹ ರವರು ಚೆ ಪಾತ್ರ ನಟಿಸುವುದೆಂದರೆ ವಾಕ್ಯ ಒಪ್ಪಿಸುವುದಾಗಿರಲಿಲ್ಲ (ನಿರ್ದೇಶನ, ಬಿ.ವಿ.ಕಾರಂತ) ಚೆ ಯನ್ನೇ ಅಂತರ್ಗತ ಮಾಡಬೇಕಿತ್ತು. ಅದು ರೋಮಾಂಚನಕಾರಿ ಸವಾಲು ಮಾನವೀಯತೆಯನ್ನು ಪುಷ್ಟಿಗೊಳಿಸಿದ ಪಾತ್ರ ಅದು. ಇಂದು ಅಲಿಡಾರನ್ನು ನೋಡಿದರೆ ನನ್ನ ಮಗಳು ಅನ್ನಿಸುತ್ತದೆ. ನನ್ನ ಮಗಳೆಂದು ಕರೆಯಲೇ" ಎಂದಾಗ ಎಲ್ಲರಲ್ಲೂ ಭಾವಾವೇಶ.

ಕರ್ನಾಟಕದ ಸರಕಾರದ ಪರವಾಗಿ ಸಚಿವ ಸಿ. ಬೈರೇಗೌಡ ರವರು ಅಭಿನಂದಿಸಿ ವಿಶ್ವದಲ್ಲಿ ಕ್ರಾಂತಿಕಹಳೆ ಊದಲು ಚೆ ಯವರ ಕೊಡುಗೆ ಸ್ಮರಿಸಿದರು.

ಬಂಡಾಯ ಸಾಹಿತಿ. ಪ್ರೊ. ಚಂದ್ರಶೇಖರ್ ಪಾಟೀಲರು ಕ್ಯೂಬಾದ ಜನತೆಯನ್ನು ಅಭಿನಂದಿಸಿ ಮಾನವೀಯತೆ, ಸೃಜನಶೀಲತೆಯನ್ನು ಚೆ ಯವರಿಂದ ಕಲಿಯಬೇಕೆಂದರು. ಜಗತ್ತಿನಾದ್ಯಂತ ನಡೆಯುತ್ತಿರುವ ಹೋರಾಟದ ಒಂದು ಸಂಕೇತವಾಗಿ ಅಲಿಡಾರವರಿದ್ದಾರೆ ಎಂದರು.

ಸಿಪಿಐ ಪಕ್ಷದಿಂದ ಜಯತೀರ್ಥರವರು ಮಾತನಾಡಿದರು. ಅಲ್ಲದೇ ಸಮಾರಂಭದಲ್ಲಿ ಖ್ಯಾತ ನಿರ್ದೇಶಕ ನಾಗಾಭರಣ, ಬಂಡಾಯ ಸಾಹಿತಿ, ಬರಗೂರು ರಾಮಚಂದ್ರಪ್ಪ, ನವ ಕರ್ನಾಟಕದ ರಾಜಾರಾಮ್, ಸಿಪಿಐ(ಎಂ) ನಾಯಕರಾದ ಎಸ್. ಸೂರ್ಯನಾರಾಯಣರಾವ್, ಜಿ.ಎನ್. ನಾಗರಾಜ್, ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಆರ್. ಶ್ರೀನಿವಾಸ್, ಎಸ್.ಯು.ಸಿ.ಐ.ನ ರಾಧಾಕೃಷ್ಣ, ಅಲ್ಲದೇ DYFI, SFI, CITU, AIKS, AIYF, AITUC, ಜ್ಞಾನ ವಿಜ್ಞಾನ ಸಮಿತಿ, ಮಾನಿನಿ, ವಿವಿಧ ಕಾರ್ಮಿಕ ಸಂಘಗಳ ಮುಖಂಡರು, ಭಾರತ-ಚೀನಾ ಸ್ನೇಹ ಸಂಘದ ಮುಖಂಡರು, ಮತ್ತಿತ್ತರರು ಕಿಕ್ಕಿರಿದು ತುಂಬಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರ ರಾವ್ ವಹಿಸಿದ್ದರು. ಸ್ವಾಗತ ಡಿವೈಎಫ್‌ಐ ಕಾರ್ಯದರ್ಶಿ ಎಸ್.ವೈ.ಗುರುಶಾಂತ್‌ರಿಂದ, ನಿರ್ವಹಣೆ ಕೆ.ಎಸ್. ವಿಮಲಾ ಅವರಿಂದ. ಶ್ರದ್ಧಾಂಜಲಿ ಗೀತೆಯನ್ನು ವಿಜಯಕುಮಾರ್, ಲಕ್ಷ್ಮಿ ತಂಡದವರು ಹಾಡಿದರು. ಸಮಾರಂಭದ ಕೊನೆಯಲ್ಲಿ ಜಾನ್ ದೇವರಾಜ್ ಮತ್ತು ಸಂಗಾತಿಗಳು ಕ್ಯೂಬಾದಲ್ಲಿ ಅತ್ಯಂತ ಸುಪ್ರಸಿದ್ಧವಾದ "ವಂತನಾ ಮೇರಾ....." ಹಾಡು ಹಾಡುವ ಮೂಲಕ ಇಡಿ ಸಭೆಯಲ್ಲಿದ್ದವರೆಲ್ಲಾ ಭಾವಾವೇಶಕ್ಕೆ ಒಳಗಾಗುವಂತಾಯಿತು. ಮತ್ತೂ ವಿಶೇಷವೆಂದರೆ ಸ್ಪಾನಿಷ್‌ನ ಈ ಗೀತೆಗೆ ಧ್ವನಿಗೂಡಿಸಿದ್ದು. ಸಮಾರಂಭದ ಬಳಿಕ ಅವರನ್ನು ವಿಮಾನ ನಿಲ್ದಾಣಕ್ಕೆ ಬೀಳ್ಕೊಡುವಾಗ ಎಲ್ಲರ ಹೃದಯ ಮನಸ್ಸುಗಳು ಭಾರವಾಗಿದ್ದವು. ಹೆಜ್ಜೆ ಹೆಜ್ಜೆಗೂ ಘೋಷಣೆಗಳನ್ನು ಕೂಗಿ ಬೀಳ್ಕೊಂಡರು. ○



■ ನವೆಂಬರ್ ೧ ರಾಜ್ಯೋತ್ಸವ, ಅಲ್ಲದೇ ದೀಪಾವಳಿ ಹಬ್ಬ. ಆದಾಗ್ಯೂ ಸೆನೆಟ್ ಹಾಲ್‌ನಲ್ಲಿ ಪೂರ್ತಿ ತುಂಬಿ ಹೊರಗಡೆಯಲ್ಲಿ ನೂರಾರು ಜನ ಸಭೆಯ ಕೊನೆಯವರೆಗೂ ನಿಂತಿದ್ದರು. ಎಲ್ಲರ ಮಾತುಗಳನ್ನೂ ಆಲಿಸಿದರು. ಇನ್ನೂ ಒಂದು ವಿಶೇಷವೆಂದರೆ ಸಭೆ ನಿಗದಿಯಾಗಿದ್ದು ಮಧ್ಯಾಹ್ನ ೩ ಗಂಟೆಗೆ. ಆದರೆ ಜನ ೨.೩೦ಕ್ಕೇ ಜಮಾಯಿಸಿದ್ದರು. ವಿಮಾನ ನಿಲ್ದಾಣದಲ್ಲೂ ಹೀಗೆಯೇ. ಮಕ್ಕಳು ಮಹಿಳೆಯರು ಹೆಚ್ಚಾಗಿ ಆಗಮಿಸಿದ್ದು ವಿಶೇಷ.

■ ಕಾಂ.ಅಲಿಡಾ, ಶ್ರೀಮತಿ ಮೋಲ್ಗಾ, ಕಾಂ.ಬೇಬಿಯವರು ಸೆನೆಟ್ ಹಾಲ್ ಒಳಗೆ ನಡೆದು ಬರುತ್ತಿದ್ದಂತೆ ವಿವಿಧ ಹೂಗಳ ಸುರಿಮಳೆ. ಎಲ್ಲರಲ್ಲೂ ಪುಳಕ.

■ ಹೂ ಗುಚ್ಛ ಹಾಗೂ ನೆನಪಿನ ಕಾಣಿಕೆಗಳನ್ನು ನೀಡಿ ಗೌರವಿಸುತ್ತಿರುವಾಗ ಪಾಲಕರೊಬ್ಬರು ತಮ್ಮ ಮಗುವನ್ನು ಪರಿಚಯಿಸಿದರು. ಅವನ ಹೆಸರು 'ಚೆ'ಗುವಾರ.

■ 'ಚೆ' ಅವರ ಜೀವನ ಚರಿತ್ರೆ ಪುಸ್ತಕದ ಒಳಗೆ ಅಲಿಡಾರವರಿಂದ ಸಹಿ ಸಂಗ್ರಹಣೆ ನಡೆದೇ ಇತ್ತು. ಕೆಲವರಂತೂ ಅತ್ಯಂತ ಹಳೆಯ ಪತ್ರಿಕೆಗಳನ್ನು ಹಿಡಿದು ತಂದಿದ್ದರು. ಒಬ್ಬ ವೃದ್ಧರಂತೂ ಫೋಟೋ ತೋರಿಸಿ 'ಅಲಿಡಾ' ಇದರಲ್ಲಿ ನೀನೆಲ್ಲಿ? ಎಂದು ಕೇಳಿ ಗುರುತಿಸಿಕೊಂಡು ತುಂಬುನಗೆ ಚೆಲ್ಲಿದರು.

■ ಸಭಾಂಗಣ ರತ್ನಾಕರ ಶೆಣೈ ನೇತೃತ್ವದಲ್ಲಿ ಡಿವೈಎಫ್‌ಐ-ಎಸ್‌ಎಫ್‌ಐ ಸಂಗಾತಿಗಳು

■ ಕೆಲವು ಪತ್ರಕರ್ತರು ವಿಶೇಷವಾದ ಸಂದರ್ಶನಕ್ಕೆ ಅವಕಾಶ ಕೋರಿದ್ದರು. ಸಮಯಾಭಾವದಿಂದ ವಿಮಾನ ನಿಲ್ದಾಣದಲ್ಲಿ ಅರ್ಧ ಗಂಟೆ ಅವಕಾಶ ಕಲ್ಪಿಸಲಾಯಿತು. ಕ್ಯೂಬಾದಲ್ಲಿ ಫಿಡೆಲ್‌ರವರೊಂದಿಗೆ ಸಮಾಜವಾದವೂ ಸಮಾಪ್ತಿಯಾಗುತ್ತದೆ ಎನ್ನುತ್ತಾರಲ್ಲಾ ಹೇಗೆ ಎಂದು ವರ್ತಕರ್ತರೊಬ್ಬರ ಪ್ರಶ್ನೆ. "ಫಿಡೆಲ್‌ರವರು ನಮ್ಮ ನಾಯಕರು, ಅನುಭವಿಗಳು ನಿಜ. ಆದರೆ ಅಲ್ಲಿ ಅನೇಕ ನಾಯಕರಿದ್ದಾರೆ. ಜಾಗೃತವಾಗಿರುವ ಜನತೆ ಅಲ್ಲಿದೆ. ಕ್ರಾಂತಿಯನ್ನು ಸಂರಕ್ಷಿಸಿಕೊಳ್ಳುವಲ್ಲಿ ಅನುಮಾನವೇ ಬೇಡ" ಎಂದರು ಅಲಿಡಾ.

■ 'ಈ ಭೇಟಿಗೆ ರಾಜಕೀಯ ಉದ್ದೇಶವೇನಾದರೂ ಇದೆಯೇ' ಇನ್ನೊಬ್ಬರ ಪ್ರಶ್ನೆ. 'ಸ್ನೇಹ ಸೌಹಾರ್ದತೆಗಾಗಿ ಭೇಟಿ' ಎಂದರು ಅಲಿಡಾ.

■ 'ಭಾರತದಲ್ಲಿನ ಕಮ್ಯುನಿಸ್ಟ್ ಪಕ್ಷಗಳಿಗೆ ಕ್ಯೂಬಾ ಹಣ ನೀಡುತ್ತಿರುವುದನ್ನು ಈಗ ನಿಲ್ಲಿಸಿರುವುದರಿಂದ ಈಗ ಸೌಹಾರ್ದತೆ ಸಿಗುವುದೇ?" - ವಿಶೇಷ ಸಂದರ್ಶನ ಬೇಕೆಂದು ಕೇಳಿದ್ದ ಆಂಗ್ಲ ಪತ್ರಿಕೆಯ ವರದಿಗಾರನ ಪ್ರಶ್ನೆ. "ಅಲಿಡಾ ಹಾಗೂ ಮೊಲ್ಗಾರವರು ಪ್ರತಿಕ್ರಿಯೆಯಾಗಿ ನಕ್ಕರು. "ನಾವು ಯಾವಾಗಲೂ ನೆರವು ಬೆಂಬಲ ಪಡೆದೇ ಬಂದಿದ್ದೇವೆ. ಇನ್ನು ಕೊಡುವುದೇನನ್ನು? ಎಲ್ಲಿಂದ ಬಂತು?" ಎಂದಾಗ ಪತ್ರಕರ್ತನಿಗೆ ಕಸಿವಿಸಿ. ಭಾರತದ ಸಂಗಾತಿಗಳ ನೆರವು ಅವಿಸ್ಮರಣೀಯ. ಅದು ಹಣ ಆಮಿಷದಿಂದ ಬರುವುದಲ್ಲ. ಬದಲಾಗಿ ಪ್ರಬಲವಾದ ಸೈದ್ಧಾಂತಿಕ, ರಾಜಕೀಯ ಸಿದ್ಧಾಂತದಿಂದ ಎಂದಾಗ ಪ್ರಶ್ನೆ ಕೇಳಿದವರಿಗೆ ಮತ್ತೆ ಇಂತಹ ಪ್ರಶ್ನೆಗಳು "ಹುಚ್ಚುತನದ್ದು" ಎಂದು ತಲೆಗೆ ಬೆರಳಿಟ್ಟು(ಲೂಸ್) ಉತ್ತರ.

■ ಅಲಿಡಾರವರ ಆಗಮನದ ಬಗ್ಗೆ ಒಂದಿಲ್ಲ ಎರಡು ಬಾರಿ ಪತ್ರಿಕೆಗಳಿಗೆ ಸುದ್ದಿ ನೀಡಿದ್ದರೂ ಬಹುತೇಕ ಪತ್ರಿಕೆಗಳಲ್ಲಿ ಪ್ರಕಟಗೊಳ್ಳಲೇ ಇಲ್ಲ. ಆದರೆ ಯಶಸ್ವಿ ಕಾರ್ಯಕ್ರಮದ ಬಳಿಕ ಪ್ರಕಟಿಸದೇ ಇರಲಾಗಲಿಲ್ಲ.



ಭಾರತೀಯ ವಿಮೋಚನಾ ಸಮರ

ಸುವರ್ಣ ಎರಡು ಶತಮಾನಗಳ (1757-1947)

ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಗದ್ರ್ ಪಕ್ಷದ ಚಟುವಟಿಕೆಗಳು ದಕ್ಷಿಣ ಏಷ್ಯಾದಲ್ಲೂ ನಡೆದಿದ್ದವು. ಬರ್ಮಾದ ಮಂಡಾಲೆ ಜೈಲಿನಲ್ಲಿ 33 ವರ್ಷದ **ಸೋಹನ್ ಲಾಲ್ ಪಾಠಕ್**‌ನನ್ನು, ಸಯಾಮ್‌ನಲ್ಲಿ ಬುಧ್‌ಸಿಂಗ್‌ನನ್ನು ಹಾಗೂ ಸಿಂಗಾಪುರ್‌ನಲ್ಲಿ ರಾಮಕೃಷ್ಣನೆಂಬಾತನನ್ನು ಬ್ರಿಟೀಷರು ಗಲ್ಲಿಗೇರಿಸಿದರು.

ಆದರೂ ಫೆಬ್ರವರಿ 15, 1915 ರಂದು ಗದ್ರ್ ಕ್ರಾಂತಿಕಾರರ ಪ್ರಯತ್ನಗಳಿಂದ ಸಿಂಗಾಪೂರದಲ್ಲಿದ್ದ ಬ್ರಿಟೀಷ್ ಸೇನೆಯ 5ನೇ ಲೈಟ್ ಇನ್‌ಫೆಂಟ್ರಿಯ ಸೈನಿಕರು ಬಂಡೇಳುವುದನ್ನು ತಡೆಯಲು ಬ್ರಿಟೀಷರಿಗಾಗಲಿಲ್ಲ. ಪೂರ್ವ ಪಂಜಾಬ್ ಮತ್ತು ರಜಪುತಾನದ ಮುಸಲ್ಮಾನರೇ ಇದ್ದ ಈ ತುಕಡಿ **ಜಮಾದಾರ್ ಚಿಸ್ತಿ ಖಾನ್, ಸುಬೇದಾರ್ ದಾವೂದ್ ಖಾನ್** ಮತ್ತು **ಜಮಾದಾರ್ ಅಬ್ದುಲ್ ಅಲಿ** ನೇತೃತ್ವದಲ್ಲಿ ಬಂಡೆದ್ದು ತನ್ನ ಬ್ರಿಟೀಷ್ ಅಧಿಕಾರಿಗಳನ್ನು ಕೊಂದು ಇಡೀ ಸಿಂಗಾಪುರದಲ್ಲಿ ನಾಲ್ಕು ದಿನಗಳ ಕಾಲ ಬ್ರಿಟೀಷ್ ಆಳ್ವಿಕೆಯೇ ಇಲ್ಲದಂತೆ ಮಾಡಿತು. ಆದರೆ, ಈ ವಿಜಯವನ್ನು ಕ್ರೋಢಿಕರಿಸಲು ಅವರಿಗೆ ಆಗಲಿಲ್ಲ. ಬ್ರಿಟೀಷ್ ಮತ್ತು ಜಪಾನೀ ಸೈನಿಕರು ಮತ್ತೇ ಸಿಂಗಾಪುರ ಬಂದರನ್ನು ವಶಪಡಿಸಿಕೊಂಡು ಬಂಡಾಯಗಾರರ ಸಾಮೂಹಿಕ ಹತ್ಯೆ ನಡೆಸಿದರು. ಮಿಲಿಟರಿ ಕೋರ್ಟಿನ ತೀರ್ಮಾನದ ಪ್ರಕಾರ 27 ಮಂದಿಯನ್ನು ಫೈರಿಂಗ್ ಸ್ಕ್ವಾಡ್‌ನ ಮೂಲಕ ಗುಂಡಿಟ್ಟು ಕೊಲ್ಲಲಾಯಿತು, 41 ಮಂದಿಯನ್ನು ಜೀವಾವಧಿ ಶಿಕ್ಷೆಗೆ ಹಾಗೂ ಉಳಿದ 68 ಮಂದಿಯನ್ನು ದೀರ್ಘಾವಧಿ ಶಿಕ್ಷೆಗೆ ಗುರಿಪಡಿಸಲಾಯಿತು.

"ಈ ದಂಡಿ ಖಾನ್ ಮತ್ತು ಆತನ ಸಂಗಾತಿಗಳು ನಮ್ಮಂತೆಯೇ ಒಂದು ಸ್ವತಂತ್ರ ಭಾರತದ ಕನಸು ಕಂಡಿದ್ದರು. ಅವರ ಸಾವು ವ್ಯರ್ಥವಾಗಲಿಲ್ಲ. ಆದರೆ ಈಗ ಭಾರತದಲ್ಲಿ ಎಷ್ಟು ಜನಕ್ಕೆ ಅವರ ಬಲಿದಾನದ ಬಗ್ಗೆ ತಿಳಿದಿದೆ.?" ಎಂದು ಖೇದದಿಂದ ಪ್ರಶ್ನಿಸಿದ್ದರು. ಈ ಬಂಡಾಯಗಾರರು ಬ್ರಿಟೀಷರ ಗುಂಡುಗಳಿಗೆ ಬಲಿಯಾಗಿ ಧರೆಗುರುಳುವುದನ್ನು ಕಣ್ಣಾರೆ ಕಂಡ ಪೂರ್ಣಚಂದ್ರ ಚಕ್ರವರ್ತಿ.

ಯಥಾಪ್ರಕಾರ ಈ ಬಲಿದಾನ ಭಾರತೀಯ ಸ್ವಾತಂತ್ರ್ಯ ಆಂದೋಲನದ ಮುಖಂಡರ ಗಮನ ಸೆಳೆಯದಿದ್ದರೂ ಆಗ ಸ್ವಿಟ್ಜರ್‌ಲ್ಯಾಂಡಿನಲ್ಲಿ ಗಡೀಪಾರಿನಲ್ಲಿದ್ದ ಲೆನಿನ್‌ರ ಗಮನ ಸೆಳೆಯಿತು. ಅನ್ನಮ್‌ನಲ್ಲಿ ಫ್ರೆಂಚ್ ವಸಾಹತು ಶಾಹಿಗಳು, ಕ್ಯಾಮ್‌ರೂನ್‌ನಲ್ಲಿ ಜರ್ಮನ್ ವಸಾಹತುಶಾಹಿಗಳು ಹಾಗೂ ಸಿಂಗಾಪೂರದಲ್ಲಿ ಬ್ರಿಟೀಷ್ ವಸಾಹತುಶಾಹಿಗಳು ನಡೆಸಿದ ಈ ಬರ್ಬರ ಕೃತ್ಯಗಳನ್ನು ಅವರು ಖಂಡಿಸಿದರು.



ವಿದೇಶದಿಂದ ಭಾರತೀಯ ಸ್ವಾತಂತ್ರ್ಯ ಆಂದೋಲನಕ್ಕೆ ಬೆಂಬಲವಾಗಿ ದುಡಿದ ಮತ್ತೊಂದು ಸಂಘಟನೆ ಎಂದರೆ ಬರ್ಲಿನ್ ಸಮಿತಿ (1915-18). ಆದಾಗಲೇ ವಿದೇಶಗಳಲ್ಲಿ ಚಟುವಟಿಕೆ ನಡೆಸುತ್ತಿದ್ದ ವೀರೇಂದ್ರ ನಾಥ ಚಟ್ಟೋಪಧ್ಯಾಯ, ಕೃಷ್ಣವರ್ಮ, ಮೇಡಮ್ ಕಾಮಾ ಸೇರಿ ಪ್ರಥಮ ಮಹಾಯುದ್ಧ ಪ್ರಾರಂಭವಾದಾಗ ಈ 'ಬರ್ಲಿನ್ ಸಮಿತಿ' ಅಥವಾ 'ಇಂಡಿಯಾ ಇಂಡಿಪೆಂಡೆನ್ಸ್ ಲೀಗ್' ಸ್ಥಾಪಿಸಿದರು. 'ಜುಗಾಂತರ ಪತ್ರಿಕಾ' ದ ಸಂಪಾದಕರಾಗಿದ್ದು, ಜೈಲು ಶಿಕ್ಷೆ ಅನುಭವಿಸಿದ **ಡಾ. ಭೂಪೇಂದ್ರನಾಥ ದತ್ತ** ಜೈಲಿನಿಂದ ಹೊರಬಂದ ಮೇಲೆ ಅಮೇರಿಕಾಕ್ಕೆ ಹೋಗಿದ್ದರು. ಪ್ರಥಮ ಮಹಾಯುದ್ಧ ಆರಂಭವಾದಾಗ ಜರ್ಮನಿಗೆ ಬಂದು ಈ ಸಮಿತಿಯನ್ನು ಸೇರಿದರು. ನಂತರ ಅವರು ಕಾರ್ಮಿಕ, ರೈತ ಆಂದೋಲನಗಳ ಸಂಘಟಕರಾಗಿ ಬೆಳೆದರು. ಈ ಬರ್ಲಿನ್ ಸಮಿತಿ ಒಂದೆಡೆ ಗದ್ರ್ ಪಾರ್ಟಿಯೊಂದಿಗೆ ಸಂಪರ್ಕ ಸಾಧಿಸಿದ್ದರೆ, ಇನ್ನೊಂದೆಡೆ ಕಾನ್‌ಸ್ಟಾಂಟಿನೋಪಲ್, ಬಾಗ್ದಾದ್, ಇರಾಕ್ ಹಾಗೂ ಅಫಘಾನಿಸ್ತಾನಕ್ಕೆ ತನ್ನ ಸದಸ್ಯರನ್ನು ಕಳಿಸಿ ಕ್ರಾಂತಿಕಾರಿ ಚಟುವಟಿಕೆಗಳನ್ನು ಸಂಘಟಿಸಿತ್ತು. **ಮಹೇಂದ್ರ ಪ್ರಸಾದ್** ಕಾಬೂಲಿಗೆ ಹೋಗಿ ಅಲ್ಲಿ ತಾತ್ಕಾಲಿಕ ಸ್ವತಂತ್ರ ಭಾರತೀಯ ಸರ್ಕಾರವನ್ನು ಸ್ಥಾಪಿಸಿದರು. ಗದ್ರ್ ಪಾರ್ಟಿಯ ಒಬ್ಬ ಪ್ರಮುಖ ಮುಖಂಡರಾದ **ಮೌಲಾನಾ ಬರ್ಕ ತುಲ್ಲಾ ಭೂಪಾಲಿ** ಕೂಡಾ ಈ ಮಹೇಂದ್ರ ಪ್ರಸಾದ್ ಜೊತೆಗೆ ಕಾಬೂಲಿಗೆ ಹೋದರು. **ಡಾ. ಚಂಪಕ ರಾಮನ್ ಪಿಳ್ಳೆ, ಪ್ರಮಥ ನಾಥ ದತ್ತ, ಕೇದಾರ್ ನಾಥ್, ಬರುನ್ ದಾಸ್ ಗುಪ್ತಾ** ಇತ್ಯಾದಿ ಈ ಬರ್ಲಿನ್ ಸಮಿತಿಯ ಮೂಲಕ ಭಾರತೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು.



ಪ್ರಥಮ ಮಹಾಯುದ್ಧ ಸಿಡಿದಾಗ ಭಾರತದೊಳಗೂ ಕ್ರಾಂತಿಕಾರಿ ಚಟುವಟಿಕೆಗಳು ತೀವ್ರಗೊಂಡವು. **'ಅನುಶೀಲನ್ ಸಮಿತಿ'** ಯೆಂಬ ಸಂಘಟನೆ ಭಾರತೀಯ ಸೈನಿಕರ ನಡುವೆ ಬಂಡಾಯಗಳನ್ನು ಸಂಘಟಿಸುವಲ್ಲಿ ತೊಡಗಿದ್ದರೆ, **ಜುಗಾಂತರ್ ಪಾರ್ಟಿ** ಜರ್ಮನಿಯ ಸಹಾಯದಿಂದ ಬಂಡಾಯ ಸಂಘಟಿಸಲು ಪ್ರಯತ್ನಿಸಿತ್ತು. ಅನುಶೀಲನ್ ಸಮಿತಿ ಒಂದು ಸಂಯುಕ್ತ ನಾಯಕತ್ವ ಹೊಂದಿದ್ದ ಸಂಘಟನೆಯಾಗಿದ್ದರೆ, (ರಾಶ್ ಬೆಹಾರಿ ಬೋಸ್ ಅದರ ಮುಖಂಡರು) ಜುಗಾಂತರ್ ಹಲವು ಸ್ಥಳೀಯ ಕ್ರಾಂತಿಕಾರಿ ಸಮಿತಿಗಳ ಒಕ್ಕೂಟದಂತಿತ್ತು. ಇವೆರಡೂ ಸಂಘಟನೆಗಳ ನಡುವೆ ಆಗಾಗ ಸಂಯೋಜಿತ ಚಟುವಟಿಕೆಗಳೂ ನಡೆಯುತ್ತಿದ್ದವು.



ಬಾಘಾ ಜತೀನ್ ಎಂದೇ ಪ್ರಖ್ಯಾತರಾಗಿರುವ ಜ್ಯೋತೀಂದ್ರನಾಥ ಮುಖ್ಯೋಪಾಧ್ಯಾಯ ಈ ಅವಧಿಯಲ್ಲಿ ಜುಗಾಂತರ ಪಾರ್ಟಿಯ ಪ್ರಮುಖ ಮುಖಂಡರಲ್ಲೊಬ್ಬರು. ಜರ್ಮನಿಯಿಂದ ಶಸ್ತ್ರಾಸ್ತ್ರಗಳನ್ನು ತರಿಸಿ ಭಾರತವನ್ನು ವಿಮೋಚನೆಗೊಳಿಸುವ ಒಂದು ಯೋಜನೆಯನ್ನು ಅವರು ತಯಾರಿಸಿದ್ದರು. ಆದರೆ ಈ ಯೋಜನೆ ವಿಫಲವಾಯಿತು. ಸೆಪ್ಟೆಂಬರ್ 9, 1915 ರಿಂದ ಬಾಘಾ ಜತೀನ್ ಮತ್ತು ಅವರ ಸಂಗಾತಿಗಳು ಬೃಹತ್ ಬ್ರಿಟಿಷ್ ಸೇನೆಯೊಂದಿಗೆ ಸೆಣಸಬೇಕಾಯಿತು. ಇಂತಹ ಒಂದು ಹೋರಾಟದಲ್ಲಿ ಜತೀನ್ ಗಂಭೀರವಾಗಿ ಗಾಯಗೊಂಡರು. ಮರುದಿನ ಆಸ್ಪತ್ರೆಯಲ್ಲಿ ಅಸುನೀಗಿದರು. ಅವರ ಇಬ್ಬರು ಸಂಗಾತಿಗಳು ನೇಣುಗಂಬವೇರಿದರು. ಇನ್ನೊಬ್ಬ ರಣರಂಗದಲ್ಲೇ ಸಾವನ್ನಪ್ಪಿದ, ಮತ್ತೊಬ್ಬನಿಗೆ ಜೀವಾವಧಿ ಶಿಕ್ಷೆಯಾಯಿತು. ಬಾಘಾ ಜತೀನ್ ಸಂಗಾತಿಗಳಲ್ಲಿ ನರೇಂದ್ರ ನಾಥ ಭಟ್ಟಾಚಾರ್ಯ ಅಥವಾ ನಂತರ ಎಂ.ಎನ್.ರಾಯ್ ಎಂದು ಪ್ರಸಿದ್ಧರಾದ ಕ್ರಾಂತಿಕಾರಿಗಳು ಪ್ರಮುಖರು.



ಈ ಎರಡು ಕ್ರಾಂತಿಕಾರಿ ಗುಂಪುಗಳಿಗೆ ನೆರವಾದ ಇಬ್ಬರು ಮಹಿಳೆಯರ ವೀರಗಾಥೆ ಸ್ಮರಣೀಯ. **ದುಖಾರಿಬಾಲಾ ದೇವಿ** ತನ್ನ ಮನೆಯಲ್ಲಿ ಪೆಟ್ಟಿಗೆಯಲ್ಲಿ ಮೌಸಾರ್ ಪಿಸ್ತೂಲುಗಳು ಮತ್ತು ಕಾಡತೂಸುಗಳನ್ನು ಬಚ್ಚಿಡುತ್ತಿದ್ದರು. ಕೊನೆಗೂ ಪೋಲೀಸರ ಕೈಗೆ ಸಿಕ್ಕಿಬಿದ್ದು ಎರಡೂವರೆ ವರ್ಷಗಳ ಕಠಿಣ ಶಿಕ್ಷೆ ಅನುಭವಿಸಿದರು. ಈಕೆ ಕ್ರಾಂತಿಕಾರಿ ಚಟುವಟಿಕೆಗಳಿಗೆ ಜೈಲು ಶಿಕ್ಷೆ ಅನುಭವಿಸಿದ ಪ್ರಥಮ ಮಹಿಳೆ ಎನ್ನಲಾಗಿದೆ.



ನಾನಿಬಾಲಾದೇವಿಯನ್ನು ಕ್ರಾಂತಿಕಾರಿಗಳು "ಮೇಜೋ ಪಿಶಿಮಾ" ಎಂದೇ ಕರೆಯುತ್ತಿದ್ದರು. ಆಕೆ ಕ್ರಾಂತಿಕಾರಿಗಳ ಗುಪ್ತ ಅಡಗುದಾಣದ ಉಸ್ತುವಾರಿ ವಹಿಸಿದ್ದರು. ಬ್ರಾಹ್ಮಣ ಕುಟುಂಬದಿಂದ ಬಂದ ಈ ದೈವ ಭಕ್ತೆ ವಿಧವೆ ಅಗತ್ಯಬಿದ್ದಾಗ ಒಬ್ಬ ಬಂಧಿಯ ಹೆಂಡತಿಯ ಮಾರುವೇಷ ಧರಿಸಲೂ ಹಿಂಜರಿಯಲಿಲ್ಲ. ಈ ಮೂಲಕ ಮೌಸಾರ್ ಪಿಸ್ತೂಲುಗಳು ಕ್ರಾಂತಿಕಾರಿಗಳಿಗೆ ಹೇಗೆ ತಲುಪುತ್ತಿವೆ ಎಂಬುದರ ಮೇಲೆ ಆಕೆ ನಿಗಾ ವಹಿಸಿದ್ದರು. ಪೋಲೀಸರಿಗೆ ಇದರ ಸುಳಿವು ಸಿಕ್ಕಾಗ ಆಕೆಯನ್ನು ಬಂಧಿಸಿ ನಿರ್ದಯವಾಗಿ ಚಿತ್ರಹಿಂಸೆ ನೀಡಿದರೂ ಒಂದೇ ಒಂದು ರಹಸ್ಯವನ್ನೂ ಆಕೆಯಿಂದ ಪಡೆಯಲು ಅವರಿಗಾಗಲಿಲ್ಲ.

(ಮುಂದುವರೆಯುವುದು...)

"ಉತ್ತರ ಪ್ರದೇಶ ಸನ್ನಿವೇಶದ ಬಗ್ಗೆ ಸಿಪಿಐ(ಎಂ)ನೊಳಗೆ [illegible] ಇರಲಿಲ್ಲ, ಭಿನ್ನಾಭಿಪ್ರಾಯವೂ ಇರಲಿಲ್ಲ" ಎಂದು ಸಿಪಿಐ(ಎಂ)ನ ಪಾಲಿಟ್ ಬ್ಯೂರೋವಿನ ಸದಸ್ಯ ಸೀತಾರಾಂ ಯೆಚೂರಿಯವರು ಬಂಗಾಳಿಯ ದೈನಿಕ 'ಗಣಶಕ್ತಿ' ಗೆ ನೀಡಿದ ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ.



ಉತ್ತರ ಪ್ರದೇಶದ ಘಟನಾವಳಿ ಮತ್ತು ಸಿಪಿಐ(ಎಂ)ನ ನಿಲುವು

ಈ ಬಗ್ಗೆ ಸುದ್ದಿ ಮಾಧ್ಯಮಗಳು ಹುಟ್ಟು ಹಾಕಿದ ವಿವಾದದ ಬಗ್ಗೆ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು "ಕಲ್ಕತ್ತೆಯ ದೈನಿಕ ಆನಂದ ಬಝಾರ್ ಪತ್ರಿಕಾ ಮತ್ತು ಆನಂತರ ಕೆಲವು ದಿಲ್ಲಿಯ ದೈನಿಕಗಳು ನಾನು 356 ನೇ ಕಲಂ ಹೇರಿ ಉತ್ತರ ಪ್ರದೇಶ ಸರ್ಕಾರವನ್ನು ವಜಾ ಮಾಡಬೇಕೆಂಬ ಅಭಿಪ್ರಾಯಕ್ಕೆ ಪರವಾಗಿದ್ದರೆ, ಜ್ಯೋತಿಬಸು ಅದನ್ನು ವಿರೋಧಿಸಿದ್ದಾರೆ ಎಂಬ ಕಟ್ಟುಕತೆಗಳನ್ನು ಹರಡಿದವು. ಆದರೆ, ವಾಸ್ತವ ಸಂಗತಿಯೆಂದರೆ, 356 ನೇ ಕಲಂ ಅನ್ನು ಹೇರುವ ಪರವಾಗಿ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ" ಎಂದು ಯೆಚೂರಿಯವರು ಸ್ಪಷ್ಟಪಡಿಸಿದರು.

ಈ ಸಂದರ್ಭದ ಘಟನಾವಳಿಗಳನ್ನು ಯೆಚೂರಿಯವರು ಗಣಶಕ್ತಿಗೆ ನೀಡಿದ ಸಂದರ್ಭದಲ್ಲಿ ಈ ರೀತಿ ವಿವರಿಸಿದರು- ಮಾಯಾವತಿಯುವರು ಬಿಜೆಪಿ-ಬಿಎಸ್ಪಿ ಸಮ್ಮಿಶ್ರ ಸರ್ಕಾರದಿಂದ ಬೆಂಬಲ ಹಿಂತೆಗೆದುಕೊಂಡಿರುವುದಾಗಿ ಪ್ರಕಟಿಸಿದ ಅಕ್ಟೋಬರ್ 19 ರಂದು ಯೆಚೂರಿ ಭುವನೇಶ್ವರದಲ್ಲಿದ್ದರು. ಆಗ ಕೆಲವು ಪತ್ರಕರ್ತರು ಸಿಪಿಐ(ಎಂ)ನ ನಿಲುವು ಏನು ಎಂದು ಕೇಳಿದರು. "ಸಿಪಿಐ(ಎಂ) ಈ ಕಲಂ ಅನ್ನೇ ತೆಗೆದುಹಾಕಿಬಿಡಬೇಕೆಂದು ಹೇಳುತ್ತಾ ಬಂದಿದೆ. ಆದರೆ, ಬೇರೆ ರಾಜಕೀಯ ಪಕ್ಷಗಳು ಹಾಗೇ ಮಾಡಲು ಸಿದ್ಧವಿಲ್ಲವಾದ್ದರಿಂದ ಇನ್ನು ಮುಂದೆ ಅದರ ದುರಪಯೋಗವಾಗದಂತೆ ತಡೆಯಲು ಅದನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು ಒಪ್ಪಿದೆ. ಆದರೆ, ಈ ಪ್ರಶ್ನೆ ಈಗ ಅಂತರ ರಾಷ್ಟ್ರಮಂಡಳಿಯ ಸ್ಥಾಯಿ ಸಮಿತಿಯ ಮುಂದಿದೆ" ಎಂದು ಸೀತಾರಾಂ ಯೆಚೂರಿ ಉತ್ತರಿಸಿದರು.

ಒಬ್ಬ ಪತ್ರಕರ್ತ ನಿರ್ದಿಷ್ಟವಾಗಿ ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ ಬೆಂಬಲ ಹಿಂತೆಗೆದುಕೊಂಡ ನಂತರದ ಸನ್ನಿವೇಶದ ಬಗ್ಗೆ ಕೇಳಿದಾಗ ಯೆಚೂರಿ ಸಿಪಿಐ(ಎಂ) ನ ನಿಲುವನ್ನು ವಿವರಿಸುತ್ತಾ- "ಕಲ್ಯಾಣಸಿಂಗ್ ತಕ್ಷಣ ರಾಜೀನಾಮೆ ನೀಡದಿದ್ದುದು ತಾನೊಂದು ನೀತಿಬದ್ಧ ಪಕ್ಷವೆಂಬ ಬಿಜೆಪಿಯ ಸೋಗಲಾಡಿತನವನ್ನು ಬಯಲಿಗೆಳೆದಿದೆ. ವ್ಯಾಪಕ ಪ್ರಮಾಣದ ಕುದುರೆ ವ್ಯಾಪಾರದಿಂದ ಮಾತ್ರವೇ ಕಲ್ಯಾಣ ಸಿಂಗ್ ಸರ್ಕಾರ ಬದುಕುಳಿಯುವುದು ಸಾಧ್ಯ ಎಂಬುದು ಸ್ಪಷ್ಟವಾಗಿತ್ತು. ಅಕ್ಟೋಬರ್ 1996 ರ ಉತ್ತರಪ್ರದೇಶ ಚುನಾವಣೆಗಳ ನಂತರ ಯಾವುದೇ ಪಕ್ಷ ಅಥವಾ ಕೂಟಕ್ಕೆ ಅಲ್ಲಿ ಬಹುಮತ ಗಳಿಸಲು ಸಾಧ್ಯವಾಗಲಿಲ್ಲ. ಆದ್ದರಿಂದಲೇ ಅಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿ ವಿಧಾನ ಸಭೆಯನ್ನು ಅಮಾನತ್ತಿನಲ್ಲಿಡಲಾಯಿತು. ಆಗ ಬಿಎಸ್‌ಪಿ ಬಿಟ್ಟು ಬೇರೆಲ್ಲಾ ಪಕ್ಷಗಳು ಬಿಜೆಪಿ ಸರ್ಕಾರ ರಚಿಸಲು ತಮ್ಮ ಬೆಂಬಲ ಇಲ್ಲ ಎಂದು ಲಿಖಿತವಾಗಿ ರಾಜ್ಯಪಾಲರಿಗೆ ತಿಳಿಸಿದ್ದವು. ಬಹಳ ಸಮಯದ ನಂತರವಷ್ಟೇ ಬಿಜೆಪಿ ಮತ್ತು ಬಿಎಸ್‌ಪಿ ಒಂದು ಸಮಯಸಾಧಕ ವ್ಯವಸ್ಥೆ ಏರ್ಪಡಿಸಿಕೊಂಡರು. ಆ ಪ್ರಕಾರ ಸರದಿಯಂತೆ 6 ತಿಂಗಳಿಗೊಮ್ಮೆ ಮುಖ್ಯಮಂತ್ರಿಗಳನ್ನು ಬದಲಿಸಿ ಅಧಿಕಾರ ಹಂಚಿಕೊಳ್ಳುವ ವ್ಯವಸ್ಥೆ ಮಾಡಿಕೊಂಡರು. ಆದರೆ, ಈಗ ಬಿಎಸ್‌ಪಿ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿದೆ. ಪರಿಸ್ಥಿತಿ ಮತ್ತೆ ಮೊದಲಿನಂತಾಗುತ್ತದೆ. ಆದ್ದರಿಂದ ಕಲ್ಯಾಣ ಸಿಂಗ್‌ಗೆ ಅಧಿಕಾರದಲ್ಲಿ ಮುಂದುವರೆಯಲು ಯಾವುದೇ ಆಧಾರವಿರಲಿಲ್ಲ. ನೈತಿಕವಾಗಿ ಅವರು ರಾಜೀನಾಮೆ ನೀಡಲು ಬದ್ಧರಾಗಿದ್ದರು. ಅವರನ್ನು ಅಧಿಕಾರದಲ್ಲಿರಲು ಬಿಡುವುದೆಂದರೆ, ಕುದುರೆ ವ್ಯಾಪಾರಕ್ಕಾಗಿ ಬಾಗಿಲನ್ನು ದೊಡ್ಡದಾಗಿ ತೆರೆದಿಟ್ಟಂತೆಯೇ ಆಗಿತ್ತು" ಎಂದರು. ಆದರೆ, ಕೇಂದ್ರ ಸರ್ಕಾರ ಅವರಿಗೆ ವಿಧಾನ ಸಭೆಯಲ್ಲಿ ತನ್ನ ಬಹುಮತ ಸಾಬೀತುಪಡಿಸಲು 48 ಗಂಟೆ ಕೊಡಲು ನಿರ್ಧರಿಸಿತು. ಇದರಿಂದ ವ್ಯಾಪಕ ಪ್ರಮಾಣದ ಕುದುರೆ ವ್ಯಾಪಾರ ಪಕ್ಷಾಂತರಗಳಿಗೆ ಅವಕಾಶವಾಯಿತು. ಹೀಗೆ ಸನ್ನಿವೇಶ ಬದಲಾಯಿತು.

ಅಕ್ಟೋಬರ್ 20 ರಂದು ಯೆಚೂರಿ ದಿಲ್ಲಿಗೆ ಮರಳಿದರು. ಆಗ ಪತ್ರಕರ್ತರು ಅವರನ್ನು ಕೇಳಿದಾಗ ಕಲ್ಯಾಣಸಿಂಗ್‌ಗೆ ಅವಕಾಶ ನೀಡಿರುವುದರಿಂದ ಅದರ ಫಲಿತಾಂಶವನ್ನು, ಕಾದುನೋಡಬೇಕೆಂದರು. ಆದರೆ, ಬಿಜೆಪಿಗೆ 'ಪ್ರಜಾಪ್ರಭುತ್ವ' ದ ಬಗ್ಗೆ ಮಾತನಾಡುವ ಹಕ್ಕಂತೂ ಏನೂ ಇಲ್ಲ ಎಂದೂ ಅವರು ಹೇಳಿದರು. ಏಕೆಂದರೆ, ಈ ಹಿಂದೆ ಬಿಎಸ್.ಪಿ ಮುಲಾಯಂ ಸಿಂಗ್ ಸರ್ಕಾರಕ್ಕೆ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಾಗ ಅವರಿಗೆ ವಿಧಾನ ಸಭೆಯಲ್ಲಿ ತನ್ನ ಬಹುಮತವನ್ನು ಸಾಬೀತು ಮಾಡಲು ಅವಕಾಶ ಕೊಡಲಿಲ್ಲ. ಆಗ ಬಿಜೆಪಿ ಯಾವುದೇ ಪ್ರತಿಭಟನೆ ತೋರಿಸಲಿಲ್ಲ. "ಪ್ರಜಾಪ್ರಭುತ್ವ ನೀತಿಗಳ" ಬಗ್ಗೆ ಆತಂಕ ಈಗಷ್ಟೇ ಇವಕ್ಕೆ ಬಂದಿದೆ. ವಾಸ್ತವವಾಗಿ ಆಗ ಬಿಜೆಪಿ ಮಾಯಾವತಿಯವರನ್ನು ಬೆಂಬಲಿಸಿ ಮಧ್ಯರಾತ್ರಿಯಲ್ಲಿ ಆಕೆ ಮುಖ್ಯಮಂತ್ರಿಯಾದರು. ಅಕ್ಟೋಬರ್ 20 ರಂದು ಕಲ್ಯಾಣಸಿಂಗ್ ಸರ್ಕಾರ ಅಭೂತಪೂರ್ವ ಹಿಂಸಾಚಾರ ಹಾಗೂ ಬಿಎಸ್‌ಪಿಯಿಂದ 12, ಕಾಂಗ್ರೇಸ್‌ನಿಂದ 22 ಹಾಗೂ ಜನತಾದಳದಿಂದ 4 ಪಕ್ಷಾಂತರಿಗಳ ನೆರವಿನಿಂದ ವಿಶ್ವಾಸಮತ ಗೆದ್ದುಕೊಂಡಿತು. ಅಂದು ಪ್ರಧಾನ ಮಂತ್ರಿಗಳ ನಿವಾಸದಲ್ಲಿ ನಡೆದ ಸಂಯುಕ್ತರಂಗ ಚಾಲನಾ ಸಮಿತಿ ಸಭೆಯಲ್ಲಿ ಯೆಚೂರಿ ಸಿಪಿಐ(ಎಂ)ನ ನಿಲುವನ್ನು ತಿಳಿಸಿದರು. ಕಲ್ಯಾಣಸಿಂಗ್‌ಗೆ ಬಹುಮತ ಸಾಬೀತುಪಡಿಸಲು ಅವಕಾಶ ನೀಡಿದ್ದರಿಂದ ಕೇಂದ್ರ ಸರ್ಕಾರಕ್ಕೆ ವಿಧಾನ ಸಭೆಯ ತೀರ್ಪಿನ ಪ್ರಕಾರ ನಡೆಯುವುದಲ್ಲದೆ ಬೇರೆ ಆಯ್ಕೆ ಇಲ್ಲ ಎಂದು ಸೀತಾರಾಂ ಯೆಚೂರಿ ಹೇಳಿದರು. ಅದೇ ವೇಳೆಗೆ ಉತ್ತರ ಪ್ರದೇಶದ ವಿಧಾನ ಸಭೆಯೊಳಗಿನ ನಿಜವಾದ ಘಟನಾವಳಿಗಳ ಹಾಗೂ ಹೇಗೆ ಬಹುಮತ ಗಿಟ್ಟಿಸಿದರು ಎಂಬ ಬಗ್ಗೆ ಪ್ರತ್ಯೇಕ ತನಿಖೆ ಏರ್ಪಡಿಸಬೇಕು ಎಂದು ಅವರು ಹೇಳಿದರು.

ಅಕ್ಟೋಬರ್ 21 ರ ಹಗಲು, ರಾತ್ರಿ ಕೇಂದ್ರ ಸಂಪುಟದ ಹಲವು ಸಭೆಗಳು ನಡೆದವು. ಸಿಪಿಐ(ಎಂ) ಸಂಪುಟದ ಭಾಗವಾಗಿಲ್ಲವಾದ್ದರಿಂದ ಅಕ್ಟೋಬರ್ 21 ರ ರಾತ್ರಿ ರಾಷ್ಟ್ರಪತಿ ಆಳ್ವಿಕೆ ಹೇರುವ ನಿರ್ಣಯದಲ್ಲಿ ಅದರ ಪಾತ್ರವೇನೂ ಇಲ್ಲ. ಆದರೆ, ರಾಷ್ಟ್ರಪತಿ ಕೆ.ಆರ್.ನಾರಾಯಣನ್ 356 ನೇ ಕಲಮನ್ನು ಹೇರುವ ಶಿಫಾರಸ್ಸನ್ನು ಮರುಪರಿಶೀಲಿಸಿ ಎಂದು ಹಿಂದೆ ಕಳಿಸಿದರು. ಕಾನೂನು ಅಭಿಪ್ರಾಯ ಕೂಡ ಕಲ್ಯಾಣ ಸಿಂಗ್ ಬಹುಮತ ಪಡೆದ ಮೇಲೆ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವುದಕ್ಕೆ ವಿರುದ್ಧವಾಗಿತ್ತು.

ಅಕ್ಟೋಬರ್ 22 ರಂದು ಕೇಂದ್ರ ಸಂಪುಟ ಮತ್ತೆ ಸಭೆ ಸೇರಿ ರಾಷ್ಟ್ರಪತಿಗಳು ಹಿಂದೆ ಕಳಿಸಿದ ಮೇಲೂ ಕಲಮು 356 ನ್ನು ಹೇರಬೇಕೇ ಎಂದು ಮರು ಪರಿಶೀಲಿಸಿತು. ಅಂದು ಬೆಳಿಗ್ಗೆ ಜ್ಯೋತಿಬಸು ಗುವಾಹಟಿಯಲ್ಲಿದ್ದರು. ಯೆಚೂರಿ ಜ್ಯೋತಿಬಸುರೊಡನೆ ಫೋನಿನಲ್ಲಿ ಮಾತಾಡಿದಾಗ ಅವರು ಪ್ರತಿಯೊಂದು ಹೆಜ್ಜೆಯೂ ಕಾನೂನು ಬದ್ಧವಾಗಿರಬೇಕು, ರಾಷ್ಟ್ರಪತಿಗಳು ಸಂಪುಟದ ಶಿಫಾರಸ್ಸನ್ನು ಹಿಂತಿರುಗಿಸಿರುವುದರಿಂದ ಆ ನಿರ್ಣಯವನ್ನು ಹಿಂತೆಗೆದುಕೊಳ್ಳಬೇಕು ಎಂದು ಜ್ಯೋತಿಬಸು ಹೇಳಿದರು. ಯೆಚೂರಿಯವರು ಪ್ರಧಾನ ಮಂತ್ರಿಯವರಿಗೆ ಫೋನ್ ಮಾಡಿದಾಗ ಸಂಪುಟ ಸಭೆ ನಡೆಯುತ್ತಿತ್ತು. ಯೆಚೂರಿ ಸಿಪಿಐ(ಎಂ)ನ ನಿಲುವನ್ನು ತಿಳಿಸಿದರು. ಕೊನೆಗೆ ಸಂಪುಟ ರಾಷ್ಟ್ರಪತಿ ಆಳ್ವಿಕೆ ಹೇರದಿರಲು ನಿರ್ಧರಿಸಿತು.

ಈ ಘಟನಾವಳಿಯನ್ನು ನೋಡಿದಾಗ ಸಿಪಿಐ(ಎಂ)ನ ನಿಲುವಿನಲ್ಲಿ ಯಾವುದೇ ಅಸಂಗತತೆ ಇಲ್ಲ ಎಂಬುದು ಕಂಡುಬರುತ್ತದೆ. ಅಕ್ಟೋಬರ್ 19 ರಂದು ಕಲ್ಯಾಣ ಸಿಂಗ್ ಕೆಳಗಿಳಿಯಬೇಕೆಂದು ಪಕ್ಷ ಅಭಿಪ್ರಾಯಪಟ್ಟಿತು. ಅವರನ್ನು ವಜಾಮಾಡಬೇಕೆಂದು ಒತ್ತಾಯಿಸಿ ಒಂದು ಹೇಳಿಕೆ ನೀಡಿತು. ಆದರೆ, ಅವರು ನಾಚಿಕೆ ಇಲ್ಲದೆ ಮುಂದುವರೆದುದರಿಂದ ಹಾಗೂ ಬಲಪ್ರದರ್ಶನಕ್ಕೆ ಅವರಿಗೆ ಅವಕಾಶ ನೀಡಿದ್ದರಿಂದ ಈ ನಿರ್ಣಯದ ಪರಿಣಾಮಗಳನ್ನು ಪಕ್ಕಕ್ಕೆ ತಳ್ಳಲು ಸಾಧ್ಯವಿರಲಿಲ್ಲ. ಬಿಜೆಪಿ ತಾನು ಗೆದ್ದೆ ಎಂದು ಒದರಾಡುತ್ತಿದ್ದರೂ ಅದೊಂದು ಸುಳ್ಳುಗಳು ಮತ್ತು ಸೋಗಲಾಡಿತನದ ಮೇಲೆ ನಿಂತ ಪಕ್ಷವೆಂದು ಮತ್ತೊಮ್ಮೆ ಬಯಲಿಗೆ ಬಂತು. ಇತರ ಪಕ್ಷಗಳಿಂದ ಎಂ.ಎಲ್.ಎ ಗಳನ್ನು ಖರೀದಿಸಲು ಎಲ್ಲಾ ಪ್ರಜಾಪ್ರಭುತ್ವ ನೀತಿಗಳನ್ನು ಬಿಟ್ಟರೂ ಆ ಪಕ್ಷ ಪ್ರಜಾಪ್ರಭುತ್ವದ ಮಾತನಾಡುತ್ತಿದೆ. ಸಿಪಿಐ(ಎಂ) ನ ಮಟ್ಟಿಗಂತೂ ಕಲಮು 356 ಕ್ಕೆ, ಅದರ ದುರುಪಯೋಗಕ್ಕೆ ಇರುವ ಅದರ ಮೂಲಭೂತ ವಿರೋಧದ ನಿಲುವೇನೂ ಬದಲಾಗಿಲ್ಲ. ಅದೇ ವೇಳೆಗೆ ಸಿಪಿಐ(ಎಂ) ಕೋಮುವಾದಿ ಬಿಜೆಪಿಯ ವಿರುದ್ಧ ಸಮರದಲ್ಲೂ ಮುಂಚೂಣಿಯಲ್ಲಿರುತ್ತದೆ.

ಪತ್ರಿಕೆಗಳು ಸಿಪಿಐ(ಎಂ)ನ ನಿಲುವನ್ನು ಉದ್ದೇಶ ಪೂರ್ವಕವಾಗಿ ವಿರೂಪಗೊಳಿಸಿರುವುದರ ಬಗ್ಗೆ ಹೇಳುತ್ತಾ ಯೆಚೂರಿಯವರು "ಹಿಂದೂಸ್ತಾನ್ ಟೈಮ್ಸ್' ನಂತಹ ದಿಲ್ಲಿಯ ಪತ್ರಿಕೆಗಳು ಅಕ್ಟೋಬರ್ 23 ರಂದು ಈ ಘಟನಾವಳಿಯ ಬಗ್ಗೆ ತನ್ನ ಹೇಳಿಕೆಯನ್ನು ಸುಮಾರಾಗಿ ಸರಿಯಾಗಿಯೇ ಪ್ರಕಟಿಸಿದ್ದರೂ ಆನಂದ ಬಝಾರ್ ಪತ್ರಿಕೆಯಲ್ಲಿನ ಕಟ್ಟುಕತೆಯ ನಂತರ 'ಹಿಂದೂಸ್ತಾನ್ ಟೈಮ್ಸ್' ಕಲ್ಕತ್ತಾದ ವರದಿಗಾರ ಕೂಡ ಯೆಚೂರಿ ಹಾಗೂ ಬಸುರವರ ನಡುವೆ ಭಿನ್ನಾಭಿಪ್ರಾಯವಿದೆ ಎಂದು ವರದಿ ಮಾಡಿದರು. ಸಿಪಿಐ(ಎಂ)ನ ಹೆಸರು ಕೆಡಿಸುವ ಉದ್ದೇಶದಿಂದಲೇ ಇಂತಹ ವಿರೂಪಗೊಳಿಸಿದ ವರದಿಯನ್ನು ಈ ಪತ್ರಿಕೆಗಳು ಪ್ರಕಟಿಸುತ್ತವೆ ಎನ್ನುತ್ತಾರೆ ಯೆಚೂರಿಯವರು. ○

ಜಾಗತೀಕರಣ: ಅಮೇರಿಕಾದಲ್ಲಿ ಸೀನು-ಜಗತ್ತಿಗೆಲ್ಲ ನೆಗಡಿ

ವಾರದ ಆರ್ಥಿಕ ಟಿಪ್ಪಣಿಗಳು

ಡಿ.ಎಸ್.ಮಣಿ

ಕಳೆದವಾರ ಅಮೇರಿಕದ ಡೌಜೋನ್ಸ ಶೇರು ಮಾರುಕಟ್ಟೆಯಲ್ಲಿ ಕುಸಿತ ಉಂಟಾಗಿ ಜಗತ್ತಿನಾದ್ಯಂತ ಶೇರು ಮಾರುಕಟ್ಟೆಗಳು ತತ್ತರಿಸಿದವು. 1989 ರ ಲಂಡನ್ ಶೇರು ಮಾರುಕಟ್ಟೆಯಲ್ಲಿನ ಕುಸಿತದ ನಂತರ ಇದೇ ಅತಿ ದೊಡ್ಡ ಶೇರು ಮಾರುಕಟ್ಟೆ ಕುಸಿತವಂತೆ.

ಒಂದು ದಿನ ಮೊದಲು ಹಾಂಗ್ ಕಾಂಗಿನ ಹಾಂಗ್‌ಸೆಂಗ್ ಶೇರು ಮಾರುಕಟ್ಟೆಯಲ್ಲಿ ಕುಸಿತ ಉಂಟಾಗಿತ್ತು. ಇದರಿಂದ ಏಷಿಯಾದ ಹಣಕಾಸು ಮಾರುಕಟ್ಟೆಯಲ್ಲಿ ಆಗಲೇ ಅಲ್ಲೋಲ ಕಲ್ಲೋಲ ಪ್ರಾರಂಭವಾಗಿತ್ತು. ಈ ಅಲ್ಲೋಲ ಕಲ್ಲೋಲದ ಪರಿಣಾಮವಾಗಿ ಅಮೇರಿಕಾದ ನ್ಯೂಯಾರ್ಕಿನಲ್ಲಿ ಶೇರುಗಳ ಅತಿಯಾದ ಮಾರಾಟ ಪ್ರವೃತ್ತಿ ಕಂಡುಬಂದು ಶೇರು ಬೆಲೆಗಳು ತೀವ್ರವಾಗಿ ಕುಸಿಯತೊಡಗಿದವು. ಈ ಕುಸಿತ 550 ಅಂಶಗಳಿಗೂ ಹೆಚ್ಚಿನದ್ದಾಗಿತ್ತು. ಇದು ನ್ಯೂಯಾರ್ಕಿನ ಡೌ ಶೇರು ಮಾರುಕಟ್ಟೆ ಕಂಡ ಅತ್ಯಂತ ದೊಡ್ಡ ಕುಸಿತ.

ಡೌ ಜೋನ್ಸ್ ಶೇರು ಮಾರುಕಟ್ಟೆಯಲ್ಲಿನ ಕುಸಿತದ ಸುದ್ದಿ ಹರಡುತ್ತಿದ್ದಂತೆ ಜಗತ್ತಿನಾದ್ಯಂತ ವಿವಿಧ ಮಾರುಕಟ್ಟೆಗಳಲ್ಲಿ ಕುಸಿತ ಉಂಟಾಗತೊಡಗಿತು.

ಜಪಾನಿನ ನಿಕ್ಕಿ ಶೇರು ಸೂಚ್ಯಂಕ, ಹಾಂಕಾಂಗಿನ ಹಾಂಗ್‌ಸೆಂಗ್ ಸೂಚ್ಯಾಂಕ, ಭಾರತದ ಎನ್‌ಎಸ್‌ಇ ಸೂಚ್ಯಾಂಕ ಇವೆಲ್ಲ ಕುಸಿತ ಕಂಡವು.

ಅಮೇರಿಕಾ ಸರ್ಕಾರದ ಮಧ್ಯಪ್ರವೇಶದ ನಂತರ ಶೇರು ಮಾರುಕಟ್ಟೆ ಸುಧಾರಿಸಿದಂತೆ ಕಂಡು ಬಂತು. ಆದರೆ ಮೊದಲ ದಿನದ ಕಂಗಾಲು ಪರಿಸ್ಥಿತಿ ಆಗಲೇ ಸಾಕಷ್ಟು ಹಾನಿ ಮಾಡಿತ್ತು. ಜಗತ್ತಿನ ಅತ್ಯಂತ ಶ್ರೀಮಂತ ಬಿಲ್ ಗೇಟ್ಸ್ 1.8 ಶತಕೋಟಿ ಡಾಲರುಗಳಷ್ಟು ಬಡವನಾದನಂತೆ. ಹೀಗೆ ಶೇರುಗಳಲ್ಲಿ ಹಣ ತೊಡಗಿಸಿದವರ ಹಣ ಮುಳುಗಿತ್ತು. ಈ ಅಲ್ಲೋಲ ಕಲ್ಲೋಲ ಬಹಳ ದಿನ ಉಳಿಯುವಂತಹದ್ದೆಂಬ ಭಾವನೆ ಗಾಢವಾಗಿದ್ದರೂ ಅಮೇರಿಕನ್ ಸರ್ಕಾರದ ಮಧ್ಯಪ್ರವೇಶದಿಂದಾಗಿ ಪರಿಸ್ಥಿತಿ ಸುಧಾರಿಸಿತು.

ಜಾಗತೀಕರಣ ಎಂತಹ ದುಷ್ಪರಿಣಾಮಗಳನ್ನು ಎಂತಹ ಕಷ್ಟಗಳನ್ನು ನಮಗೆ ತಂದೊಡ್ಡಬಹುದೆಂಬ ಬಗ್ಗೆ ಈ ಘಟನೆ ಒಂದು ಸೂಚನೆ ನೀಡಿತು ಅಷ್ಟೇ. ದೇಶ ದೇಶಗಳ ನಡುವೆ ಇರುವ ನಿರ್ಬಂಧಗಳು ಕಡಿಮೆಯಾದೊಡನೆ ಸಾಮ್ರಾಜ್ಯಶಾಹಿ ದೇಶಗಳಲ್ಲಿನ ಸಮಸ್ಯೆಗಳು ನಮ್ಮ ದೇಶದೊಳಗೆ ಹರಿದು ಬರುತ್ತವೆ. ಹಾಗೆಯೇ ಅಲ್ಲಿನ ಸಮೃದ್ಧಿ, ಸುಖ ಐಶ್ವರ್ಯಗಳು ಹರಿದು ಬರುವುದಿಲ್ಲ.

ವಿದೇಶೀ ವಾಣಿಜ್ಯ ಮೂಲಗಳಿಂದ ಬಂಡವಾಳ ಸಂಗ್ರಹಿಸುವ ಯೋಜನೆ ಇಟ್ಟುಕೊಂಡಿದ್ದ ಭಾರತೀಯ ಕಂಪನಿಗಳು ಈಗ ಕೂಡಲೇ ಈ ಸಂಗ್ರಹಣೆ ಮಾಡುವಂತಿಲ್ಲ. ಅಂದರೆ ಈ ಗಂಡಾಂತರಕಾರಿ ಸಮಸ್ಯೆಯಿಂದ ಭಾರತೀಯ ಬಂಡವಾಳಿಗರಿಗೂ ಹೊಡೆತ ಬಿದ್ದಿದೆ ಎಂಬುದು ಸ್ಪಷ್ಟ.

ಗಟ್ಟಿಯಾದ ಕಾರಣಗಳಿಗೆ ಇಂತಹ ಗಂಡಾಂತರ ಉಂಟಾದರೆ ಆಗ ಅದನ್ನು ಹತೋಟಿಗೆ ತರುವುದು ಸುಲಭ. ಆದರೆ ಬರೀ ಜೂಜು/ಸಟ್ಟಾ ವ್ಯವಹಾರ ನಡೆವಲ್ಲಿ ವ್ಯವಹಾರ ಏರುವಲ್ಲಿ ಇಳಿಯುವಲ್ಲಿ ಗಟ್ಟಿ ಕಾರಣಗಳಿರುವುದಿಲ್ಲ. ಆದ್ದರಿಂದಲೇ ಇದರ ಹತೋಟಿ ಸಾಧ್ಯವಿಲ್ಲ.

ಈಗ ಒಂದು ಅತ್ಯಂತ ಗಂಡಾಂತರಕಾರಿ ಸಮಸ್ಯೆ ಮುಖ ತೋರಿ ಹೋಗಿದೆ. ಸಮಸ್ಯೆಗಳು ಹೇಗೆ ಬರುತ್ತವೆ ಎಂಬುದಕ್ಕೆ ಒಳ್ಳೆಯ ನಿದರ್ಶನ ನೀಡಿದೆ. ಮುಂದೆ ಜಾಗತೀಕರಣದಿಂದಾಗಿ ಜಗತ್ತಿನ ಯಾವುದೇ ಮೂಲೆಯಲ್ಲಿ ಉಂಟಾಗುವ ಸಮಸ್ಯೆಯೂ ಕೂಡಲೇ ಭಾರತದೊಳಕ್ಕೆ ಹರಿದು ಬಂದು ಬೆಳೆದು ಭಯಂಕರವಾಗುವುದು ಖಂಡಿತ ಜಾಗತೀಕರಣದ ಕೊಡುಗೆ ಅಲ್ಲವೇ?

ಡೌ ಜೋನ್ಸ್ ಸೂಚ್ಯಂಕ

ಡೌ ಜೋನ್ಸ್ ಇಂಡಸ್ಟ್ರಿಯಲ್ ಎವರೇಜ್ ಎಂದರೆ ಡೌ ಜೋನ್ಸ ಅಂಡ್ ಕೋ. ಎಂಬ ಕಂಪನಿ ಪ್ರಾರಂಭಿಸಿದ ಸೂಚ್ಯಂಕ. ಈ ಕಂಪನಿಯನ್ನು ಪ್ರಾರಂಭಿಸಿದವರು ಚಾರ್ಲ್ಸ್ ಹೆಚ್ ಡೌ ಮತ್ತು ಎಡ್ವರ್ಡ್ ಜೋನ್ಸ್. ಈ ಸೂಚ್ಯಂಕ 1896 ರ ಮೇ 2 ರಂದು ಪ್ರಾರಂಭವಾಯಿತು. "ವಾಲ್ ಸ್ಟ್ರೀಟ್ ಜನರಲ್" ಎಂಬ ಪತ್ರಿಕೆಯನ್ನು ಈ ಕಂಪನಿ ಪ್ರಕಟಿಸುತ್ತದೆ. ಜಗತ್ತಿನಾದ್ಯಂತ ಈ ಪತ್ರಿಕೆ ಹೆಸರುವಾಸಿ. ಇದು ಅಮೇರಿಕಾದ ಶೇರು ಮಾರುಕಟ್ಟೆಯನ್ನು ಪೂರ್ಣವಾಗಿ ಪ್ರತಿನಿಧಿಸುವುದಿಲ್ಲ ಎಂಬ ಪುಕಾರಿದ್ದರೂ ಜಗತ್ತಿನಾದ್ಯಂತ ಈ ಸೂಚ್ಯಂಕಕ್ಕೆ ಬಹಳ ಮಹತ್ವವಿದೆ. ವ್ಯಕ್ತಿಗಳ, ದೇಶಗಳ, ಆರ್ಥಿಕಗಳ ಏಳು ಬೀಳುಗಳನ್ನು ನಿರ್ಧರಿಸುವಷ್ಟು ಪ್ರಬಲ ಈ ಸೂಚ್ಯಂಕ. ಸಾಮ್ರಾಜ್ಯಶಾಹಿಗಳ ಒಂದು ದೊಡ್ಡ ಅಸ್ತ್ರವೂ ಹೌದು ಇದು.

ನಾಲ್ಕು ಟ್ರಕ್ ಕೊಂಡರೆ ಒಂದು ಸುಮೋ ಕಾರ್

ಇದು ಪ್ರಮುಖ ಹಣಕಾಸು ದೈನಿಕದಲ್ಲಿ ಬಂದ ವರದಿ. ಈ ತಂತ್ರ ಅನುಸರಿಸುತ್ತಿರುವುದು ಟೆಲ್ಕೊ ಎಂಬ ಟಾಟಾ ಕಂಪನಿ. ಯಾಕೆ ಎಂದು ಕೇಳಿದಿರಾ? ಯಾಕೆಂದರೆ ಟೆಲ್ಕೋ ಟ್ರಕ್ಕುಗಳ ಉತ್ಪಾದನೆ ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಆಗಿ ಈಗ ಅವು ಮಾರಾಟಗಾರರ ಹತ್ತಿರ ಕೊಳೆಯುತ್ತ ಬಿದ್ದಿವೆ. ಕೋಟ್ಯಾಂತರ ರೂಪಾಯಿಗಳ ಬೆಲೆಯ ಸರಕುಗಳು ಹೀಗೆ ಕೊಳೆಯುತ್ತ ಬಿದ್ದಿದ್ದರೆ ಅದರಿಂದ ಬಂಡವಾಳಿಗರಿಗೆ ಬಂಡವಾಳ ಸಂಚಯ ಆಗುವುದಿಲ್ಲ. ಇದರಿಂದಾಗಿ ಹಣಕಾಸು ಮುಗ್ಗಟ್ಟು ಉಂಟಾಗುತ್ತದೆ. ನಷ್ಟ ಉಂಟಾಗುತ್ತದೆ. ಟ್ರಕ್ಕುಗಳು ಹಾಗೆ ಕೊಳೆಯುವ ಬದಲು ಕಡಿಮೆ ಬೆಲೆಗಾದರೂ ಬಿಕರಿಯಾಗಲಿ ಎಂಬುದೇ ಈ ಹತಾಶ ಮಾರಾಟದ ಉದ್ದೇಶ.

ಈಗ ಅಂತಹ ಪರಿಸ್ಥಿತಿ ಭಾರತದ ಆರ್ಥಿಕದಲ್ಲಿ ಇದೆ. ಔದ್ಯಮಿಕ ಸರಕುಗಳಿಗೆ ಬೇಡಿಕೆ ಉತ್ಪಾದನಾ ಸಾಮರ್ಥ್ಯಕ್ಕೆ ತಕ್ಕಂತೆ ಇಲ್ಲ. ಉತ್ಪಾದನೆಯಾದಷ್ಟೂ ಸರಕುಗಳು ಬಿಕರಿ ಆಗುವುದಿಲ್ಲ. ಬಿಕರಿಯಾಗದೆ ಮತ್ತೆ ಉತ್ಪಾದನೆ ಮಾಡುವಂತಿಲ್ಲ. ಔದ್ಯಮಿಕ ಚಟುವಟಿಕೆಗಳ ಮಟ್ಟದಲ್ಲೇ ಇಳಿತ ಉಂಟಾಗುತ್ತದೆ. ಇದರಿಂದ ಸಹಸ್ರಾರು ಕೆಲಸಗಾರರು ನಿರುದ್ಯೋಗಿಗಳಾಗುತ್ತಾರೆ. ಉಪವಾಸ ಬೀಳುತ್ತಾರೆ.

ಮಾರುಕಟ್ಟೆ ಶಕ್ತಿಗಳಿಗೆ ಪ್ರಾಮುಖ್ಯತೆ ಇರುವ ಆರ್ಥಿಕದಲ್ಲಿ ಇದು ಸಾಮಾನ್ಯ. ಅಭಿವೃದ್ಧಿಶೀಲ ದೇಶಗಳು ಮತ್ತು ಹಿಂದುಳಿದ ದೇಶಗಳಲ್ಲಿ ಇದರಿಂದಾಗುವ ನೋವು ತೀವ್ರವಾದದ್ದು. ಉದಾರೀಕರಣ ಸಾಧಿಸಿರುವುದು ಇದನ್ನೇ.

ಮುಂಬೈ ಕ್ಲಬ್ಬಿಗೆ ಬೆಂಬಲ

ಉದಾರೀಕರಣವನ್ನು ಸೀಮಿತವಾಗಿ ಮಾಡಬೇಕು ಎಂಬ ವಾದ ಮುಂದಿಟ್ಟ ಬಂಡವಾಳಿಗರ ಒಂದು ಗುಂಪು ಈಗ ಅಲ್ಪ ಗೆಲುವು ಕಂಡಿದೆ. ಪ್ರಧಾನಿ ಐ.ಕೆ. ಗುಜ್ರಾಲ್ ದೇಶೀ ಉದ್ದಿಮೆಗಳಿಗೆ ಅವಶ್ಯ ರಕ್ಷಣೆ ನೀಡಲಾಗುವುದು ಎಂದಿದ್ದಾರೆ. ದೇಶದ ಹಿತಾಸಕ್ತಿಗಳನ್ನು ರಾಜಿ ಮಾಡಿಕೊಳ್ಳಲಾಗುವುದಿಲ್ಲ ಎಂದಿದ್ದಾರೆ ಅವರು.

ಇದರ ಜೊತೆಗೆ ಯಾವುದೇ ಒಬ್ಬ ವ್ಯಕ್ತಿಯನ್ನು ಸುಮ್ಮನೆ ತೊಂದರೆಗೊಳಪಡಿಸುವುದಿಲ್ಲ. ಆದರೆ ಅಂತಹ ವ್ಯಕ್ತಿಗಳು ದೇಶದ್ರೋಹದ ಕಾರ್ಯದಲ್ಲಿ ತೊಡಗಿದ್ದರೆ ಅದನ್ನೂ ಸಹಿಸಲಾಗದು ಎಂದಿದ್ದಾರೆ.

ಈ ಮಾತು ಟಾಟಾ ಚಹ ಕಂಪನಿ ಅಸ್ಸಾಮಿನಲ್ಲಿ ಉಲ್ಫಾ ಭಯೋತ್ಪಾದಕರಿಗೆ ನೆರವು ನೀಡಿದ ಬಗೆಗಿನದಾದರೂ ದೇಶೀ ಕಂಪನಿಗಳಿಗೆ ರಕ್ಷಣೆ ನೀಡುವ ಮಾತು ಮೊದಲ ಬಾರಿಗೆ ಬಂದಿದೆ. ಮುಂಬೈ ಕ್ಲಬ್ ಎಂಬ ಬಂಡವಾಳಿಗರ ಗುಂಪಿಗೆ ಬೆಂಬಲ ದೊರೆಯುತ್ತಿರುವುದು ಈಗ ಸ್ಪಷ್ಟ.

ಚಿನ್ನ ಆಮದು ಉದಾರೀಕರಣ: ಹಿಂಬಾಗಿಲಿನಿಂದ ದರೋಡೆ

ಕೆಲವು ದಿನಗಳ ಹಿಂದೆ ಕೇಂದ್ರ ಸರ್ಕಾರ ಚಿನ್ನದ ಆಮದನ್ನು ತೀವ್ರವಾಗಿ ಉದಾರೀಕರಿಸಿತು. ಹತ್ತು ಬ್ಯಾಂಕುಗಳಿಗೆ ಚಿನ್ನ ಆಮದಿನ ಜವಾಬ್ದಾರಿ ವಹಿಸಲಾಯಿತು. ಇದರಿಂದ ಚಿನ್ನ ದೊಡ್ಡ ಪ್ರಮಾಣದಲ್ಲಿ ದೇಶದೊಳಕ್ಕೆ ಬರಲಿದೆ. ಚಿನ್ನದ ಕಳ್ಳ ಸಾಗಾಣಿಕೆ ಕಡಿಮೆಯಾಗುತ್ತದೆ ಎಂಬುದು ಸರ್ಕಾರದ ವಾದ. ಇದು ನಿಜವಿರಬಹುದು.

ಆದರೆ ಚಿನ್ನದ ಬೆಲೆ ಕುಸಿಯುತ್ತದೆ. ಒಂದು ವಿಶ್ಲೇಷಣೆಯ ಪ್ರಕಾರ ಚಿನ್ನದ ಬೆಲೆ ಕಡಿಮೆಯಾಗುವುದರಿಂದ ಆಭರಣಗಳ ರಫ್ತು ಹೆಚ್ಚಾಗಿ ಡಾಲರಿಗೆ ಬೇಡಿಕೆ ಹೆಚ್ಚಾಗಿ ಅದು ದೇಶದೊಳಕ್ಕೆ ಹರಿದು ಬರತೊಡಗುವುದಂತೆ. ರೂಪಾಯಿಯ ಬೆಲೆಯ ಕುಸಿತ ಉಂಟಾಗುತ್ತದೆ. ರೂಪಾಯಿಯ ಬೆಲೆ ಕುಸಿದರೆ ಅದರಿಂದ ರಫ್ತಿಗೇ ಪುಷ್ಟಿ ದೊರೆತು ರಫ್ತು ಹೆಚ್ಚಾಗುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಇದು ಪರೋಕ್ಷವಾಗಿ ರೂಪಾಯಿಯ ಅಪಮೌಲ್ಯಕರಣ ಮಾಡಿದಂತೆ.

ಈ ಕ್ರಮ ಮುಖ್ಯವಾಗಿ ಬಂಡವಾಳ ಖಾತೆಯ ಪರಿವರ್ತನೀಯತೆಯ ಪೂರ್ವ ಕ್ರಮವಾಗಿ ಬಂದಿರುವ ಕ್ರಮ.

ರೂಪಾಯಿಯ ಅಪಮೌಲ್ಯೀಕರಣದಿಂದ ಹಣದುಬ್ಬರ ಹೆಚ್ಚಾಗಿ ದೇಶದ ದುಡಿಯುವ ಜನರನ್ನು ಹಿಂಡುತ್ತದೆ.

ಚೆ: ದಿನೇದಿನೇ ಪ್ರಗಾಢವಾಗುತ್ತಿರುವ ಬೃಹತ್ ನೈತಿಕ ಶಕ್ತಿ - ಫಿಡೆಲ್ ಕ್ಯಾಸ್ಟ್ರೋ

ಈಗಾಗಲೇ 'ಏಕರಂಗ' ದಲ್ಲಿ ವರದಿಯಾಗಿರುವಂತೆ ಅಕ್ಟೋಬರ್ ೧೭, ೧೯೯೭ ರಂದು ಕ್ಯೂಬಾದ ವಿಲ್ಲಾಕ್ಲಾರಾ ಪ್ರಾಂತ್ಯದ ಸಾಂತಾ ಕ್ಲಾರಾ ನಗರದಲ್ಲಿ ಚೆಯವರು ಹುತಾತ್ಮರಾದ ೩೦ನೇ ವಾರ್ಷಿಕಾಚರಣೆ ಹಾಗೂ ಚೆ ಮತ್ತು ಅವರ ಸಂಗಡಿಗರ ದೇಹಗಳ ಅವಶೇಷಗಳನ್ನು ಸ್ಮಾರಕದಲ್ಲಿ ಪ್ರತಿಷ್ಠಾಪಿಸಿದ ಸಮಾರಂಭದಲ್ಲಿ ಕ್ಯೂಬಾದ ಅಧ್ಯಕ್ಷ ಹಾಗೂ ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಪ್ರಥಮ ಕಾರ್ಯದರ್ಶಿ ಫಿಡೆಲ್ ಕ್ಯಾಸ್ಟ್ರೋ ನೀಡಿದ ಭಾಷಣ ಚೆ ಯವರ ವ್ಯಕ್ತಿತ್ವದ, ಅವರ ಬಲಿದಾನದ ಐತಿಹಾಸಿಕ ಮಹತ್ವದ ಒಂದು ಸುಂದರ ಚಿತ್ರಣ ನೀಡುವ ಭಾಷಣ. ನಮ್ಮ ಓದುಗರಿಗಾಗಿ ಆ ಭಾಷಣದ ಕನ್ನಡ ಅನುವಾದವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.



ಮೂರು ದಶಕಗಳ ಹಿಂದೆ ಹೋರಾಟದ ಸಂಗಾತಿ ಹಾಗೂ ಮಿತ್ರ ಚೆಯೊಂದಿಗೆ ಫಿಡೆಲ್

"ಗಹನವಾದ ಭಾವನೆಗಳೊಂದಿಗೆ ನಾವು ಈ ಕ್ಷಣಗಳನ್ನು ಕಳೆಯುತ್ತಿದ್ದೇವೆ. ಇವು ಸಾಮಾನ್ಯವಾಗಿ ಮರಳಿಬರದಂತಹ ಅಪರೂಪದ ಕ್ಷಣಗಳು. ನಾವಿಲ್ಲಿ ಚೆ ಮತ್ತು ಆತನ ವೀರ ಸಂಗಾತಿಗಳಿಗೆ ವಿದಾಯ ಹೇಳಲು ಬಂದಿಲ್ಲ. ಅವರನ್ನು ಬರಮಾಡಿಕೊಳ್ಳಲು ಬಂದಿದ್ದೇವೆ. ನಾನು ಚೆ ಹಾಗೂ ಆತನ ಸಂಗಡಿಗರನ್ನು ನಮ್ಮ ಬಲ ಹೆಚ್ಚಿಸುವ ಸಂಗಾತಿಗಳಾಗಿ ಕಾಣುತ್ತೇನೆ. ಅಜೇಯ ಪುರುಷರ ಒಂದು ತುಕಡಿಯಾಗಿ ಕಾಣುತ್ತೇನೆ. ಈ ಭಾರಿ ಅವರು ಬಲ ಹೆಚ್ಚಿಸುತ್ತಿರುವುದು ಬರೇ ಕ್ಯೂಬನ್ನರದ್ದಷ್ಟೇ ಅಲ್ಲ. ನಮ್ಮ ಭುಜಕ್ಕೆ ಭುಜ ಕೊಟ್ಟು ಹೋರಾಡಿ ಇತಿಹಾಸದ, ಗರಿಮೆಯ ಹೊಸಪುಟಗಳನ್ನು ಬರೆದಿರುವ ಲ್ಯಾಟಿನ್ ಅಮೇರಿಕನ್ನರ ಬಲವನ್ನು ಹೆಚ್ಚಿಸುತ್ತಿದ್ದಾರೆ. ನಾನು ಚೆ ಯನ್ನು ಒಂದು ಬೃಹತ್ ನೈತಿಕ ಶಕ್ತಿಯಾಗಿಯೇ ಕಾಣುತ್ತಿದ್ದೇನೆ. ದಿನ ದಿನ ಪ್ರತಿಷ್ಠೆ ಹೆಚ್ಚಿಸಿಕೊಳ್ಳುತ್ತಿರುವ ಶಕ್ತಿ ಇದು. ಅದರ ಬಲ ಹಾಗೂ ಪ್ರಭಾವ ವಿಶ್ವಾದ್ಯಂತ ಹಲವು ಪಟ್ಟು ಹೆಚ್ಚಿದೆ.

ಚೆ ಯನ್ನು ಒಂದು ಪ್ರತಿಮೆಯ ಕಲ್ಲಿನಲ್ಲಿ ಮಿತಿಗೊಳಿಸಲು ಸಾಧ್ಯವೇ? ಈ ಪ್ಲಾಝಾದ ಚೌಕದ ಒಳಗೆ ಮಿತಿಗೊಳಿಸಲು ಸಾಧ್ಯವೇ? ನಮ್ಮ ಈ ನೆಚ್ಚಿನ ಚಿಕ್ಕದಾದ ದ್ವೀಪದಲ್ಲಷ್ಟೇ ಆತನನ್ನು ಸೀಮಿತಗೊಳಿಸಲು ಸಾಧ್ಯವೇ? ಆತನ ಕನಸಿನ ವಿಶ್ವದಲ್ಲಿ, ಯಾವ ವಿಶ್ವಕ್ಕಾಗಿ ಆತ ಬದುಕಿದ್ದನೊ, ಯಾವುದಕ್ಕಾಗಿ ಆತ ಹೋರಾಡಿದ್ದನೋ ಆ ಇಡೀ ವಿಶ್ವದಲ್ಲಷ್ಟೇ ಆತನಿಗೆ ಸೂಕ್ತವಾದ ಸ್ಥಳಾವಕಾಶ ಸಾಧ್ಯ.

ಮಾನವ ಸಮಾಜದಲ್ಲಿ ಅನ್ಯಾಯ, ಶೋಷಣೆ, ಅಸಮಾನತೆ, ನಿರುದ್ಯೋಗ, ಬಡತನ, ಹಸಿವು ಮತ್ತು ಸಂಕಟಗಳು ಪ್ರಬಲವಾಗುತ್ತಾ ಹೋದಂತೆ ಆತನ ಹಿರಿಮೆ ಹೆಚ್ಚುತ್ತಾ ಹೋಗುತ್ತದೆ. ಸಾಮ್ರಾಜ್ಯಶಾಹಿಯ ಶಕ್ತಿಯ, ಯಜಮಾನಿಕೆಯ ಪ್ರಾಬಲ್ಯದ, ಮಧ್ಯಪ್ರವೇಶದ ಶಕ್ತಿ ಹೆಚ್ಚಿ ಜನಗಳ ಅದರಲ್ಲೂ ದುರ್ಬಲ, ದಶಕಗಳ ಕಾಲ ಪಾಶ್ಚಿಮಾತ್ಯ ವಸಾಹತುಗಳಾಗಿದ್ದ, ಗುಲಾಮ ಶ್ರಮದ ಮೂಲಗಳಾಗಿದ್ದ ಬಡದೇಶಗಳ ಸಂಕಟಗಳು ಹೆಚ್ಚುತ್ತಾ ಹೋದಂತೆ ಚೆ ರಕ್ಷಿಸಿದ ಮೌಲ್ಯಗಳು ಇನ್ನಷ್ಟು ಗೌರವಶಾಲಿಯಾಗುತ್ತವೆ.

ದುರಾಚಾರ, ಸ್ವಾರ್ಥ, ಪರಕೀಯ ಭಾವ ಹೆಚ್ಚುತ್ತಾ ಹೋದಂತೆ, ಸ್ಥಳೀಯ ಜನಗಳು, ಜನಾಂಗೀಯ ಅಲ್ಪಸಂಖ್ಯಾತರು, ಮಹಿಳೆಯರು, ವಲಸೆಗಾರರು ಇವರೆಲ್ಲರ ವಿರುದ್ಧ ಪಕ್ಷಪಾತಗಳು ಹೆಚ್ಚುತ್ತಾ ಹೋದಂತೆ, ಹೆಚ್ಚೆಚ್ಚು ಮಕ್ಕಳನ್ನು ಲೈಂಗಿಕ ಕುಕೃತ್ಯಕ್ಕೆ ಒಳಪಡಿಸುತ್ತಾ ಹೋದಂತೆ ಅಥವಾ ಬಲಾತ್ಕಾರವಾಗಿ ದುಡಿಮೆಗೆ ಹಚ್ಚಿದ ಮಕ್ಕಳ ಸಂಖ್ಯೆ ಕೋಟಿಗಟ್ಟಲೆಯಾಗುತ್ತಾ ಹೋದಂತೆ, ಅಜ್ಞಾನ, ಅನಾರೋಗ್ಯ, ಅಭದ್ರತೆ, ವಸತಿಹೀನತೆ ಹೆಚ್ಚುತ್ತಾ ಹೋದಂತೆ ಚೆ ಯ ಗಹನವಾದ ಮಾನವೀಯ ಭಾವನೆಗಳು ಹೆಚ್ಚೆಚ್ಚು ಸ್ಫುಟವಾಗಿ ಕಾಣುತ್ತದೆ.

ಎಲ್ಲೆಡೆಯೂ ಭ್ರಷ್ಟ ರಾಜಕಾರಣಿಗಳ, ಟೊಳ್ಳು ಭಾಷಣಕಾರರ ಸೋಗಲಾಡಿಗಳ ಸಂಖ್ಯೆ ಹೆಚ್ಚುತ್ತಾ ಹೋದಂತೆ ಚೆ ಮುಂದಿಟ್ಟ ಒಬ್ಬ ಶುದ್ಧ ಕ್ರಾಂತಿಕಾರಿ ಹಾಗೂ ಗೌರವ ಪೂರ್ಣ ವ್ಯಕ್ತಿಯ ಮಾದರಿ ಇನ್ನಷ್ಟು ನಿಖರಗೊಳ್ಳುತ್ತದೆ. ಹೇಡಿಗಳ, ಸಮಯಸಾಧಕರ, ವಿಶ್ವಾಸಘಾತುಕರ ಸಂಖ್ಯೆ ಈ ಗ್ರಹದ ಮೇಲೆ ಹೆಚ್ಚುತ್ತಾ ಹೋದಂತೆ ಚೆ ಯ ವೈಯಕ್ತಿಕ ಧೀರತನ, ಕ್ರಾಂತಿಕಾರಿ ಸಮಗ್ರತೆ ಹೆಚ್ಚೆಚ್ಚು ಪ್ರಶಂಸೆ ಪಡೆಯುತ್ತವೆ; ಹೆಚ್ಚೆಚ್ಚು ವ್ಯಕ್ತಿಗಳು ತಮ್ಮ ಕನಿಷ್ಠ ಆತ್ಮಗೌರವವನ್ನು ಕಳಕೊಳ್ಳುವಾಗ ಆತನ ಗೌರವ, ಘನತೆ ಹೆಚ್ಚೆಚ್ಚು ಪ್ರಶಂಸೆಗೊಳಗಾಗುತ್ತದೆ; ಇತರರು ಹೆಚ್ಚೆಚ್ಚು ಸಂದೇಶಗ್ರಸ್ತರಾಗುತ್ತಿರುವಾಗ ಆತ ಜನತೆಯಲ್ಲಿ ಹೊಂದಿದ್ದ ವಿಶ್ವಾಸ ಹೆಚ್ಚೆಚ್ಚು ಪ್ರಶಂಸೆಗೊಳಗಾಗುತ್ತದೆ; ನಿರಾಶಾವಾದಿಗಳ ಸಂಖ್ಯೆ ಹೆಚ್ಚುತ್ತಿದ್ದಂತೆ ಆತನ ಆಶಾವಾದ ಹೆಚ್ಚೆಚ್ಚು ಪ್ರಶಂಸೆಗೊಳಗಾಗುತ್ತದೆ.

ಹೊಯ್ದಾಟದಲ್ಲಿರುವವರ ಪ್ರಮಾಣ ಬೆಳೆದಂತೆ ಆತನ ಸಾಹಸ ಹೆಚ್ಚೆಚ್ಚು ಪ್ರಶಂಸೆ ಪಡೆಯುತ್ತದೆ. ಹೆಚ್ಚೆಚ್ಚು ಲೋಫರ್‌ಗಳು ಇತರರ ಶ್ರಮಶಕ್ತಿಯನ್ನು ತಮ್ಮ ಐಷಾರಾಮಗಳಿಗೆ, ಸೋಮಾರಿತನಕ್ಕೆ ವ್ಯಯಿಸುತ್ತಾ ಹೋಗುವಾಗ ಚೆ ಯ ಸರಳತೆ, ಅಧ್ಯಯನ ಮತ್ತು ಶ್ರಮದ ಸ್ಫೂರ್ತಿ ಹೆಚ್ಚೆಚ್ಚು ಪ್ರಶಂಸೆಗೊಳಗಾಗುತ್ತದೆ.

ಚೆ ಒಬ್ಬ ನೈಜ ಕಮ್ಯುನಿಸ್ಟನಾಗಿದ್ದ. ಆತ ಕ್ರಾಂತಿಕಾರಿಗಳು ಹಾಗೂ ಕಮ್ಯುನಿಸ್ಟರು ಹೇಗಿರಬೇಕು ಎಂಬುದಕ್ಕೆ ನಿದರ್ಶನ ಹಾಗೂ ಚೌಕಟ್ಟು.

ಚೆ ಒಬ್ಬ ಮಹಾ ಪ್ರವೀಣ. ಇತರರನ್ನು ತನ್ನಂತೆ ಬೆಸೆಯ ಬಲ್ಲ ಪ್ರಾವೀಣ್ಯ ಅಡಗಿತ್ತು.

ತನ್ನ ಜೀವನವನ್ನು ಉದಾರವಾಗಿ ತ್ಯಾಗ ಮಾಡಿದ ಆತನಿಗೆ ಯಾವುದೂ ಅಸಾಧ್ಯವಲ್ಲ. ಅಸಾಧ್ಯವನ್ನು ಸಾಧ್ಯವಾಗಿಸಬಲ್ಲ ಸಮರ್ಥ. ಆತನ ಇತರ ಕೆಲಸಗಳ ನಡುವೆ, ಸಿಯೆರಾ ಮಯೆಸ್ತ್ರಾದಿಂದ ಪಶ್ಚಿಮದತ್ತ ವಿಶಾಲವಾದ ಅರಕ್ಷಿತ ಬಯಲು ಪ್ರದೇಶಗಳ ಮೂಲಕ ಕೆಲವೇ ಸಂಗಾತಿಗಳೊಂದಿಗೆ ಹಾದು ಬಂದ ಕೆಲಸ ಎಂತಹ ಅಪೂರ್ವ ಸಾಧನೆಗಳ ಸಾಮರ್ಥ್ಯ ಹೊಂದಿದ್ದಾತ ಎಂಬುದ್ದಕ್ಕೆ ಸಾಕ್ಷಿ.

ತನ್ನ ಸ್ವಂತ ದೇಶದಲ್ಲಿ ಹಾಗೂ ದಕ್ಷಿಣ ಅಮೇರಿಕಾದ ಇತರೆಡೆಗಳಲ್ಲಿ ಕ್ರಾಂತಿ ಕುರಿತಾದ ಆತನ ವಿಚಾರಗಳು ಎಷ್ಟೇ ಕಷ್ಟಗಳಿದ್ದರೂ ಕಾರ್ಯಸಾಧ್ಯವಾಗಿದ್ದವು. ಅವು ಈಡೇರಿದ್ದರೆ ಬಹುಷಃ ಇಂದಿನ ಜಗತ್ತೇ ಭಿನ್ನವಾಗಿರುತ್ತಿತ್ತು. ಹಸ್ತಕ್ಷೇಪ ನಡೆಸುವ ಶಕ್ತಿಗಳ ವಿರುದ್ಧ ಹೋರಾಡಿ ಅವುಗಳನ್ನು ಸೋಲಿಸಲು ಸಾಧ್ಯ ಎಂಬುದನ್ನು ವಿಯೆಟ್ನಾಮ್ ತೋರಿಸಿಕೊಟ್ಟಿದೆ. ಸ್ಯಾಂಡಿನಿಸ್ಟಾಗಳು ಸಂಯುಕ್ತ ಅಮೇರಿಕಾ ಸಂಸ್ಥಾನದ ಒಬ್ಬ ಅತ್ಯಂತ ಬಲಿಷ್ಟ ಕೈ ಗೊಂಬೆಯ ಮೇಲೂ ವಿಜಯ ಸಾಧಿಸಿದರು. ಸಾಲ್ವಡೋರ್ ನ ಕ್ರಾಂತಿಕಾರಿಗಳು ವಿಜಯ ಸಾಧನೆಯ ಹೊಸ್ತಿಲಲ್ಲಿದ್ದರು. ದಕ್ಷಿಣ ಆಫ್ರಿಕಾದಲ್ಲಿ ವರ್ಣದ್ವೇಷ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿದ್ದರೂ ಸೋತಿತು. ಚೀನಾ ಅಲ್ಲಿಯ ಕಾರ್ಮಿಕರ ಮತ್ತು ಅವರ ಬೆಂಬಲಿಗರ ವೀರಾವೇಶ ಹೋರಾಟಗಳಿಂದಾಗಿ ಈಗ ಜಗತ್ತಿನಲ್ಲಿ ಒಂದು ಅತ್ಯುತ್ತಮ ಭವಿಷ್ಯವಿರುವ ದೇಶಗಳಲ್ಲೊಂದಾಗಿದೆ. ಒಂದು ಬಲಿಷ್ಟ ದೇಶ ಅಫೀಮು ವ್ಯಾಪಾರಕ್ಕಾಗಿ ಆಕ್ರಮಿಸಿಕೊಂಡಿದ್ದ ಹಾಂಗ್‌ಕಾಂಗ್‌ನ್ನು ನೂರೈವತ್ತು ವರ್ಷಗಳ ನಂತರ ಹಿಂದುರಿಗಿಸಬೇಕಾಯಿತು. ಪ್ರತಿಯೊಂದು ಯುಗದಲ್ಲೂ, ಪ್ರತಿಯೊಂದು ಸಂದರ್ಭದಲ್ಲೂ, ಅವೇ ವಿಧಾನಗಳನ್ನು, ಅವೇ ತಂತ್ರಗಳನ್ನು ಬಳಸಲು ಸಾಧ್ಯವಾಗದು. ಆದರೆ, ಯಾರೂ ಇತಿಹಾಸದ ದಾರಿಯನ್ನು ತಡೆಯಲು ಸಾಧ್ಯವಿಲ್ಲ. ಅದರ ವಸ್ತುನಿಷ್ಠ ನಿಯಮಗಳು ಸದಾ ಅನ್ವಯವಾಗುವಂತಹುದು. ಚೆ ಈ ನಿಯಮಗಳ ಆಧಾರದಲ್ಲಿ ಕೆಲಸ ಮಾಡಿದ. ಆತನಿಗೆ ಮಾನವರಲ್ಲಿ ಸಂಪೂರ್ಣ ನಂಬಿಕೆ ಇತ್ತು. ಬಹಳಷ್ಟು ಸಂದರ್ಭಗಳಲ್ಲಿ ಮನುಕುಲದ ಮಹಾನ್ ಪರಿವರ್ತನೆಕಾರರು ಹಾಗೂ ಕ್ರಾಂತಿಕಾರಿಗಳಿಗೆ ತಮ್ಮ ಕನಸುಗಳು ನನಸಾಗುವುದನ್ನು ಕಾಣುವ ಸೌಭಾಗ್ಯವಿರಲಿಲ್ಲ. ಆದರೆ ಬೇಗನೆಯೋ ತಡವಾಗಿಯೋ ಅಂತೂ ಆ ಕನಸುಗಳು ನನಸಾಗಿವೆ.

ಒಬ್ಬ ಹೋರಾಟಗಾರ ಸಾಯಬಹುದು, ಆದರೆ ಆತನ ವಿಚಾರಗಳಿಗೆ

ಪುಟ 7 ನೋಡಿ



ನವೆಂಬರ್ 17-22 ರ್‍ಯಾಗಿಂಗ್ ವಿರೋಧಿ ಸಪ್ತಾಹ

ನವೆಂಬರ್ 17 ರಿಂದ 22 ರವರೆಗೆ ರ್‍ಯಾಗಿಂಗ್ ವಿರೋಧಿ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧದ ಸಪ್ತಾಹವನ್ನು ಆಚರಿಸಲು ಭಾರತ ವಿದ್ಯಾರ್ಥಿ ಫೆಡರೇಶನ್ ನಿರ್ಧರಿಸಿದೆ.

ಎಸ್.ಎಫ್.ಐ ಕೇಂದ್ರ ಕಾರ್ಯಕಾರಿ ಸಮಿತಿ ಸಭೆ ಈ ಸಂಬಂಧ ನಿರ್ಣಯವನ್ನು ಅಂಗೀಕರಿಸಿದೆ.

ಶಿಕ್ಷಣ ವ್ಯವಸ್ಥೆಯಲ್ಲಿನ ಕ್ಷೇತ್ರ ಬದಲಾವಣೆಗಳನ್ನು ಚರ್ಚಿಸಲು ಅಖಿಲ ಭಾರತ ಮಟ್ಟದ ಕಾರ್ಯಾಗಾರವೊಂದನ್ನು ನಡೆಸಲೂ ಸಭೆ ನಿರ್ಧರಿಸಿದೆ. ನವದೆಹಲಿಯಲ್ಲಿ ಡಿಸೆಂಬರ್‌ನಲ್ಲಿ ಈ ಕಾರ್ಯಾಗಾರ ನಡೆಯ ಲಿದೆ.

ಯಶಸ್ವಿ ಹರ್ಯಾಣ ಬಂದ್

ರೈತರು ನಡೆಸುತ್ತಿರುವ ಚಳುವಳಿಗೆ ಬೆಂಬಲವಾಗಿ ನವೆಂಬರ್ 3 ರಂದು ಹ ರ್ಯಾಣ ಬಂದ್ ಯಶಸ್ವಿಯಾಗಿ ನಡೆ ಯಿತು. ಮಹೇಂದ್ರಗಢ ಜಿಲ್ಲೆಯ ಮಂಡಿ ಯಾಲಿಯಲ್ಲಿ ಅಕ್ಟೋಬರ್ 10 ರಂದು ಪೋಲೀಸ್ ಗೋಲಿಬಾರಿನಲ್ಲಿ ನಾಲ್ವರು ರೈತರು ಮೃತಪಟ್ಟ ಪ್ರಕರಣವನ್ನು ಪ್ರತಿಭಟಿಸಲು ವಿಶೇಷವಾಗಿ ಈ ಬಂದ್‌ಗೆ ರಾಜ್ಯದ ಪ್ರತಿಪಕ್ಷಗಳು, ಕಿಸಾನ್ ಸಂಘರ್ಷ ಸಮಿತಿ ಮತ್ತು ಭಾರತೀಯ ಕಿಸಾನ್ ಯೂನಿಯನ್ ಕರೆಕೊಟ್ಟಿದ್ದವು.

ಬಂದ್ ವೇಳೆ ಕಬತ್ ಎಂಬಲ್ಲಿ ಗೋಲಿಬಾರಿನಲ್ಲಿ ಒಬ್ಬ ಮೃತಪಟ್ಟನು.

ಉತ್ತರ ಪ್ರದೇಶ ಮೈತ್ರಿಕೂಟದಲ್ಲಿ ಅತೃಪ್ತಿಯ ಹೊಗೆ

ಅಪಮಾರ್ಗ ಹಿಡಿದು ಅಧಿಕಾರಕ್ಕೆ ಬಂದ ಉತ್ತರ ಪ್ರದೇಶದ ಬಿಜೆಪಿ ಮಿತ್ರಕೂಟದ ಸರಕಾರ ಅತೃಪ್ತಿಯನ್ನು ಎದುರಿಸತೊಡಗಿದೆ. ಆಳುವ ಬಿ.ಜೆ.ಪಿ. ಮತ್ತು ಅದರ ಮಿತ್ರನಾದ ಉತ್ತರಪ್ರದೇಶ ಲೋಕ ತಾಂತ್ರಿಕ ಕಾಂಗ್ರೆಸ್-ಈ ಎರಡೂ ಪಕ್ಷಗಳು ಸಚಿವ ಖಾತೆ ನೀಡಿಕೆ ವಿಚಾರದಲ್ಲಿ ಅತೃಪ್ತಿಯನ್ನು ವ್ಯಕ್ತಪಡಿಸಿದೆ.

ಕೇವಲ 222 ಸದಸ್ಯರನ್ನು ಹೊಂದಿರುವ ಆಳುವ ಕೂಟದಲ್ಲಿ 93 ಮಂತ್ರಿಗಳಿದ್ದಾರೆ. ಸರಕಾರವನ್ನು ಉಳಿಸಲು ಬೆಂಬಲ ನೀಡಿದ, ಇತರ ಪಕ್ಷಗಳಿಂದ ಹಾರಿಬಂದ ಬಹುತೇಕ ಎಲ್ಲರಿಗೆ ಮಂತ್ರಿ ಪದವಿ ಕೊಡಲು ಬಿಜೆಪಿಯ ಕಲ್ಯಾಣಸಿಂಗ್ ಈ ಕಸರತ್ತು ನಡೆಸಿದ್ದರು. ಸಚಿವರಿಗೆ ಖಾತೆಗಳನ್ನು ಹಂಚಲೇ ಅವರು ಒಂದು ವಾರ ಸಾಹಸ ನಡೆಸಬೇಕಾಯಿತು.

ಖಾತೆಗಳ ಹಂಚಿಕೆ ಬಗ್ಗೆ ಉತ್ತರಪ್ರದೇಶ ಲೋಕತಾಂತ್ರಿಕ ಕಾಂಗ್ರೆಸ್ ಅಸಮಾಧಾನವನ್ನು ವ್ಯಕ್ತಪಡಿಸಿದೆ. ಈ ವಿಚಾರದಲ್ಲಿ ಮುಖ್ಯಮಂತ್ರಿಯವರು ತನ್ನೊಂದಿಗೆ ಸಮಾಲೋಚಿಸಬೇಕಿತ್ತು ಎಂದು ಆ ಪಕ್ಷದ ಮುಖಂಡ ಸತೀಶ್ ಅಗರವಾಲ್ ಹೇಳಿದ್ದಾರೆ.

ಕೂಟದ ಪ್ರಮುಖ ಪಕ್ಷವಾದ ಬಿಜೆಪಿ ಆಂತರಿಕವಾಗಿ ವಿಶಿಷ್ಟ ವಿರೋಧವನ್ನು ಎದುರಿಸುತ್ತಿದೆ. ಪಕ್ಷಾಂತರಿಗಳಿಗೆ ಮಣೆ ಹಾಕಿ ಅವರಿಗೆ ಮಂತ್ರಿ ಸ್ಥಾನಗಳನ್ನು ಕೊಡಲಾಗಿದೆ. ಬಿಜೆಪಿ ಶಾಸಕರಿಗೆ ಅವಕಾಶ ಕೊಟ್ಟಿಲ್ಲ ಎಂದು ಬಿಜೆಪಿಯ ಅನೇಕ ಶಾಸಕರು ದೂರಿದ್ದಾರೆ. ಅದರ ಜೊತೆ ಜೊತೆಗೇ, ಹೊಸ ಮಂತ್ರಿಗಳಿಗೆ ಅವಕಾಶ ಕಲ್ಪಿಸಲಿಕ್ಕಾಗಿ ತಮ್ಮಲ್ಲಿ ಹೆಚ್ಚುವರಿಯಾಗಿ ಇರುವ ಖಾತೆಗಳನ್ನು ತೆರವು ಮಾಡಲು ಬಿಜೆಪಿಯ ಅನೇಕ ಮಂತ್ರಿಗಳು ನಿರಾಕರಿಸಿದರು.

ಕ್ರಿಮಿನಲ್‌ಗಳಿಗೆ ಮಂತ್ರಿ ಪಟ್ಟ

ಕಲ್ಯಾಣಸಿಂಗ್ ಸಚಿವ ಸಂಪುಟದಲ್ಲಿ ಅನೇಕ ಕ್ರಿಮಿನಲ್‌ಗಳು ಇರುವುದು ಸ್ವತಃ ಈ ಸರಕಾರದ ಕ್ರಿಮಿನಲ್ ಸ್ವರೂಪಕ್ಕೆ ಸಂಕೇತವಾಗಿದೆ.

ಬಹುಜನ ಸಮಾಜ ಪಕ್ಷದಿಂದ ಈಚೆಗೆ ಬಂದ ಶಾಸಕನೊಬ್ಬನ ಹೆಸರು ಪೋಲೀಸ್ ದಾಖಲೆಯಲ್ಲಿದೆ. ಆತನಿಗೆ ಕಿರು ನೀರಾವರಿ ಖಾತೆಯನ್ನು ಕೊಡಲಾಗಿದೆ. ಭೂಗತ ಜಗತ್ತಿನೊಂದಿಗೆ ಸಂಪರ್ಕ ಹೊಂದಿರುವ ಪಪ್ಪು ಜೋಸ್ವಲ್ ಕೂಡ ಇಲ್ಲಿ ಮಂತ್ರಿ. ಆತನಿಗೆ ಸಿಕ್ಕಿರುವ ಖಾತೆ ಯಾವುದು ಗೊತ್ತಾ? ಸಂಸ್ಕೃತಿ ಖಾತೆ! ಭೂಗತ ಪ್ರಪಂಚದೊಂದಿಗೆ ಸಂಪರ್ಕ ಇಟ್ಟುಕೊಂಡಿರುವ ಕಾಂಗ್ರೆಸ್(ಐ) ಬಂಡುಕೋರ ಎಚ್.ಎಸ್.ತಿವಾರಿ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆಯ ರಾಜ್ಯ ಸಚಿವ! ಸಂಸ್ಕೃತಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಖಾತೆಗಳ ಗತಿ ಅಧೋಗತಿಯೇ ಸರಿ!

ರಾಜಾ ಭೈಯಾ ಎಂದೇ ಪರಿಚಿತನಾದ ರಾಜಾ ರಘುರಾಜ ಪ್ರತಾಪಸಿಂಗ್ ಪಕ್ಷೇತರ ಶಾಸಕ. ಆತ ತನ್ನ 'ಪ್ರತಾಪ'ವನ್ನು ತೋರಿಸಿ ಕ್ಯಾಬಿನೆಟ್ ಸಚಿವನಾಗುವಲ್ಲಿ ಸಫಲನಾಗಿದ್ದಾನೆ. ಕ್ರಿಮಿನಲ್ ದಾಖಲೆ ಹೊಂದಿರುವ ಈತ 9 ಪಕ್ಷೇತರ ಶಾಸಕರ ಬೆಂಬಲವನ್ನು ವಾಪಸು ಪಡೆಯುವ ಬೆದರಿಕೆ ಹಾಕಿದ್ದರಿಂದ ಥರಗುಟ್ಟಿದ ಕಲ್ಯಾಣಸಿಂಗ್ ಆತನಿಗೆ ಮಂತ್ರಿ ಪಟ್ಟ ಕಟ್ಟಿದ.

ಇದು ತತ್ವ ಸಿದ್ಧಾಂತ-ನೈತಿಕ ಮೌಲ್ಯಗಳ ಪ್ರತಿಪಾದಕವಾದ ಬಿಜೆಪಿಯ ಕೆಲಸ! ಬಾಬರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಆರೋಪಿಯಾಗಿರುವ ತಾವೇ ಮುಖ್ಯಮಂತ್ರಿ ಆಗಿರುವಾಗ ಇತರ ಕ್ರಿಮಿನಲ್‌ಗಳಿಗೂ ಮಂತ್ರಿ ಸ್ಥಾನ ಕೊಡುವುದರಲ್ಲಿ ತಪ್ಪೇನು ಎಂಬುದು ಕಲ್ಯಾಣಸಿಂಗ್ ವಾದವಾಗಿರಬಹುದು. ಎಲ್ಲಾ ಕ್ರಿಮಿನಲ್‌ಗಳಿಗೆ ಸಮಪಾಲು ಎಂಬುದು ಬಿಜೆಪಿಯ ಧ್ಯೇಯವಾಗಿದ್ದೀತು; ಯಾರು ಬಲ್ಲರು.

ಜೆ.ಎನ್.ಯು ವಿದ್ಯಾರ್ಥಿ ಸಂಘ ಚುನಾವಣೆ: ಎಸ್.ಎಫ್.ಐ ಜಯಭೇರಿ

ನವದೆಹಲಿಯಲ್ಲಿರುವ ಪ್ರತಿಷ್ಠಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಕ್ಕೆ ಅಕ್ಟೋಬರ್ 26 ರಂದು ನಡೆದ ಚುನಾವಣೆಗಳಲ್ಲಿ ಎಸ್.ಎಫ್.ಐ, ಎ.ಐ.ಎಸ್.ಎಫ್, ಮೈತ್ರಿಕೂಟ ಪ್ರಚಂಡ ಜಯವನ್ನು ಸಾಧಿಸಿದೆ. ನಾಲ್ಕು ಪದಾಧಿಕಾರಿಗಳ ಪೈಕಿ ಮೂವರು ಈ ಕೂಟದವರಾಗಿದ್ದು 27 ಕೌನ್ಸಿಲ್ ಸ್ಥಾನಗಳಲ್ಲಿ 14 ನ್ನು ಕೂಟ ಗೆದ್ದುಕೊಂಡಿದೆ.

ಸಂಘದ ಹಾಲಿ ಅಧ್ಯಕ್ಷರಾದ ಎಸ್.ಎಫ್.ಐ ಮುಖಂಡ ಬಟ್ಟಿಲಾಲ್ ಬೈರವಾ ಅಧ್ಯಕ್ಷರಾಗಿ ಪುನರಾಯ್ಕೆಗೊಂಡರು. ಅವರು ಎ.ಬಿ.ವಿ.ಪಿ ಅಭ್ಯರ್ಥಿಯನ್ನು ಸುಮಾರು 14ರ ಮತಗಳ ಅಂತರದಿಂದ ಸೋಲಿಸಿದರು. ಉಪಾಧ್ಯಕ್ಷ ಹಾಗೂ ಜಂಟಿ ಕಾರ್ಯದರ್ಶಿ ಸ್ಥಾನಗಳು ಎಸ್.ಎಫ್.ಐ ಪಾಲಾಗಿದೆ. ಪ್ರಧಾನ ಕಾರ್ಯದರ್ಶಿ ಸ್ಥಾನ ಮಾತ್ರ ಎ.ಬಿ.ವಿ.ಪಿ.ಗೆ ಹೋಗಿದೆ.

ಎಸ್.ಎಫ್.ಐ ಅಭ್ಯರ್ಥಿ ವಿಜು ಕೃಷ್ಣನ್ ಉಪಾಧ್ಯಕ್ಷರಾಗಿ ಹಾಗೂ ಎಸ್.ಎಫ್.ಐ ನ ನಾಸಿರ್ ಹುಸೇನ್ ಸಹ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಅವರಿಬ್ಬರೂ ಸೋಲಿಸಿದ್ದು, ಎ.ಬಿ.ವಿ.ಪಿ ಹುರಿಯಾಳುಗಳನ್ನು. ಎಲ್ಲಾ ನಾಲ್ಕು ಪದಾಧಿಕಾರಿ ಸ್ಥಾನಗಳಲ್ಲಿ ನಕ್ಸಲೀಯ ಒಲವಿನ ಎ.ಐ.ಎಸ್.ಎ. ಮೂರನೇ ಸ್ಥಾನಕ್ಕೆ ಇಳಿಯಿತು.

ಒಟ್ಟು 27 ಸ್ಥಾನಗಳ ಪೈಕಿ 14 ನ್ನು ಎಸ್.ಎಫ್.ಐ-ಎ.ಐ.ಎಸ್.ಎಫ್. ಕೂಟ ಗೆದ್ದುಕೊಂಡಿದೆ. 11 ಸ್ಥಾನ ಎಬಿವಿಪಿ ಪಾಲಾಯಿತು. ಎಐಎಸ್ ಎ ಎರಡರಲ್ಲಿ ಮಾತ್ರ ಜಯಗಳಿಸಿತು.

70 ರ ದಶಕದಲ್ಲಿ ಜೆ.ಎನ್.ಯು ಸ್ಥಾಪನೆಯಾದಾಗಿನಿಂದಲೂ ಎಸ್.ಎಫ್.ಐ ನ ಪ್ರಮುಖ ಭದ್ರಕೋಟೆಯಾಗಿದೆ. ಈ ವಿ.ವಿ.ಯಲ್ಲಿ S.F.I¥A.I.S.F ಮೈತ್ರಿಕೂಟ ಜಯಭೇರಿ ಬಾರಿಸಿರುವುದು ಈ ಹಿನ್ನೆಲೆಯಲ್ಲಿ ಮಹತ್ವದ್ದಾಗಿದೆ.

ಪರಂಪರಾಗತವಾಗಿ ಎಡಶಕ್ತಿಗಳ ಕೇಂದ್ರವಾಗಿದ್ದ ಇಲ್ಲಿ ಕಳೆದ ವರ್ಷ ಬಲಪಂಥೀಯ ಎ.ಬಿ.ವಿ.ಪಿ. ಗೆಲುವು ಸಾಧಿಸಿತು. ಅಧ್ಯಕ್ಷ ಸ್ಥಾನಮಾತ್ರ ಎಸ್.ಎಫ್.ಐಗೆ ಸಿಕ್ಕಿತ್ತು. ಉಳಿದ ಮೂರು ಪದಾಧಿಕಾರಿಗಳೂ ಎಬಿವಿಪಿಯವರಾಗಿದ್ದರು.

ಮಾಧ್ಯಮಗಳ ಬೆಂಬಲ ಹೊಂದಿದ್ದ ಎ.ಬಿ.ವಿ.ಪಿ ಜೆ.ಎನ್.ಯುನಲ್ಲಿ ಎಸ್.ಎಫ್.ಐ. ನ ಓಡಿತವನ್ನು ಕೊನೆಗೆ ಉಳಿಸಿರುವುದಾಗಿ ಆಗ ಹೇಳಿಕೊಂಡಿತ್ತು. ನಕ್ಸಲೀಯ ಎ.ಐ.ಎಸ್.ಎ ಕೂಡ ಎಸ್.ಎಫ್.ಐ ಪ್ರಭಾವವನ್ನು ಮಂಡಿಸಿರುವುದಾಗಿ ಹೇಳಿಕೊಂಡಿತ್ತು. ಸ್ವಲ್ಪ ಸಮಯ ಅದು ಯಶಸ್ವಿಯಾಗಿತ್ತು. ಆದರೆ ಈ ವರ್ಷ ಹೆಚ್ಚಿನ ಸಾಧನೆ ಮಾಡಲು ಅದಕ್ಕೆ ಸಾಧ್ಯವಾಗಿಲ್ಲ.

ಒಟ್ಟಿನಲ್ಲಿ, ಎಡ ಸಾಹಸವಾದಿ ಹಾಗೂ ಬಲಪಂಥೀಯ ಸವಾಲುಗಳನ್ನು ಎದುರಿಸಿ ಜೆ ಎನ್.ಯು ವಿದ್ಯಾರ್ಥಿ ಸಂಘದಲ್ಲಿ ಎಸ್.ಎಫ್.ಐ ಮಿತ್ರಕೂಟ ಮೇಲುಗೈ ಸಾಧಿಸಿರುವುದು ಮಹತ್ವದ ವಿದ್ಯಮಾನವಾಗಿದೆ.

ಪ್ರಥ್ವೀನ್ ಹಂಚು ಕಾರ್ಮಿಕರ ವಿವಾದ ನ್ಯಾಯಾಲಯಕ್ಕೆ ನ್ಯಾಯಕ್ಕಾಗಿ ಹೋರಾಡುವುದಾಗಿ ಕಾರ್ಮಿಕ ನಾಯಕರ ಘೋಷಣೆ

ಹೊನ್ನಾವರದ ಅನಂತವಾಡಿಯ ಪ್ರಥ್ವೀನ್ ಹಂಚು ಕಾರ್ಖಾನೆಯಲ್ಲಿ ದುಡಿಯುತ್ತಿರುವ ಸುಮಾರು 172 ಬಡ ಕಾರ್ಮಿಕರಿಗೆ ಆಡಳಿತವರ್ಗ ಕೆಲಸ ನಿರಾಕರಿಸಿದ್ದನ್ನು ಪ್ರತಿಭಟಿಸಿ ಹೋರಾಟ ನಿರತರ ಮೇಲೆ ಗೋಲಿಬಾರ್, ಲಾಠಿಚಾರ್ಜ್ ಖಂಡಿಸಿ ಹಾಗೂ ಕೆಲಸಕ್ಕೆ ಒತ್ತಾಯಿಸಿ 7 ತಿಂಗಳುಗಳಿಂದ ಧರಣಿ ಸತ್ಯಾಗ್ರಹ ಮೆರವಣಿಗೆ ನಡೆಯುತ್ತಿತ್ತು. ಹಂಚು ಕಾರ್ಮಿಕರ ವಿವಾದ ಬಗ್ಗೆ ವಿಭಾಗೀಯ ಕಾರ್ಮಿಕ ಆಯುಕ್ತರಲ್ಲಿ ಮಾತುಕತೆ ನಡೆಯುತ್ತಿತ್ತು. ಆದರೆ ಮಾಲೀಕರು ಯಾವುದೇ ರೀತಿಯ ಸಂಧಾನಕ್ಕೆ ಬರದಿದ್ದರಿಂದ ವಿವಾದ ಈಗ ನ್ಯಾಯಾಲಯಕ್ಕೆ ಹೋಗಿದೆ.

ಈ ಸಂದರ್ಭದಲ್ಲಿ - ಇಂದು ಹೊನ್ನಾವರದಲ್ಲಿ ಉತ್ತರ ಕನ್ನಡ ಜಿಲ್ಲಾ ಹಂಚು ಕಾರ್ಮಿಕರ ಸಂಘದ ನೇತೃತ್ವದಲ್ಲಿ ಸುಮಾರು ಎರಡು ಸಾವಿರ ಕಾರ್ಮಿಕರು ಮೆರವಣಿಗೆ ಮತ್ತು ಸಭೆಯಲ್ಲಿ ಬಾಗವಹಿಸಿದ್ದರು. ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಕಾರ್ಮಿಕ ನಾಯಕರು ಹೋರಾಟ ನ್ಯಾಯ ಸಿಗುವವರೆಗೆ ಮುಂದುವರಿಸುವುದಾದಗಿ ಘೋಷಿಸಿದರು.

ಸಿಐಟಿಯು ರಾಜ್ಯಕಾರ್ಯದರ್ಶಿ ಕೆ.ಶಂಕರ್ ಮಾತನಾಡುತ್ತಾ ಕಾರ್ಮಿಕ ಇಲಾಖೆಯಲ್ಲಿ ಇತ್ಯರ್ಥವಾಗಬೇಕಿದ್ದ ಈ ಪ್ರಕರಣ ಮಾಲೀಕರ ಮತ್ತು ಮಾಲಕರ ಪರ ಅಧಿಕಾರಿಗಳ ತಂತ್ರದಿಂದ ನ್ಯಾಯಾಲಯಕ್ಕೆ ಹೋಗಬೇಕಾಗಿದೆ. ಕಾರ್ಮಿಕ ಸಂಘಟನೆಯನ್ನು ಕಾರ್ಮಿಕರ ನ್ಯಾಯವನ್ನು ಹತ್ತಿಕ್ಕಿ ಬಹಳ ದಿನ ಕಾರ್ಖಾನೆ ನಡೆಸಲು ಸಾಧ್ಯವಿಲ್ಲ ಎಂದು ರಾಜ್ಯ ಸರ್ಕಾರದ ನೀತಿಯನ್ನು ಖಂಡಿಸಿದ ಅವರು ಸರಕಾರದ ನೀತಿ ಇದೇ ರೀತಿ ಮುಂದುವರಿದರೆ ಬರುವ ಚುನಾವಣೆಯಲ್ಲಿ ದುಡಿಯುವ ವರ್ಗ ಪಾಠ ಕಲಿಸುವರು ಎಂದು ಎಚ್ಚರಿಸಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಸ್.ನಾಯ್ಕ ಮಾತನಾಡಿ ಪ್ರಥ್ವೀನ್ ಟೈಲ್ಸ್ ಮಾಲಿಕ ಆರ್.ಎಸ್.ಶೆಟ್ಟಿಯವರ ಕಾರ್ಮಿಕ ವಿರೋಧಿ ನೀತಿಯನ್ನು ತೀವ್ರವಾಗಿ ಖಂಡಿಸಿದರು. ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀಆರ್.ವಿ.ದೇಶಪಾಂಡೆ ಯವರಿಗೆ 4-5 ಬಾರಿ ಈ ವಿವಾದದ ಬಗ್ಗೆ ಗಮನ ಸೆಳೆದರು, ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ನಡೆಸದಿರುವುದರ ಬಗ್ಗೆ ತೀವ್ರವಾಗಿ ಖಂಡಿಸಿದರು.

ಹಂಚು ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ತಿಲಕಗೌಡ ಮಾತನಾಡಿ ಸ್ಥಳೀಯ ರಾಜಕೀಯ ಮುಖಂಡರು ಮಾಲೀಕರ ಪರ ಧೋರಣೆ ತಾಳಿರುವುದನ್ನು ತೀವ್ರವಾಗಿ ಖಂಡಿಸಿ ನಮ್ಮ ಹೋರಾಟ ಭ್ರಷ್ಟ ಮಾಲೀಕರ ಪರ ರಾಜಕೀಯ ಪುಡಾರಿಗಳ ವಿರುದ್ಧ ಸಂಘಟಿಕತ ಹೋರಾಟ ಮುಂದುವರಿಸುವುದಾಗಿ ಘೋಷಿಸಿದರು.

ಯುವಜನ ಫೆಡರೇಶನ್ (ಡಿವೈಎಫ್ಐ) ರಾಜ್ಯ ಸಮಿತಿ ಅಧ್ಯಕ್ಷರಾದ ಶಾಂತರಾಮ ನಾಯಕ ಮಾತನಾಡಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ಕಾರ್ಮಿಕ ಮುಖಂಡ ಸುಭಾಸ ಕೊಪ್ಪಿಕರ ವಂದಿಸಿದರು.

ನವೆಂಬರ್ 20 ರಂದು ರಾಜ್ಯ ಸರಕಾರಿ ನೌಕರರ ಅಖಿಲ ಭಾರತ ಬೇಡಿಕೆ ದಿನಾಚರಣೆ

ರಾಜ್ಯ ಸರಕಾರಿ ನೌಕರರ ಈ ಕೆಳಕಂಡ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು, ನವೆಂಬರ್ 20 ರಂದು ದೇಶಾದ್ಯಂತ ಎಲ್ಲಾ ಹಂತಗಳಲ್ಲೂ ಬ್ಯಾಡ್ಜ್ ಧರಿಸಿ, ಮತಪ್ರದರ್ಶನ ಮತ್ತು ಸಭೆಗಳನ್ನು ನಡೆಸುವು ದರ ಮೂಲಕ 'ಅಖಿಲ ಭಾರತ ಬೇಡಿಕೆ ದಿನ'ವನ್ನು ಆಚರಿಸುವಂತ ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟವು ದೇಶದ ಸುಮಾರು 80 ಲಕ್ಷ ರಾಜ್ಯ ಸರಕಾರಿ ನೌಕರರು ಮತ್ತು ಶಿಕ್ಷಕರಿಗೆ ಕರೆ ನೀಡಿದೆ.

ಕೇಂದ್ರ ಮಟ್ಟದಲ್ಲಿ ರಾಜ್ಯ ಸರಕಾರಿ ನೌಕರರು ಮತ್ತು ಶಿಕ್ಷಕರ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಿಸುವುದು, ರಾಜ್ಯ ನೌಕರರಿಗೆ ಸಿಗಬೇಕಾದ ಸವಲತ್ತುಗಳು ಕೇಂದ್ರ ನೌಕರರಿಗಿಂತ ಕಡಿಮೆಯಾಗ ಬಾರದಂತಿರಬೇಕು, ವೇತನ ಪರಿಷ್ಕರಣೆಗಾಗಿ ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಸಾಕಷ್ಟು ಹಣವನ್ನು ಒದಗಿಸುವುದು, ಖಾಸಗೀಕರಣ, ದಿನಕೂಲಿಕರಣ, ಗುತ್ತಿಗೀಕರಣ ಮತ್ತು ಕೆಲಸದಿಂದ ವಜಾಗೊಳಿಸುವುದನ್ನು ತಡೆಯುವುದು ಮತ್ತು ಖಾಲಿ ಹುದ್ದೆಗಳನ್ನು ಭರ್ತಿಗೊಳಿಸು ವುದು ಮತ್ತು ನಿರುದ್ಯೋಗಿ ಯುವಕರಿಗೆ ಉದ್ಯೋಗ ಕೊಡುವುದು ಇತ್ಯಾದಿ ಈ ಬೇಡಿಕೆಗಳನ್ನು ಒತ್ತಾಯಿಸಿ ಅಂದು ಸಭೆಗಳಲ್ಲಿ ನಿರ್ಣಯ ಗಳನ್ನು ಕೈಗೊಂಡು ರಾಜ್ಯದ ಮುಖ್ಯಮಂತ್ರಿ ಗಳಿಗೆ, ದೇಶದ ಪ್ರಧಾನ ಮಂತ್ರಿಗಳಿಗೆ ಹಾಗೂ ಕೇಂದ್ರ ಸರಕಾರದ ಹಣಕಾಸು ಮಂತ್ರಿಗಳಿಗೆ, ದೇಶದ ಪ್ರಧಾನ ಮಂತ್ರಿಗಳಿಗೆ ಹಾಗೂ ಕೇಂದ್ರ ಸರಕಾರದ ಹಣಕಾಸು ಮಂತ್ರಿಗಳಿಗೆ ಕಳುಹಿಸಿ ಕೊಡಲಾಗುವುದು ಎಂದು ಒಕ್ಕೂಟ ತಿಳಿಸಿದೆ.

ನೀರು ಸರಬರಾಜು ನೌಕರರ ಯಶಸ್ವಿ ಹೋರಾಟ

ಬಿಜಾಪುರ ನಗರ ಸಭೆಯಲ್ಲಿ ನೀರು ಸರಬರಾಜು ಮಾಡುತ್ತಿದ್ದ 67 ಕೆಲಸಗಾರರು ತಮ್ಮ ನೌಕರಿಯ ಕಾಯಮಾತಿಗಾಗಿ ಹೋರಾಡಿ 6 ತಿಂಗಳ ಹಿಂದೆ ಯಶಸ್ವಿಯಾಗಿದ್ದರು. ಬಿಜಾಪುರ ನಗರ ಸಭೆ ಮತ್ತು ನೀರು ಸರಬರಾಜು ಮಂಡಳಿಯವರು ಕಾನೂನು ಪ್ರಕಾರ ಈ ಕೆಲಸಗಾರರಿಗೆ ಸಿಗಬೇಕಾದ ಹೆಚ್ಚುವರಿ ವೇತನ ಕೊಡಲು ವಿನಾಕಾರಣ ಹಿಂದೇಟು ಹಾಕುತ್ತಿದ್ದುದರ ವಿರುದ್ಧ ಹೋರಾಟ ನಡೆಸಿ ಯಶಸ್ವಿಯಾಗಿದ್ದಾರೆ. ಆಮರಣ ಉಪವಾಸದ ನೋಟೀಸು ಕೊಟ್ಟ ನಂತರ ನಗರ ಸಭೆಯವರು ತಮ್ಮಲ್ಲಿ ದುಡಿದ ದಿನನೌಕರರ ಹೆಚ್ಚುವರಿ ವೇತನ ಕೊಡಲು ಒಪ್ಪಿದರೂ ನೀರು ಸರಬರಾಜು ಮಂಡಲಿಯ ಇಂಜಿನೀಯರ್ ತಮ್ಮನ್ನು ಎರವಲಾಗಿ ದುಡಿದ 1993 ರಿಂದ 1997 ರವರೆಗಿನ ಹೆಚ್ಚುವರಿ ವೇತನ ಕೊಡಲು ನಿರಾಕರಿಸಿದ್ದರಿಂದ ಮುನಸಿಪಲ್ ಕಾಮಗಾರ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಪಿ.ಎಂ.ಸೊನ್ನದ ದಿ.3ರಿಂದ ಆಮರಣ ಉಪವಾಸ ಕೈಗೊಳ್ಳಬೇಕಾಯಿತು. ಸಿ.ಪಿ.ಐ(ಎಂ), ರೈತಸಂಘ, ಡಿ.ವೈ.ಎಫ್.ಐ., ಜನವಾದಿ ಮಹಿಳಾ ಸಂಘಟನೆಯವರು ಮೆರವಣಿಗೆಯಲ್ಲಿ ನಗರಸಭೆ ಮುಂದೆ ಮತಪ್ರದರ್ಶನ ನಡೆಸಿ ನೀರು ಸರಬರಾಜು ಕಾರ್ಮಿಕರ ಬೇಡಿಕೆಗಳಿಗೆ ಹಾಗೂ ಪಿ.ಎಂ.ಸೊನದ ಅವರ ಆಮರಣ ಉಪವಾಸಕ್ಕೆ ಬೆಂಬಲ ವ್ಯಕ್ತಮಾಡಿದರು. ಭೀಮಸಿ ಕಲಾದಗಿ, ಸುರೇಖಾ ರಜಪುತ ಮೊದಲಾದವರು ಭಾಷಣ ಮಾಡಿದರು. ಎಸ್.ಕೆ.ಉಪಾಧ್ಯಾಯರು ಜಿಲ್ಲಾಧಿಕಾರಿಗಳ ಮೇಲೆ ಒತ್ತಡ ತಂದು ದಿ.5 ರಂದು ನೀರು ಸರಬರಾಜು ಮಂಡಳಿ ಇಂಜಿನಿಯರ್ ಮತ್ತು ಮುನಿಸಿಪಲ್ ಕಮಿಶನರನ್ನು ಒಟ್ಟಿಗೆ ಸೇರಿಸಿ ಕಾರ್ಮಿಕರ ನ್ಯಾಯಯುತ ಬೇಡಿಕೆಯನ್ನು ಕೂಡಲೇ ಮಂಜೂರು ಮಾಡಬೇಕೆಂದು ಹೇಳಿದ ನಂತರ ಆಮರಣ ಉಪವಾಸ ಕೈ ಬಿಡಲಾಯಿತು. ದಿ. 5 ರಂದು ಸರಕಾರಿ ಡಾಕ್ಟರರು ಪಿ.ಎಂ.ಸೊನ್ನದ ಸಕ್ಕರೆ ರೋಗದಿಂದ ರಕ್ತಸ್ರಾವ ಹೆಚ್ಚಾಗುತ್ತಿರುವುದನ್ನು ಕಂಡು ಪೋಲೀಸರಿಗೆ ಹೇಳಿ ಸರಕಾರಿ ದವಾಖಾನೆಗೆ ದಾಖಲಿಸಿದ್ದರು. ಎಸ್.ಕೆ. ಉಪಾಧ್ಯಾಯ, ಮುನಸಿಪಲ್ ಕಮಿಶನರ್ ಜೈನ್ ಮತ್ತು ಮಾಂಡವೇಕರ ಅವರು ದವಾಖಾನೆಗೆ ಹೋಗಿ ಆಮರಣ ಉಪವಾಸವನ್ನು ಮುಕ್ತಾಯಗೊಳಿಸಿದರು.

......ಬಿಜೆಪಿಯ ಒಂದಂಶದ ಕಾರ್ಯಕ್ರಮ

ಪುಟ 1 ರಿಂದ

ಆ ಮೂಲಕ ದೇಶದ ಭವಿಷ್ಯಕ್ಕೆ ಒಂದು ದೊಡ್ಡ ಅಪಾಯ ಎಂದು ಸುರ್ಜಿತ್ ಎಚ್ಚರಿಸಿದ್ದಾರೆ.

ಉತ್ತರ ಪ್ರದೇಶದ ಘಟನೆಯ ನಂತರ ಪಕ್ಷಾಂತರ-ವಿರೋಧಿ ಕಾನೂನಿನ ಲೋಪ-ದೋಷಗಳನ್ನು ನಿವಾರಿಸಿ ಅದನ್ನು ಪರಿಣಾಮಕಾರಿಯಾಗಿಸುವ ಬಗ್ಗೆ ಚರ್ಚೆ ಆರಂಭವಾಗಿದೆ. ಪಕ್ಷ ತ್ಯಜಿಸುವ ಪ್ರತಿಯೊಬ್ಬನೂ ತನ್ನ ಚುನಾಯಿತ ಸ್ಥಾನ ಬಿಟ್ಟು ಹೊಸದಾಗಿ ಚುನಾವಣೆ ಸ್ಪರ್ಧಿಸಬೇಕು ಅಥವಾ ಆತನನ್ನು ಅನರ್ಹಗೊಳಿಸಬೇಕು ಎಂಬ ಬೇಡಿಕೆ ಬರುತ್ತಿದೆ. ಮೊನ್ನೆ ಮೊನ್ನೆಯವರೆಗೂ ಈ ಕಾನೂನನ್ನು ತಿದ್ದುಪಡಿ ಮಾಡಬೇಕೆಂದು ಒತ್ತಾಯಿಸುತ್ತಿದ್ದ ಬಿಜೆಪಿ ಈಗ ರಾಗ ಬದಲಿಸಿದೆ.

ಈ ಹಿನ್ನೆಲೆಯಲ್ಲಿ ಎಲ್ಲಾ ದೇಶಪ್ರೇಮಿ ಹಾಗೂ ಧರ್ಮನಿರಪೇಕ್ಷ ಶಕ್ತಿಗಳು ಬಿಜೆಪಿಯ ಕಸರತ್ತುಗಳನ್ನು, ಅದರ ಇಬ್ಬಂದಿತನವನ್ನು ನೋಗಲಾಡಿತನವನ್ನು ಬಯಲಿಗೆಳೆಯಬೇಕು. ಹಲವಾರು ವರ್ಷಗಳಿಂದ ಅದು ತೊಟ್ಟಿದ್ದ ನೈತಿಕತೆಯ ಮುಖವಾಡ ಈಗ ಕಳಚಿ ಬಿದ್ದಿದೆ. ಇದನ್ನು ಜನಗಳಿಗೆ ವಿವರಿಸಬೇಕು. ಇಂತಹ ಕೋಮುವಾದಿ ಶಕ್ತಿಗಳಿಂದ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸಿ ದೇಶವನ್ನು ಉಳಿಸಲು ಒಂದು ಆಂದೋಲನದತ್ತ ಜನರನ್ನು ಅಣಿನೆರೆಸಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಕರೆ ನೀಡಿದ್ದಾರೆ.

ಇರಾಕ್-ಅಮೇರಿಕ ಮತ್ತೆ ಹಣಾಹಣಿ

ಇರಾಕ್-ಅಮೇರಿಕ ನಡುವೆ ಪುನಃ ಮುಖಾಮುಖಿ ನಡೆದಿದ್ದು, ಇನ್ನೊಂದು ಘರ್ಷಣೆಯ ಸಾಧ್ಯತೆ ತಲೆದೋರಿದೆ. ಇನ್ನು ಮುಂದೆ ವಿಶ್ವಸಂಸ್ಥೆಯ ಶಸ್ತ್ರಾಸ್ತ್ರ ಪರೀಕ್ಷಣಾ ತಂಡದಲ್ಲಿ ಬರುವ ಅಮೇರಿಕನ್ನರನ್ನು ದೇಶಕ್ಕೆ ಪ್ರವೇಶ ಮಾಡಕೊಡುವುದಿಲ್ಲ. ಈಗಾಗಲೇ ಇರುವ ಹತ್ತು ಮಂದಿ ಅಮೇರಿಕನ್ ಶಸ್ತ್ರಾಸ್ತ್ರ ಪರೀಕ್ಷಕರನ್ನು ಹಿಂದೆ ಕಳಿಸಲಾಗುವುದು ಎಂಬ ಇರಾಕಿ ಸರ್ಕಾರದ ನಿರ್ಧಾರ, ತತ್‌ಕ್ಷಣದ ಕಾರಣ. ಆದರೆ ನಿಜವಾದ ಕಾರಣ 1991 ರಿಂದ ಯಾವುದೇ ಪರಿಹಾರವಿಲ್ಲದೆ, ಇರಾಕಿ ತೈಲ ರಫ್ತಿನ ಮೇಲೆ ಹೊರಿಸಿರುವ ಆರ್ಥಿಕ ದಿಗ್ಬಂಧನ ಒಂದಲ್ಲ ಒಂದು ನೆವದಲ್ಲಿ ಮುಂದುವರೆಯುತ್ತಿರುವುದು. ಇರಾಕಿ ಜನತೆಯ ಮೇಲೆ ಕ್ರೂರ ಶಿಕ್ಷೆ ಇರಾಕಿನ ಶಸ್ತ್ರಾಸ್ತ್ರಗಳ ಮುಗಿಯದ ಪರೀಕ್ಷಣೆ, ದೇಶದ ಸಾರ್ವಭೌಮತ್ವ ಮಾತ್ರವಲ್ಲ, ಆತ್ಮಗೌರವ ಮತ್ತು ತಾಳ್ಮೆಯನ್ನೂ ಪರೀಕ್ಷಿಸುತ್ತಿದೆ. ಇರಾಕಿನ ಮೇಲೆ ದಿಗ್ಬಂಧನ ಯಾವಾಗ ಹಿಂತೆಗೆದುಕೊಳ್ಳಲಾಗುತ್ತದೆ ಎಂಬ ಯಾವುದೇ ಸ್ಪಷ್ಟ ಚಿತ್ರವಿಲ್ಲದೆ, ವಿಶ್ವಸಂಸ್ಥೆಯ ಹಾಗೂ ಅಮೇರಿಕಗಳ ಈ ಕ್ರಮದಿಂದ ಬೇಸತ್ತಿರುವ ಇರಾಕ್‌ಗಳ ಕೋಪದ ಪ್ರತಿಫಲನ ಸರ್ಕಾರದ ಈ ಕ್ರಮ.

ಇರಾಕ್‌ನ ಈ ಕ್ರಮವನ್ನು ಧಿಕ್ಕರಿಸಿದ ವಿಶ್ವಸಂಸ್ಥೆಯ ಶಸ್ತ್ರಾಸ್ತ್ರ ಪರೀಕ್ಷಣಾ ತಂಡದಲ್ಲಿ ಮೂರು ಅಮೇರಿಕನ್ನರನ್ನು ಕಳಿಸಲಾಯಿತು. ಈ ಮೂವರು ಅಮೇರಿಕನ್ನರಿಗೆ ಇರಾಕ್ ಸರ್ಕಾರ ಪ್ರವೇಶ ನಿರಾಕರಿಸಿತು. ಅಲ್ಲದೆ ಈಗ ಇರಾಕ್‌ನಲ್ಲಿ ಇರುವ ಶಸ್ತ್ರಾಸ್ತ್ರ ಪರೀಕ್ಷಣಾ ತಂಡದ ಹತ್ತು ಜನ ಅಮೇರಿಕನ್ನರು ವಾರದೊಳಗೆ ದೇಶ ಬಿಡುವಂತೆ ಆದೇಶಿಸಿದೆ.

ವಿಶ್ವಸಂಸ್ಥೆ ಹಾಗೂ ಅಮೇರಿಕ ಈ ಬಗ್ಗೆ ಯಾವುದೇ ಮಾತುಕತೆಗೆ ತಯಾರಿಲ್ಲದೆ ತಮ್ಮ ಬಿಗು ನಿಲುವು ಪ್ರದರ್ಶಿಸಿವೆ. ಅಮೇರಿಕ ಇನ್ನೊಂದು ಕೊಲ್ಲಿ ಯುದ್ಧಕ್ಕೆ ತಯಾರಾಗುತ್ತಿದೆ. ಇರಾಕ್ ಮೇಲೆ ಯುದ್ಧದ ಬೆದರಿಕೆ ಹಾಕಿದೆ. ಇರಾಕಿ ಸರ್ಕಾರ ಎಲ್ಲಾ ಪರಿಸ್ಥಿತಿಗಳಿಗೆ ಸಿದ್ಧವಾಗಿದೆ ಎಂದು ಘೋಷಿಸಿದೆ.

ಇರಾಕಿನ ಸರ್ಕಾರದ ಈ ಅಮೇರಿಕ-ವಿರೋಧಿ ಭಾರೀ ಪ್ರದರ್ಶನಗಳಲ್ಲಿ ಸಾವಿರಾರು ಇರಾಕಿ ನಾಗರೀಕರು ಭಾಗವಹಿಸಿದ್ದನ್ನು ಇರಾಕಿ ಟೆಲಿವಿಷನ್ ತೋರಿಸಿತು.

ಚೀನಾ ಕಝಖಿಸ್ತಾನದ ನಡುವೆ ತೈಲ ನಿಕ್ಷೇಪ ಬೆಳವಣಿಗೆ ಬಗ್ಗೆ ಸಹಕಾರ ಒಪ್ಪಂದ

ಚೀನಾ ಮಾಜಿ ಸೋವಿಯತ್ ಗಣರಾಜ್ಯವಾದ ಮಧ್ಯ ಏಷ್ಯಾದ ಕಝಖಿಸ್ತಾನದ ಜತೆ ತೈಲ ನಿಕ್ಷೇಪ ಬೆಳವಣಿಗೆ ಬಗ್ಗೆ ಬಂಡವಾಳ ಹೂಡುವ ಹಾಗೂ ತಾಂತ್ರಿಕ ಸಹಕಾರದ ಬಗ್ಗೆ ದೀರ್ಘಕಾಲೀನ ಒಪ್ಪಂದ ಮಾಡಿಕೊಂಡು ಇಡೀ ಜಗತ್ತನ್ನು ಚಕಿತಗೊಳಿಸಿದೆ. ಅಮೇರಿಕಾದ ಹಾಗೂ ಇತರ ಯೂರೋಪಿನ ದೈತ್ಯ ತೈಲ ಕಂಪನಿಗಳು ಮಾತುಕತೆ ನಡೆಸುತ್ತಿದ್ದು, ಅಫಘಾನಿಸ್ತಾನದ ಮೂಲಕ ಪೈಪ್‌ಲೈನ್ ಹಾಕಲು ಹವಣಿಸುತ್ತಿದ್ದವು. ಇದಕ್ಕಾಗಿಯೇ ಅಮೇರಿಕ ಅಫಘಾನಿಸ್ತಾನದಲ್ಲಿ ತನ್ನ ಕೈಗೊಂಬೆ (ಪಾಕಿಸ್ತಾನದ ಮೂಲಕ ಕುಣಿಸಬಹುದಾದ) ತಾಲಿಬಾನ್ ಸರ್ಕಾರ ಸ್ಥಾಪಿಸಿತ್ತು. ಚೀನಾ ಈ ಕಂಟ್ರಾಕ್ಟ್ ಕಸಿದುಕೊಳ್ಳುವ ಮೂಲಕ, ಅಮೇರಿಕನ್ ಹಾಗೂ ಪಾಶ್ಚಿಮಾತ್ಯ ಕಂಪನಿಗಳಿಗೆ ಆರ್ಥಿಕ, ವಾಣಿಜ್ಯ, ಕ್ಷೇತ್ರದಲ್ಲೂ ಸವಾಲು ಹಾಕಬಲ್ಲದು ಎಂದು ತೋರಿಸಿಕೊಟ್ಟಿದೆ.

ಅಮೇರಿಕದಲ್ಲಿ ದಶಲಕ್ಷ ಕರಿಯ ಮಹಿಳೆಯರ ರ‍್ಯಾಲಿ

ಅಮೇರಿಕದಲ್ಲಿ ಫಿಲಿಡೆಲ್ಫಿಯ ಪಟ್ಟಣದಲ್ಲಿ 'ನೇಶನ್ ಆಫ್ ಇಸ್ಲಾಮ್' ಎಂಬ ಕರಿಯರ ಸಂಘಟನೆ ಸಂಘಟಿಸಿದ್ದ ರ‍್ಯಾಲಿಯಲ್ಲಿ ಹತ್ತು ಲಕ್ಷ ಕರಿಯ ಮಹಿಳೆಯರು ಭಾಗವಹಿಸಿದ್ದು, ಆ ದೇಶದಲ್ಲಿ ಇದು ಅಭೂತ ಪೂರ್ವ ಚಾರಿತ್ರಿಕ ಘಟನೆ ಎನ್ನಬಹುದು. ರ‍್ಯಾಲಿ ಇತರ ಮಹಿಳಾ ಸಂಘಟನೆಗಳು ಎತ್ತದ ವಿಷಯಗಳ ಬಗ್ಗೆ ಸೊಲ್ಲೆತ್ತಿದ್ದು ಗಮನಾರ್ಹ. ಕರಿಯರ ವಿರುದ್ಧ ಮಾನವ ಹಕ್ಕುಗಳ ಉಲ್ಲಂಘನೆ, ಪ್ರತ್ಯೇಕ ಕರಿಯ ಸ್ಕೂಲುಗಳು, ಕರಿಯ ಸಮುದಾಯಗಳಲ್ಲಿ ಮಾರಕ ದ್ರವ್ಯ ಹಂಚುವಲ್ಲಿ ಸಿಐಏ ಪಾತ್ರ ಇದು ರ‍್ಯಾಲಿ ದೇಶದ ಗಮನಕ್ಕೆ ತಂದಿರುವ ವಿಷಯಗಳು.

ಸಂಘಟಕರು ಕರಿಯ ಮಹಿಳೆಯರ ಸಮಸ್ಯೆಗಳಿಗೆ ಭಾವನಾತ್ಮಕ, ಧಾರ್ಮಿಕ ಪರಿಹಾರ ಒಡ್ಡಿದರೂ, ಇಂತಹ ರ‍್ಯಾಲಿ ನಡೆಯಿತೆಂಬುದೇ ಕರಿಯರ ಚಳುವಳಿಯಲ್ಲೊಂದು ಮುನ್ನಡೆ ಎನ್ನಬಹುದು. 1995 ಅಕ್ಟೋಬರ್‌ನಲ್ಲಿ ಇದೇ ಸಂಘಟನೆ 1 ದಶಲಕ್ಷ ಕರಿಯ ಪುರುಷರ ರ‍್ಯಾಲಿ ಸಂಘಟಿಸಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಶ್ರೀಲಂಕಾದಿಂದ ಪಲಾಯನ ಮಾಡಿದ ಅಮೇರಿಕನ್ ಕಮಾಂಡೋಗಳು

ಶ್ರೀಲಂಕಾದ ರಾಜಧಾನಿ ಕೊಲಂಬೋದಲ್ಲಿ ಬೀಡು ಬಿಟ್ಟಿದ್ದ ಅಮೇರಿಕನ್ 'ಗ್ರೀನ್ ಬೆರೆಟ್ಸ್' ಎಂಬ ಕಮಾಂಡೋ ಪಡೆಯನ್ನು, ಅಮೇರಿಕ ಸರ್ಕಾರದ ರಕ್ಷಣಾ ಖಾತೆ ಹಿಂದೆ ಕರೆಸಲು ನಿರ್ಧರಿಸಿದೆ. ಇದಕ್ಕೆ ತತ್‌ಕ್ಷಣದ ಕಾರಣ ಇತ್ತೀಚೆಗೆ ಕೊಲಂಬೋದ ಪಂಚತಾರಾ ಹೋಟೇಲ್ ಗಲಧಾರಿ ಇಂಟರ್‌ನ್ಯಾಷನಲ್‌ನಲ್ಲಿ LTTE ನಡೆಸಿದ ಆತ್ಮಾಹುತಿ ಬಾಂಬ್ ದಾಳಿಯ ಫಲ ಇದು ಎನ್ನಲಾಗಿದೆ.

ಒಂದು ವರದಿ ಪ್ರಕಾರ ಅಮೇರಿಕದ 'ಗ್ರೀನ್ ಬೆರೆಟ್ಸ್' ಕಮಾಂಡೋಗಳ ಮೇಲೆ ಈ ದಾಳಿ ಉದ್ದೇಶಿತವಾಗಿತ್ತು ಎನ್ನಲಾಗಿತ್ತು.

ಅರ್ಜೆಂಟೈನಾದಲ್ಲಿ ಎಡ- ಮಧ್ಯಮ ಪಂಥೀಯ ರಂಗಕ್ಕೆ ವಿಜಯ

ಅರ್ಜೆಂಟೀನಾದಲ್ಲಿ ಪಾರ್ಲಿಮೆಂಟಿಗೆ ನಡೆದ ಚುನಾವಣೆಗಳಲ್ಲಿ ಅಧ್ಯಕ್ಷ ಕಾರ್ಲೋಸ್ ಮೆನೆಮ್‌ರ ಪೆರೋನಿಸ್ಟ್ ಪಕ್ಷಕ್ಕೆ ಭಾರಿ ಮುಖಭಂಗದ ಸೋಲು ಆಗಿದೆ. ಆಗಸ್ಟ್‌ನಲ್ಲಿ ರಚಿತವಾದ ಎಡ-ಮಧ್ಯಮ ಪಂಥೀಯ ರಂಗ ಶೇಕಡಾ 51 ಮತಗಳಷ್ಟು ಬಹುಮತ ಪಡೆದಿದೆ. ಆಳುತ್ತಿರುವ ಪೆರೋನಿಸ್ಟ್ ಪಕ್ಷ ಶೇಕಡಾ 34 ಮತ ಪಡೆದು ಪರಾಭವ ಹೊಂದಿದೆ. ದೇಶದ ರಾಜಧಾನಿ ಇರುವ ಬ್ಯೂನಸ್ ಐರಿಸ್ ಪ್ರಾತಿನಿಧ್ಯದಲ್ಲಿ ಎಡ-ಮಧ್ಯಮ ಪಂಥೀಯ ರಂಗ ಭಾರಿ ಅನಿರೀಕ್ಷಿತ ಜಯಗಳಿಸಿದೆ. ಈ ಪ್ರಾಂತ್ಯದಲ್ಲಿ ಅರ್ಜೆಂಟೀನಾದ ಮೂರನೇ ಒಂದು ಭಾಗ ಜನ ವಾಸಿಸು ತ್ತಾರೆ.

'ಶಾಂತಿ ಮಾತುಕತೆ ವ್ಯರ್ಥ ಕಾಲಹರಣ' ಅರಾಫತ್

ಅಮೇರಿಕದಲ್ಲಿ ಅದರ ಸರ್ಕಾರದ ಕುಮ್ಮಕ್ಕಿನಿಂದ ಕರೆಯಲಾಗಿರುವ ಇಸ್ರೇಲ್-ಪ್ಯಾಲೆಸ್ಟೀನ್ ಮಾತುಕತೆಗಳು ವ್ಯರ್ಥ ಕಾಲಹರಣ ಎಂದು PLO ನಾಯಕ ಹಾಗೂ ಫ್ಯಾಲೆಸ್ಟೀನ್ ಅಧ್ಯಕ್ಷ ಯಾಸೆರ್ ಅರಾಫತ್ ಹೇಳಿದ್ದಾರೆ. ನೇತಾನ್ಯಾಹುರವರ ಕೆಲವು ಅವಮಾನಕಾರಿ ಸಲಹೆಗಳನ್ನು ಅರಾಫತ್ ತಿರಸ್ಕರಿಸಿದ್ದಾರೆ.

ಇಸ್ರೇಲಿ ಪ್ರಧಾನಿ ನೆತೆನ್ಯಾಹು ರವರ ಆಕ್ರಮಣಕಾರಿ, ಹಟಮಾರಿತನದ ನೀತಿಗಳಿಂದ ಬೇಸತ್ತಿರುವುದು ಅರಾಫತ್ ಮಾತ್ರವಲ್ಲ. ಅಮೇರಿಕದ ವಿದೇಶ ಮಂತ್ರಿ ಸಹ, 'ಈತ ಎಷ್ಟು ಭಾರಿ ಸುಳ್ಳು ಹೇಳಿ ದಬಾಯಿಸಿ ಕೊಂಡು ಹೋಗಬಹುದು ಎಂದು ತಿಳಿದಿದ್ದಾರೆ. ಒಂದು ಭಾರಿ, ಎರಡು ಬಾರಿ, ಮೂರು ಭಾರಿ. ಯಾವತ್ತೂ ಅಲ್ಲ......' ಎಂದು ಖಾರವಾಗಿ ಹೇಳಿದ್ದಾರೆ.

ಎಡಿನ್ ಬರೋ ಕಾಮನ್ ವೆಲ್ತ್ ಮತ್ತು GIS ಶೃಂಗ ಸಭೆಗಳಲ್ಲಿ ಬಡದೇಶಗಳ ಕಸಿವಿಸಿ

ಇತ್ತೀಚೆಗೆ ನಡೆದ ಎರಡು ಶೃಂಗಸಭೆಗಳಲ್ಲಿ ಜಾಗತೀಕರಣದ ಹೆಚ್ಚುತ್ತಿರುವ ದುಷ್ಪರಿಣಾಮಗಳ ಬಗ್ಗೆ ಬಡದೇಶಗಳ ತೀವ್ರ ಕಸಿವಿಸಿ, ಆತಂಕ ಹಿಂದೆಂದಿಗಿಂತಲೂ ಪ್ರಬಲವಾಗಿ ವ್ಯಕ್ತವಾಯಿತು.

ಎಡಿನ್ ಬರೋ ಕಾಮನ್ ವೆಲ್ತ್ ಶೃಂಗ ಸಭೆಯಲ್ಲಿ WTO ನ ಅಜೆಂಡಾವನ್ನು ಇಡೀ ಕಾಮನ್‌ವೆಲ್ತ್ ಮೇಲೆ ಹೊರಿಸಿದ ಪ್ರಯತ್ನಕ್ಕೆ ಭಾರತದ ನಾಯಕತ್ವದಲ್ಲಿ ಬಡದೇಶಗಳು ಪ್ರತಿರೋಧ ಒಡ್ಡಿದವು. ಪ್ರಧಾನಿ ಗುಜರಾಲ್ ಮಾತನಾಡುತ್ತಾ 1993 ಉರುಗ್ವೆ ವಾಣಿಜ್ಯ ಮಾತುಕತೆಗಳೇ ನಮಗೆ ಇನ್ನೂ 'ಜೀರ್ಣ ಆಗಿಲ್ಲ' . WTO ನ ಬಗ್ಗೆ ಮಾತನಾಡುವ ಮೊದಲು ಉರುಗ್ವೆ ಸುತ್ತಿನ ಮಾತುಕತೆ ಪೂರ್ತಿಮಾಡುವುದು ಒಳ್ಳೆಯದು. ತಾರತಮ್ಯವಿಲ್ಲದ ಪಾರದರ್ಶಕವಾದ ಸ್ಪಷ್ಟ ಬಹುಪಕ್ಷೀಯವಾಗಿಲ್ಲದ ಒಪ್ಪಂದಕ್ಕೆ ತೀವ್ರ ಬೆಂಬಲ ವ್ಯಕ್ತವಾಯಿತು.

G-7 ಬಡದೇಶಗಳ ಗುಂಪಿನ ಬೇಡಿಕೆ. ಇತ್ತೀಚೆಗೆ ಮಲೇಶ್ಯಾ ಕೌಲಾಲಂಪೂರ್‌ನಲ್ಲಿ ನಡೆದ ಶೃಂಗಸಭೆಯಲ್ಲೂ ಜಾಗತೀಕರಣ, ತಾರತಮ್ಯದ ವಾಣಿಜ್ಯ ಒಪ್ಪಂದ, WTOನ ಬಗ್ಗೆ ತೀವ್ರ ಆತಂಕ ವ್ಯಕ್ತವಾಯಿತು. WTO ನಲ್ಲಿ ಬಡದೇಶಗಳ ಹಿತಾಸಕ್ತಿಗೆ ಹೋರಾಡಲು ಇಚ್ಛಾಶಕ್ತಿ ವ್ಯಕ್ತವಾಯಿತು. ಇತ್ತೀಚೆಗೆ ಏಷ್ಯಾ-ಫೆಸಿಫಿಕ್ ದೇಶಗಳಿಗೆ ಭಾರಿ ಹಾನಿ ಉಂಟುಮಾಡಿದ 'ವಿದೇಶೀ ಕರೆನ್ಸಿಗಳ ಸಟ್ಟಾ ವ್ಯಾಪಾರದ ಬಿಕ್ಕಟ್ಟು ಬಗ್ಗೆ -ಶೃಂಗಸಭೆ ತೀವ್ರ ಆತಂಕ ವ್ಯಕ್ತಪಡಿಸಿತು. ಮುಕ್ತ ಮಾರುಕಟ್ಟೆಯ ಹೆಸರಲ್ಲಿ ಖಾಸಗಿ ಲಾಭಕ್ಕಾಗಿ, ಬಡದೇಶಗಳನ್ನು ಒತ್ತೆ ಇಡುವ ಧೋರಣೆಯ ಅಪಾಯದ ಬಗ್ಗೆ ಖಂಡಿಸಲಾಯಿತು. ಜಾಗತೀಕರಣದ ದಿಕ್ಕಿನ ಬಗ್ಗೆಆತಂಕ ವ್ಯಕ್ತವಾಯಿತು. ಈ ಎರಡೂ ಶೃಂಗಸಭೆಗಳು ಜಾಗತೀಕರಣದ ನಿಜವಾದ ಅರ್ಥ ಬಡದೇಶಗಳಿಗೆ ಚುರುಕು ಮುಟ್ಟಿಸುತ್ತಿರುವುದರ ಪರಿಣಾಮ.

'ಚೆ'ಗೆ ಕ್ಯಾಸ್ಟ್ರೋ ಶ್ರದ್ಧಾಂಜಲಿ

ಪುಟ 5 ರಿಂದ

ಸಾವಿಲ್ಲ. ಚೆ ಗಾಯಗೊಂಡು ಆತನನ್ನು ಬಂಧಿಯಾಗಿ ಒಯ್ದಾಗ ಒಬ್ಬ ಅಮೇರಿಕನ್ ಸರ್ಕಾರಿ ಏಜೆಂಟು ಅಲ್ಲೇನು ಮಾಡುತ್ತಿದ್ದ? ಆತನನ್ನು ಕೊಂದರೆ ಆತ ಒಬ್ಬ ಹೋರಾಟಗಾರನಾಗಿ ಉಳಿಯುವುದಿಲ್ಲ ಎಂದು ಅವರೇಕೆ ನಂಬಿದರು? ಇಂದು ಆತನ ಲಾ ಹಿಗ್ವೇರಾದಲ್ಲಿಲ್ಲ, ಆತ ಎಲ್ಲೆಡೆಯೂ ಇದ್ದಾನೆ. ಎಲ್ಲೆಲ್ಲಿ ನ್ಯಾಯಪೂರ್ಣ ಉದ್ದೇಶವನ್ನು ಸಮರ್ಥಿಸಿಕೊಳ್ಳಬೇಕಾಗಿದೆಯೋ, ಉಳಿಸಿಕೊಳ್ಳಬೇಕಾಗಿದೆಯೋ ಅಲ್ಲಿ ಆತ ಇದ್ದಾನೆ. ಆತನನ್ನು ಮುಗಿಸಿಬಿಟ್ಟು ಅದೃಶ್ಯ ಗೊಳಿಸಬೇಕೆಂದಿದ್ದವರಿಗೆ ಆತನ ಎಂದೆಂದೂ ಮಾಸದ ಪ್ರಭಾವ ಆಗಲೇ ಇತಿಹಾಸವನ್ನು ಪ್ರವೇಶಿಸಿತ್ತು ಎಂಬುದನ್ನು, ಆತನ ಪ್ರತಿಭಾ ಪೂರ್ಣವಾದ ಭವಿಷ್ಯವಾಣಿ, ಕಣ್ಣೋಟ ಆತನನ್ನು ಜಗತ್ತಿನ ಎಲ್ಲಾ ಕೋಟಿ ಕೋಟಿ ಬಡಜನಗಳಿಗೆ ಬಲ್ಲ ಯುವಜನರಿಗೆ, ಮಕ್ಕಳಿಗೆ, ಹಿರಿಯರಿಗೆ ಒಂದು ಸಂಕೇತವಾಗಿಬಿಟ್ಟಿತ್ತು ಎಂಬುದನ್ನು ಗ್ರಹಿಸಿಕೊಳ್ಳುವ ಸಾಮರ್ಥ್ಯವಿರಲಿಲ್ಲ. ಈ ಭೂಗೋಳದಾದ್ಯಂತ ಯಾವುದೇ ಸಾಮಾಜಿಕ ಹಿನ್ನೆಲೆಯ ಪ್ರಾಮಾಣಿಕ ಜನಗಳು ಆತನ ಬಗ್ಗೆ ಅಭಿಮಾನ ಪಡುತ್ತಾರೆ.

ಚೆ ಹಿಂದೆಂದಿಗಿಂತಲೂ ಹೆಚ್ಚೆಚ್ಚು ಸಮರಗಳನ್ನು ನಡೆಸುತ್ತಿದ್ದಾನೆ. ಗೆಲ್ಲುತ್ತಿದ್ದಾನೆ.

ಧನ್ಯವಾದಗಳು ಚೆ, ನಿನ್ನ ಇತಿಹಾಸಕ್ಕೆ, ನಿನ್ನ ಜೀವನಕ್ಕೆ ಮತ್ತು ನಿನ್ನ ನಿದರ್ಶನಕ್ಕೆ, ನೀನು ಅಷ್ಟೊಂದು ಕಷ್ಟದಿಂದ ಹೋರಾಡಿದ ವಿಜಯಗಳ ರಕ್ಷಣೆಗಾಗಿ, ಕ್ರಾಂತಿಯನ್ನು, ದೇಶವನ್ನು ಹಾಗೂ ಸಮಾಜವಾದದ ಸಾಧನೆಗಳನ್ನು ರಕ್ಷಿಸಲಿಕ್ಕಾಗಿ ನಡೆಸಿರುವ ಕಷ್ಟಮಯ ಸಮರದಲ್ಲಿ ನಮ್ಮ ಬಲ ಹೆಚ್ಚಿಸುವ ತುಕಡಿಯಾಗಿರುವುದಕ್ಕೆ ನಿನಗೆ ಧನ್ಯವಾದಗಳು. ನಿನ್ನ ಮಹಾನ್ ಕನಸಿನ ಈಡೇರಿದ ಈ ಭಾಗದ ರಕ್ಷಣೆಗಾಗಿ, ಕ್ಯೂಬಾದ ವಿರುದ್ಧ ಸಾಮ್ರಾಜ್ಯಶಾಹಿ ಯೋಜನೆಗಳನ್ನು ತಲೆಕೆಳಗೆ ಮಾಡುವ ಅಪೂರ್ವ ಸಾಧನೆಗಾಗಿ, ನಿರ್ಬಂಧಗಳನ್ನು ಎದುರಿಸಲು, ವಿಜಯ ಸಾಧಿಸಲು ನಿನ್ನನ್ನು ಅವಲಂಬಿಸಲು ಸಾಧ್ಯ.

ನಿನಗೆ ತಿಳಿದಿರುವಂತೆ ಈ ಭೂಮಿ ನಿನ್ನ ಭೂಮಿ, ಈ ಜನ ನಿನ್ನ ಜನ, ಈ ಕ್ರಾಂತಿ ನಿನ್ನ ಕ್ರಾಂತಿ. ಇಲ್ಲಿ ಈಗಲೂ ಸಮಾಜವಾದದ ಬಾವುಟವನ್ನು ಹೆಮ್ಮೆ ಹಾಗೂ ಗೌರವದಿಂದ ಹಾರಿಸಲಾಗುತ್ತದೆ.

ನಮ್ಮ ಬಲ ಹೆಚ್ಚಿಸಲು ಬಂದಿರುವ ತುಕಡಿಯ ವೀರ ಸಂಗಾತಿಗಳೇ. ನಿಮಗಿದೊ ಸ್ವಾಗತ. ನೀವು ನಮ್ಮ ಜನತೆಯೊಂದಿಗೆ ರಕ್ಷಿಸಿಕೊಳ್ಳುವ ವಿಚಾರಗಳ ಮತ್ತು ನ್ಯಾಯದ ಕಂದಕಗಳನ್ನು ಶತ್ರುವೆಂದೂ ಗೆಲ್ಲಲಾರ. ನಾವೆಲ್ಲಾ ಜೊತೆಗೂಡಿ ಒಂದು ಉತ್ತಮ ಜಗತ್ತಿಗಾಗಿ ಹೋರಾಟವನ್ನು ಮುಂದುವರಿಸೋಣ. ○

ಪಾಕ್ ಟಿವಿ ಪರದೆ ಮೇಲೆ ಮಹಿಳೆಯರ ಮೇಲೆ ನಿರ್ಬಂಧಗಳು

ಪಾಕಿಸ್ತಾನದ ಸರ್ಕಾರ ಟಿವಿ ಪರದೆಯಲ್ಲಿ ಮಹಿಳೆಯರನ್ನು ತೋರಿಸುವುದರ ಮೇಲೆ ತೀವ್ರ ನಿರ್ಬಂಧಗಳನ್ನು ಹಾಕಿದೆ. ಒಂದೇ ಸಮಯದಲ್ಲಿ ಪುರುಷರು ಮಹಿಳೆಯರು (ವಾರ್ತೆ ಸೇರಿದಂತೆ) ಟಿವಿ ಪರದೆಯಲ್ಲಿ ಕಾಣಿಸಿಕೊಳ್ಳುವುದನ್ನು ನಿರ್ಬಂಧಿಸಲಾಗಿದೆಯಂತೆ. 'ಬಬಲ್ ಗಮ್' ಬಾಯಿಯಲ್ಲಿ ಒಡೆಯುವುದು, ಐಸ್ ಕ್ರೀಮ್ ನೆಕ್ಕುವುದು, ಸೋಪಲ್ಲಿ ಕೂದಲು, ಮೈ ತೊಳೆಯುವುದು- ಇತ್ಯಾದಿಗಳನ್ನು ನಿರ್ಬಂಧಿಸಲಾಗಿದೆ.

ಸೋಪು, ಡಿಟರ್ಜೆಂಟ್‌ಗಳ ಜಾಹೀರಾತು ಇಲ್ಲದಿದ್ದರೆ ಟಿವಿಯಲ್ಲಿ ಇನ್ನೇನು ತೋರಿಸುವುದು ಎಂದು ಕಮರ್ಷಿಯಲ್ ಚಿತ್ರ ತಯಾರಕರು ತಲೆ ಕೆರೆದುಕೊಳ್ಳುತ್ತಿದ್ದಾರಂತೆ. ಬಹುರಾಷ್ಟ್ರೀಯ ಕಂಪನಿಗಳೇ ಬನ್ನಿ! ಆದರೆ ನಿಮ್ಮ ಜಾಹೀರಾತುಗಳಲ್ಲಿ (ಅದೂ ಸೋಪು, ಡಿಟರ್ಜೆಂಟ್) ಮಹಿಳೆಯರು 'ಗೌರಮ್ಮ'ಗಳಾಗಿರಬೇಕು ಎಂಬುದು 'ಮುಕ್ತ ಮಾರುಕಟ್ಟೆ'ಯ ಸಿದ್ಧಾಂತಕ್ಕೆ ವಿರುದ್ಧವಲ್ಲವೇ ಎಂದು ಬಹುರಾಷ್ಟ್ರೀಯ ಕಂಪನಿಗಳು ಗೊಣಗುತ್ತಿದ್ದಾರಂತೆ. ○

ಲೋಕಸಂಚಾರ

ಇರಾಕ್ ಮೇಲೆ ಮತ್ತೊಮ್ಮೆ ಅಮೇರಿಕನ್ ಬೆದರಿಕೆ:

ಸಿಪಿಐ(ಎಂ) ಖಂಡನೆ

ವಿಶ್ವಸಂಸ್ಥೆಯ ಪರೀಕ್ಷಣಾ ತಂಡದಲ್ಲಿ ಅಮೇರಿಕನ್ ಸದಸ್ಯರ ಬಗ್ಗೆ ಎದ್ದಿರುವ ವಿವಾದವನ್ನು ಬಳಸಿಕೊಂಡು ಇರಾಕಿನ ಮೇಲೆ ನಿರ್ಬಂಧನಗಳು ಹಾಗೂ ಆರ್ಥಿಕ ದಿಗ್ಬಂಧನ ಹೇರಲು ಆತುರವಾಗಿರುವ ಅಮೇರಿಕಾ ಮಿಲಿಟರಿ ಕ್ರಮದ ಬೆದರಿಕೆ ಹಾಕಿರುವುದನ್ನು ಸಿಪಿಐ(ಎಂ) ಪೋಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಈ ವಿವಾದವನ್ನು ಬಳಸಿಕೊಂಡು ಇರಾಕಿನ ಮೇಲೆ ಇನ್ನೊಂದು ಮಿಲಿಟರಿ ಧಾಳಿ ನಡೆಸಲು ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಅನುಮೋದನೆ ಪಡೆಯಲು ಅಮೇರಿಕಾ ಪ್ರಯತ್ನಿಸುತ್ತಿದೆ. ಕಳೆದ ಆರು ವರ್ಷಗಳಿಂದ ಇರಾಕಿನ ಮೇಲೆ ಆರ್ಥಿಕ ದಿಗ್ಬಂಧನಗಳನ್ನು ಹೇರಲಾಗಿದ್ದು ಇದರಿಂದ ಸಾಕಷ್ಟು ಪೋಷಕ ಆಹಾರ ಹಾಗೂ ಔಷಧಿಗಳಿಲ್ಲದೆ ಹಲವಾರು ಮಕ್ಕಳ ಸಾವು ಸಂಭವಿಸಿದೆ. ಈ ಪ್ರದೇಶಗದಲ್ಲಿ ತನ್ನ ಯಜಮಾನಿಕೆ ಹೊರಿಸ ಬಯಸುವ ಕುತಂತ್ರ ನಡೆಸಿರುವ ಅಮೇರಿಕಾ ವಿಶ್ವಸಂಸ್ಥೆಯನ್ನು ಈ ದಿಗ್ಬಂಧನಗಳನ್ನು ಹಿಂತೆಗೆದುಕೊಳ್ಳಲು ಬಿಡುತ್ತಿಲ್ಲ. ವಿಶ್ವದ ಎಲ್ಲಾ ಶಾಂತಿ ಪ್ರಿಯ ಶಕ್ತಿಗಳು ಅಮೇರಿಕಾದ ಈ ಬೆದರಿಕೆ ತಂತ್ರ ಗಳನ್ನು ಖಂಡಿಸಬೇಕು ಎಂದು ಸಿಪಿಐ(ಎಂ) ಪೋಲಿಟ್ ಬ್ಯೂರೋ ಕರೆ ನೀಡಿದೆ. ಪ್ರಸ್ತುತ ವಿವಾದವನ್ನು ಬಗೆಹರಿಸಲು ಇರಾಕಿನ ಮೇಲೆ ಮಿಲಿಟರಿ ಕ್ರಮವನ್ನು ಕೈಗೊಳ್ಳುವ ಯಾವುದೇ ಪ್ರಯತ್ನವನ್ನು ವಿರೋಧಿಸಬೇಕು ಎಂದು ಅದು ಭಾರತ ಸರ್ಕಾರವನ್ನು ಒತ್ತಾಯಿಸಿದೆ.

ಟಿಬೇಟ್ ವಿಷಯದಲ್ಲಿ ಅಮೇರಿಕಾದ ಮೂಗು ತೂರಿಕೆ: ಸಿಪಿಐ(ಎಂ) ಖಂಡನೆ

ಅಮೇರಿಕನ್ ಆಡಳಿತ ಟಿಬೇಟ್ ವ್ಯವಹಾರಗಳಿಗೆ ಒಬ್ಬ ಸಂಯೋಜಕನನ್ನು ನೇಮಿಸಲು ನಿರ್ಧರಿಸುವುದು ಚೀನಾದ ಆಂತರೀಕ ವ್ಯವಹಾರಗಳಲ್ಲಿ ಒಂದು ಹಸ್ತಕ್ಷೇಪದ ಕೃತ್ಯ ಎಂದು ಸಿಪಿಐ(ಎಂ) ನ ಪೋಲಿಟ್ ಬ್ಯೂರೋ ಖಂಡಿಸಿದೆ. ಕ್ಲಿಂಟನ್ ಆಡಳಿತ ಚೀನಾದಲ್ಲಿ ಮಾನವ ಹಕ್ಕುಗಳ ನಿರ್ಣಯಕಾರ ತಾನೇ ಎಂಬಂತೆ ವರ್ತಿಸುತ್ತಿದೆ. ಚೀನೀ ಸರ್ಕಾರ ಮತ್ತು ದಲೈ ಲಾಮಾ ನಡುವೆ ಮಾತುಕತೆ ಏರ್ಪಡಿಸುವ ಸ್ವಯಂ ನೇಮಿತ ಮಧ್ಯಸ್ತಿಕೆದಾರನಾಗಲೂ ಅದು ಪ್ರಯತ್ನಿಸುತ್ತಿದೆ. ಇದೊಂದು ಭಂಡತನದಿಂದ ಕೂಡಿದ ದುರುದ್ದೇಶಪೂರಿತ ನಿಲುವು ಎಂದು ಸಿಪಿಐ(ಎಂ) ಖಂಡಿಸಿದೆ.

ಇಂತಹ ಕ್ರಮಕ್ಕೆ ತನ್ನ ವಿರೋಧವನ್ನು ಭಾರತ ಸರ್ಕಾರ ತಕ್ಷಣವೇ ತಿಳಿಸಬೇಕು. ಏಕೆಂದರೆ ಟಿಬೇಟ್ ಕುರಿತಂತೆ ಅಮೇರಿಕಾದ ಧೋರಣೆಗೂ ಕಾಶ್ಮೀರ ಕುರಿತಂತೆ ಅದರ ಧೋರಣೆಗೂ ಸಾಮ್ಯತೆ ಇದೆ. ಇಲ್ಲಿ ಅದು ಭಾರತ ಬಯಸದಿದ್ದರೂ ಭಾರತ ಪಾಕಿಸ್ತಾನಗಳ ನಡುವೆ ಮಧ್ಯಸ್ಥಿಕೆದಾರನಾಗಲು ಹವಣಿಸುತ್ತಿರುವುದನ್ನು ನಾವು ಹಲವು ಬಾರಿ ವಿರೋಧಿಸುತ್ತಿದ್ದೇವೆ. ಆದ್ದರಿಂದ ಇದೇ ರೀತಿ ಚೀನಾ ಜನತಾ ಗಣತಂತ್ರದ ಭಾಗವಾದ ಟಿಬೇಟ್ ನ ವ್ಯವಹಾರಗಳಲ್ಲಿ ಹೊರಗಿನವರ ಹಸ್ತಕ್ಷೇಪವನ್ನು ಭಾರತ ಒಪ್ಪಬಾರದು ಎಂದು ಸಿಪಿಐ(ಎಂ) ಪೋಲಿಟ್ ಬ್ಯೂರೋ ಆಗ್ರಹ ಪಡಿಸಿದೆ.


ಮಹಾಗಜ ಗಾತ್ರದ ಬಿಜೆಪಿ ಮಂತ್ರಿಮಂಡಲ
ಭಾರತೀಯ ಪ್ರಜಾಪ್ರಭುತ್ವ ಇತಿಹಾಸದಲ್ಲೊಂದು ಮಹಾ ನಾಚಿಕೆಗೇಡಿನ ದಾಖಲೆ

ಕಲ್ಯಾಣಸಿಂಗ್ ನೇತೃತ್ವದಲ್ಲಿ 93 ಸದಸ್ಯರುಳ್ಳ ಒಂದು ಮಂತ್ರಿ ಮಂಡಲದ ರಚನೆ ಅಲ್ಲದೆ ಅದನ್ನು ಇನ್ನಷ್ಟು ವಿಸ್ತರಿಸುವ ವಚನ. ಇದು ಭಾರತೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲೇ ಅತ್ಯಂತ ನಾಚಿಕೆಗೇಡಿನ ದಾಖಲೆ ಎಂದು ಎಡಪಕ್ಷಗಳ ಮುಖಂಡರು ಅಕ್ಟೋಬರ್ 28 ರಂದು ನೀಡಿದ ಒಂದು ಹೇಳಿಕೆಯಲ್ಲಿ ಖೇದ ವ್ಯಕ್ತಪಡಿಸಿದ್ದಾರೆ. ಈ ಅಭೂತಪೂರ್ವ ಗಾತ್ರದ ಮಂತ್ರಿ ಮಂಡಲ ಬಿಜೆಪಿ ಅನೀತಿಯುತ ಕುದುರೆ ವ್ಯಾಪಾರಕ್ಕಿಳಿದಿದೆ ಎಂಬ ದೇಶಾದ್ಯಾಂತ ಎಲ್ಲಾ ಪ್ರಜಾಪ್ರಭುತ್ವವಾದಿ ಜನಗಳಲ್ಲಿದ್ದ ಸಂದೇಹವನ್ನು ದೃಢಪಡಿಸಿದೆ. ಈಗ ಉತ್ತರಪ್ರದೇಶ ಮಂತ್ರಿ ಸಂಪುಟದಲ್ಲಿ ಕ್ರಿಮಿನಲ್ ಚಾರ್ಜ್ ಶೀಟ್ ಪಡೆದವರಿದ್ದಾರೆ. ಕುಖ್ಯಾತ ಗೂಂಡಾಗಳಿದ್ದಾರೆ. ಪಕ್ಷಾಂತರಕ್ಕೆ ಸಿಕ್ಕಿದ್ದು ಕೇವಲ ಮಂತ್ರಿಪದವಿಯ ಬಹುಮಾನ ಮಾತ್ರವಲ್ಲ ಎಂಬುದು ಸ್ವಯಂವೇದ್ಯ. ದೊಡ್ಡ ಪ್ರಮಾಣದಲ್ಲಿ ಕಪ್ಪು ಹಣವನ್ನು ಬಿಳಿ ಮಾಡುವ ಕೆಲಸ ಮತ್ತಿತರ ಪ್ರಲೋಭನೆಗಳನ್ನು ನೀಡಲಾಗಿದೆ ಎಂಬುದು ಸ್ವಯಂವೇದ್ಯ ಎಂದು ಎಡಪಕ್ಷಗಳ ಮುಖಂಡರ ಈ ಹೇಳಿಕೆ ಅಭಿಪ್ರಾಯಪಟ್ಟಿದೆ.

"ಮೌಲ್ಯಗಳು" ಹಾಗೂ 'ನೀತಿಗಳು' ಬಗ್ಗೆ ಸದಾ ಉಪದೇಶ, ಭಾಷಣಗಳನ್ನು ನೀಡುವ ವಾಜಪೇಯಿ, ಅಡ್ವಾಣಿ ಈ ಎಲ್ಲಾ ನಾಚಿಕೆಗೇಡಿನ ಕ್ರಮಗಳನ್ನು ಸಮರ್ಥಿಸಿಕೊಳ್ಳುತ್ತಿರುವುದೂ ಕೂಡಾ ಅಷ್ಟೇನೂ ಆಶ್ಚರ್ಯಕರ ಸಂಗತಿಯಲ್ಲ ಎಂದು ಈ ಹೇಳಿಕೆ ಅಭಿಪ್ರಾಯಪಟ್ಟಿದೆ.

ಜೆ.ಎಂ.ಎಂ ಲಂಚ ಪ್ರಕರಣ ಈಗಲೂ ಜನಗಳ ಮನದಲ್ಲಿ ಹಸಿರಾಗಿದೆ. ಬಿಜೆಪಿ ಇಂತಹ ಪಕ್ಷಾಂತರವನ್ನು ಯಾವ ರೀತಿಯಲ್ಲಿ ಮಾಡಿಸಿತು ಎಂಬ ಬಗ್ಗೆ ಸಂಯುಕ್ತರಂಗ ಸರ್ಕಾರ ಸೂಕ್ತ ಸಂಸ್ಥೆಯಿಂದ ಆಮೂಲಾಗ್ರ ತನಿಖೆ ನಡೆಸಬೇಕು ಎಂದು ಎಡ ಪಕ್ಷಗಳ ಮುಖಂಡರು ಆಗ್ರಹಪಡಿಸಿದ್ದಾರೆ.

ಸಿ.ಪಿ.ಐ(ಎಂ) ನ ಮುಖಂಡರಾದ ಹರ್ಕಿಷನ್ ಸಿಂಗ್ ಸುರ್ಜಿತ್, ಸೀತಾರಾಂ ಯೆಚೂರಿ, ಎಸ್. ರಾಮಚಂದ್ರನ್ ಪಿಳ್ಳೈ, ಸಿಪಿಐನ ಮುಖಂಡರಾದ ಎ.ಬಿ.ಬರ್ದನ್ ಹಾಗೂ ಆರ್.ಎಸ್.ಪಿಯ ಮುಖಂಡರಾದ ಅಬನಿ ರಾಯ್ ಈ ಹೇಳಿಕೆಯನ್ನು ನೀಡಿದ್ದಾರೆ.







ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಉನ್ನಿ



'ಉತ್ತರ ಪ್ರದೇಶದ ಪ್ರಯೋಗ'ವನ್ನು ಬಿಜೆಪಿ ಕೇಂದ್ರದಲ್ಲಿ ಪುನಾರಾವರ್ತನೆಗೊಳಿಸುತ್ತದೆಯಂತೆ. ಈ ಪ್ರಯೋಗದ 'ಹಿರಿಮೆ' ಯಾದರೂ ಏನು? ಇಲ್ಲಿ ಉದ್ಧರಿಸಿಕೊಂಡಿರುವ 'ಫ್ರಂಟ್‌ಲೈನ್' ಪತ್ರಿಕೆಯ ಎರಡು ಫೋಟೋಗಳು ಹಾಗೂ ವಿವಿಧ ವ್ಯಂಗ್ಯಚಿತ್ರಕಾರರ ಪ್ರತಿಕ್ರಿಯೆಗಳು ಸ್ಪಷ್ಟಪಡಿಸುತ್ತಿವೆ. ಮೇಲಿನ ಫೋಟೋದಲ್ಲಿ ಆಸನದ ಮೇಲೆ ನಿಂತು ಮೈಕ್ ಎಸೆಯುತ್ತಿರುವಾತ ಈಗ ರಘುರಾಜ್ ಪ್ರಸಾದ್. ಕಾಂಗ್ರೆಸ್ ಪಕ್ಷಾಂತರಿಗಳ ಮುಖಂಡ ನರೇಶ್ ಅಗರವಾಲ್ ಹಿಂದೆ ನಿಂತು ಬೊಟ್ಟು ಮಾಡುತ್ತಿದ್ದಾರೆ. ಪಕ್ಕದ ಚಿತ್ರದಲ್ಲಿ ವೃತ್ತದಲ್ಲಿರುವವರು ಎಂ.ಎಲ್.ಎ.ಗಳಲ್ಲದ ಬಿಜೆಪಿ ಮುಖಂಡರು!



ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್



ಪ್ರಜಾಪ್ರಭುತ್ವದ ದೇವಾಲಯ

ಎಕಾನಾಮಿಕ್ಸ್ ಟೈಂಸ್‌ನಲ್ಲಿ ಸಲಾಂ



ಎಕಾನಾಮಿಕ್ ಟೈಂಸ್‌ನಲ್ಲಿ ಪೊನ್ನಪ್ಪ



ದಿ ಹಿಂದೂನಲ್ಲಿ ಸುರೇಂದ್ರನ್

ಅಣಕ | ಶರತ್ ಚಂದ್ರ

'ಈಡಿಯಟ್ಸ್......' ಎಂದಿದ್ದು ಯಾರಿಗೆ?

'ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಸ್ಥಾನ' ಎಂದು ಪ್ರತಿ ರಾಜ್ಯೋತ್ಸವದಂದು ವೀರಘೋಷ ಮಾಡಿ ಪೋಲೀಸರನ್ನು ಬೈಯ್ಯಲು ಇಂಗ್ಲೀಷ್ ಬಳಸುವ ಮುಖ್ಯಮಂತ್ರಿ ಥರ ಆಗದೆ, ಹೇಗಾದರೂ ಮಾಡಿ ಬೇತಾಳವನ್ನು ಹಿಡಿದು ತರಲೇಬೇಕು ಎಂದು ಹಠ ಬಿಡದ ತ್ರಿವಿಕ್ರಮನು ಮತ್ತೆ ಮುಳ್ಳು ಮುತ್ತುಗದ ಮರದ ಬಳಿ ಬಂದು ಶವವನ್ನು ಭುಜದ ಮೇಲೆ ಹಾಕಿಕೊಂಡು ಎಂದಿನಂತೆ ಮೌನವಾಗಿ ಸಿಲ್ವರ್ ಜ್ಯೂಬಿಲಿ ಪಾರ್ಕ್ ಮಾರ್ಗವಾಗಿ ಸಿಟಿ ಮಾರ್ಕೆಟ್ ಕಡೆಗೆ ನಡೆಯತೊಡಗಿದನು.

ಶವ ಅಲುಗಾಡಿ, 'ಅಯ್ಯಾ ರಾಜನೇ, ಇತ್ತೀಚಿಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಎಲ್ಲರನ್ನೂ ಬಯ್ಯಲು ಆರಂಭಿಸಿದ್ದು ಯಾರಿಗೆ ಯಾಕೆ ಬಯ್ಯುತ್ತಿದ್ದಾರೆ ಎಂದು ತಿಳಿಯುವುದೇ ಕಷ್ಟವಾಗಿದೆ. ಆ ಬಗ್ಗೆ ಹೇಳುತ್ತಾ ಹೋಗುತ್ತೇನೆ. ನೀನು ಕೇಳುತ್ತಾ ನಡೆ. ಇದರಿಂದ ನಿನ್ನ ಮಾರ್ಗಾಯಾಸವೂ ನೀಗುತ್ತದೆ" ಎಂದು ಮುಖ್ಯಮಂತ್ರಿಗಳ ಬಯ್ಯೋಣದ ಬಗ್ಗೆ ಹೇಳಲು ಉಪಕ್ರಮಿಸಿತು.

ತ್ರಿವಿಕ್ರಮ ರಾಜನು ಕಿವಿಯನ್ನು ಲೌಡ್ ಸ್ಪೀಕರಿನಂತೆ ಹಿಗ್ಗಿಸಿ ಆಲಿಸತೊಡಗಿದನು-ಮೌನವಾಗಿ.

'ಎಲೈ ಮಹಾರಾಜನೇ, ಮೊನ್ನೆ ಹೊಸ ಸಿಟಿ ಮಾರ್ಕೆಟ್‌ನ ಉದ್ಘಾಟನಾ ಸಮಾರಂಭದಲ್ಲಿ 'ಈಡಿಯಟ್ಸ್.....' ಅಂತ ಮೈಕ್ ಮುಂದೆ ಪಬ್ಲಿಕ್ಕಾಗಿ ಬೈದು ಬಿಟ್ಟರಂತೆ. ಪೇಪರ್‌ಗಳ ಪ್ರಕಾರ ಅವರು ಬೈದಿದ್ದು ಅಲ್ಲಿ ಗಲಾಟೆ ಮಾಡಿದವರನ್ನು ಹೊರಕ್ಕೆ ಕತ್ತು ಹಿಡಿದು ತಳ್ಳೋದು ಬಿಟ್ಟು ಸುಮ್ಮನೆ ನಿಂತಿದ್ದ ಪೋಲೀಸರನ್ನು ಅಂತ. ಆದರೆ ನನಗೆ ಆ ಬಗ್ಗೆ ಸಂದೇಹ. ಆ ಬಗ್ಗೆ ನಿನ್ನನ್ನು ಪ್ರಶ್ನೆ ಕೇಳುತ್ತೇನೆ. ನೀನು ಉತ್ತರ ಹೇಳುವಂತವನಾಗು!

ಮೊನ್ನೆ ತಾನೆ ಜನತಾದಳದ ಕಾರ್ಮಿಕ ವಿಭಾಗ ಉದ್ಘಾಟಿಸುತ್ತಾ ಕಮ್ಯುನಿಸ್ಟ್ ಕಾರ್ಮಿಕ ನಾಯಕರ ಮೇಲೆ ತೋರಿದ ಕೋಪ ಇನ್ನೂ ಹೋಗಿಲ್ಲವೆ? ಅವರ ಮೇಲಿನ ಕೋಪದಲ್ಲೇ 'ಈಡಿಯಟ್ಸ್...'ಎಂದಿರಬಹುದೇ?

ವೀರಪ್ಪನ್ ಒಮ್ಮೆ ಕಿಡ್‌ನ್ಯಾಪ್ ಮಾಡುತ್ತಾ, ಇನ್ನೊಮ್ಮೆ ಸರೆಂಡರ್‌ಗೆ ಷರತ್ತು ಹಾಕುತ್ತಾ ಇರುವುದರಿಂದ ತಲೆಕೆಟ್ಟು ಹೋಗಿ ವೀರಪ್ಪನ್‌ನನ್ನೇ ಬೈದಿರಬಹುದೇ?

ಮೈಸೂರಿಗೆ, ಇನ್ನೆಲ್ಲೆಲ್ಲೋ ಹೆದ್ದಾರಿ ಮಾಡಲು ಪ್ರೈವೇಟಾಗಿ ಪ್ರೈವೇಟ್‌ನವರಿಗೆ ಕೊಟ್ಟರೆ ಅದನ್ನು ಅರ್ಥ ಮಾಡಿಕೊಳ್ಳದೆ 'ದಾರಿಗೆ ಸುಂಕ ಹಾಕುತ್ತಾರಲ್ಲಾ' ಎಂದು ಬೊಂಬಡಿ ಹೊಡೆಯುವವರ ಮೇಲೆ ಕೋಪಗೊಂಡಿರಬಹುದೇ?

ಜನತಾದಳದ ಭಿನ್ನಮತೀಯರು, ಲೋಕಶಕ್ತಿಯವರು ಆಗಾಗ ತರಲೆ ಮಾಡೋದ ನೋಡಿ ರೋಸಿ ಹೋಗಿರಬಹುದೇ?

ಕೊಜೆಂಟ್ರಿಕ್ಸ್ ಯೋಜನೆ ಮಾಡಿ 'ಪವರು ಫುಲ್ಲು' ಆಗುವುದಕ್ಕೆ ತೊಂದರೆ ಮಾಡುತ್ತಿರುವ ಜಾಗತೀಕರಣ-ವಿರೋಧಿಗಳ ಕೊರೆತ ಕೇಳಿ ತಲೆ ಕೆಟ್ಟಿರಬಹುದೇ?

ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಸ್ಯ ಪ್ರಜ್ಞೆ ಉಳ್ಳವರು. ಹಾಗೆಲ್ಲ ಸುಮ್ ಸುಮ್ನೆ ತಾಳ್ಮೆ ಕಳೆದುಕೊಂಡು ಇಂಗ್ಲೀಷಿನಲ್ಲಿ ಬೈಯ್ಯುವವರಲ್ಲ. ಅದೂ ಹಾಡುಹಗಲಲ್ಲೇ!.

'ಎಲೈ ರಾಜನೇ! ಮುಖ್ಯಮಂತ್ರಿಗಳು 'ಈಡಿಯಟ್ಸ್....' ಎಂದು ಯಾರಿಗೆ ಬೈದಿದ್ದು. ಅದಕ್ಕೆ ಮೂಲ ಕಾರಣವೇನು? ಎಂಬ ಬಗ್ಗೆ ಸಮಾಧಾನಕರ ಉತ್ತರ ಹೇಳದಿದ್ದಲ್ಲಿ ನಿನ್ನ ತಲೆ ಸಾವಿರ ಹೋಳಾಗುವುದರಲ್ಲಿ ಆಶ್ಚರ್ಯವಿಲ್ಲ' ಎಂದು ಸಿಟಿ ಮಾರ್ಕೆಟ್‌ನ ಬಳಿ ಬರುತ್ತಿದ್ದಂತೆ ಮೌನವಾಯಿತು.

ರಾಜಾ ತ್ರಿವಿಕ್ರಮನು ತನ್ನ ಹಳೇ ಕತ್ತಿ ಝಳಪಿಸುತ್ತಾ ಗಹಗಹಿಸಿ ನಕ್ಕು 'ಎಲೈ ಬೇತಾಳವೇ, ನಿನಗೆ ಇಷ್ಟು ಗೊತ್ತಿಲ್ಲವೇ? ನೀನು ಹೇಳಿದ ಕಾರಣವಲ್ಲದ್ದರಿಂದ ಅವರು ಸ್ವಲ್ಪ ಸ್ವಲ್ಪವೇ ತಾಳ್ಮೆ, ಹಾಸ್ಯ ಪ್ರಜ್ಞೆ, ಪ್ರಜ್ಞೆ ಕಳೆದುಕೊಂಡಿರಬಹುದು. ಆದರೆ ಅಷ್ಟಕ್ಕೆ ಹಾಡುಹಗಲಲ್ಲೇ ಇಂಗ್ಲೀಷಿನಲ್ಲಿ ಬಯ್ಯಲು ಸಾಧ್ಯವಿಲ್ಲ.

ಅವರು 'ಈಡಿಯಟ್ಸ್....' ಅಂತ ಬೈದಿರುವುದು ಬಿಜೆಪಿ ಮತ್ತು ಕಾಂಗ್ರೆಸ್ ನವರನ್ನು. ಅದೂ ಉತ್ತರಪ್ರದೇಶದ ಬಿಜೆಪಿ, ಕಾಂಗ್ರೆಸ್‌ನವರನ್ನು, ಯಾಕೆ ಅಂತ ಕೇಳುವಂತವನಾಗು.

ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ಸಿಗರು, ಬಿಜೆಪಿನವರು ಸೇರ್ರಿ ಸರ್ಕಾರ ರಚಿಸಿದ್ದು, ಈಗ ಅದೇ 'ಡ್ರಾಮಾ' ವನ್ನು ದಿಲ್ಲಿಯಲ್ಲೂ ನಡೆಸಲು 'ರಿಹರ್ಸಲ್' ಮಾಡುತ್ತಿರುವುದು ನಿನಗೆ ಗೊತ್ತಿದೆಯಷ್ಟೆ. ಇದರಿಂದ ಸಂಯುಕ್ತರಂಗದ ಕೇಂದ್ರ ಸರ್ಕಾರಕ್ಕೆ ಹೊಸ ಅಪಾಯ ಉಂಟಾಗಿರುವುದೂ ಗೊತ್ತಷ್ಟೆ. ಆದ್ದರಿಂದ ನಮ್ಮ ಮುಖ್ಯಮಂತ್ರಿಗಳಂತಹ ಪ್ರಮುಖ ನಾಯಕರು ಈ ಅಪಾಯ ಎದುರಿಸಲು ಸಜ್ಜಾಗಿರಬೇಕು. ಅವರು ಮೊದಲು ಪ್ಲಾನ್ ಹಾಕಿದಂತೆ ಎರಡು ವಾರದ ಫಾರಿನ್ ಟೂರ್ ಹೋಗುವುದು ಬೇಡ ಎಂದರಂತೆ ದಿಲ್ಲಿ ಹೈಕಮಾಂಡ್. ಇಂತಹ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳಿಗೆ ಬಿಜೆಪಿ, ಕಾಂಗ್ರೆಸ್ಸಿಗರ ಮೇಲೆ ಸಾತ್ವಿಕ ರೋಷ ಬರುವುದೂ, ಹಗಲಲ್ಲೇ ಅವರಿಗೆ ಇಂಗ್ಲೀಷಿನಲ್ಲಿ ಬೈಯ್ಯುವುದು ಸರಿಯಾಗಿಯೇ ಇದೆ" ಎಂದು ರಾಜ ತ್ರಿವಿಕ್ರಮನು ಸಮಾಧಾನಕರ ಉತ್ತರಕೊಡುತ್ತಲೇ ಬೇತಾಳ "ಭಲೇ ರಾಜನೇ, ನೀನು ಸಮಾಧಾನಕರ ಉತ್ತರವನ್ನೇನೋ ಕೊಟ್ಟೆ. ಆದರೆ ನಿನ್ನ ಮೌನ ಮುರಿಯಿತು. ಇಗೋ ನಾನು ಚಿಕ್ಕಪೇಟೆಗೆ ಹೊರಟೆ" ಎಂದು ಮಾಯವಾಯಿತು.

KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ ಎಸ್.ಆರ್.ನಗರ, ಬೆಂ.27